2. ವಿತ್ತೀಯ ಕಾರ್ಯಕಲಾಪಗಳು

ವಿಷಯ:– 2014–15ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ಅನುದಾನ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಸುಮಾರು 15–17 ವರ್ಷಗಳ ನಂತರ ಇಲಾಖಾವಾರು ಬೇಡಿಕೆಗಳ ಮೇಲೆ ಚರ್ಚೆ ಮಾಡಿ, ಅದಕ್ಕೆ ಇಲಾಖೆಯ ಸಂಬಂಧಪಟ್ಟವರಿಂದ ಉತ್ತರ ಕೊಡುವಂಥ ನಮ್ಮ ಸದನದ ಹಿಂದಿನ ಸಂಪ್ರದಾಯಕ್ಕೆ ಈ ವರ್ಷ ಮತ್ತೆ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಯವರು ಪುನರ್ಜನ್ಮ ಕೊಟ್ಟಿರತಕ್ಕಂಥದ್ದು ನಮ್ಮ ಆಡಳಿತ ವ್ಯವಸ್ಥೆಯನ್ನು ಸರಿದಾರಿಗೆ ತರುವಂಥ ಒಂದು ಹೆಜ್ಜೆ ಎಂದು ನಾನು ಭಾವಿಸಿದ್ದೇನೆ. ಇಲಾಖೆಯ ಮೇಲೆ ಚರ್ಚೆಯಾದಾಗ ಇಲಾಖೆಯ ಮಂತ್ರಿಗಳೂ ಸಹ ಅದಕ್ಕೆ ಉತ್ತರ ಕೊಟ್ಟರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಸದನಕ್ಕೆ ನಿಜವಾಗಿ ಅರ್ಥ ಬರುತ್ತದೆ. ಇದು ಬಹಳ ವರ್ಷಗಳಿಂದ ನಿಂತು ಹೋಗಿದ್ದಂಥ ಸಂಪ್ರದಾಯ. ಮೊದಲು ತಾವು ಅಧ್ಯಕ್ಷರಾಗಿದ್ದ ದಿನ ನೀವು ಹಳೆಯ ಜಾಯಮಾನದ ಜೊತೆಗೆ ನಮ್ಮಂಥವರಿಗೆ ಕೊಂಡಿಯಾಗಿರತಕ್ಕಂಥವರು ಎಂದು ನಾನು ಹೇಳಿದ್ದೆ. ಹಾಗಾಗಿ, ನಮಗೆ ಸದನದ ನಿಜವಾದ ಸಂಪ್ರದಾಯವನ್ನು ಪರಿಚಯ ಮಾಡಿಕೊಡುವುದರ ಜೊತೆಗೆ ಆಡಳಿತ ಯಂತ್ರವನ್ನು ಹಳಿ ಮೇಲೆ ತರುವ ಒಂದು ಕೆಲಸ ಏನು ಮಾಡಿದೆ, ಅದರಿಂದ ಪ್ರಜಾಪ್ರಭುತ್ವಕ್ಕೂ ಅರ್ಥ ಬಂದಿದೆ, ಈ ಸದನದ ಕಾರ್ಯಕಲಾಪಗಳಿಗೂ ಸಹ ಅರ್ಥ ಬಂದಿದೆ. ಆರಂಭದಲ್ಲಿಯೇ ಕೃಷಿ ವಿಚಾರವಾಗಿದ್ದರಿಂದ ಬಹಳ ಜನ ಸದಸ್ಯರು ಬಹಳಷ್ಟು ಮಾತನಾಡಿದ್ದಾರೆ. ಇದೇ ಉತ್ಸಾಹ ಇನ್ನೂ ಸುಮಾರು 20–30 ವಿಚಾರಗಳೇನಿವೆ, ಎಲ್ಲದರಲ್ಲೂ ಅದೇ ರೀತಿ ಇರಲಿ ಎಂದು ನಾನು ಆಶಿಸುತ್ತೇನೆ.

ಅಧ್ಯಕ್ಷರು:– ನಿಜ. ನೋಡಿ ಎಷ್ಟು ಜನ ಖಾಲಿ ಇದ್ದಾರೆ ಪಾಪ?

ಶ್ರೀ ಕೃಷ್ಣ ಬೈರೇಗೌಡ:– ಆಗ ನಿಜವಾಗಿ ನಿಮ್ಮ ಪ್ರಯತ್ನಕ್ಕೆ ಅರ್ಥ ಬರುತ್ತದೆ.

ಅಧ್ಯಕ್ಷರು:– Thank you.

ಶ್ರೀ ಕೃಷ್ಣ ಬೈರೇಗೌಡ:– ಆಮೇಲೆ 5 ವಾರಗಳ ಸದನ ಎಂದರೆ ಎಷ್ಟು ವರ್ಷವಾಗಿತ್ತೋ ನನಗಂತೂ ಜ್ಞಾಪಕವಿಲ್ಲ. ಬೇರೆ ಸಂದರ್ಭದಲ್ಲಿ ಅಧಿವೇಶನ ಕರೆದಾಗ 2 ವಾರ ಇರುತ್ತಿತ್ತು, ಮಾತನಾಡಲಿಕ್ಕೆ ನೂಕುನುಗ್ಗಲು, ಅದರಲ್ಲಿ ಸಮಯ ಸಾಲುವುದಿಲ್ಲ ಹಾಗೂ ಸರಿಯಾಗಿ ಉತ್ತರ ಕೊಡುವುದಕ್ಕೂ ಸಮಯ ಇರುವುದಿಲ್ಲ ಎಂದು ಆಗುತ್ತಿತ್ತು. ಈ ಬಾರಿ ಅದೆಲ್ಲಕೂ ಸಹ ಬದಲಾವಣೆಯನ್ನು ಮಾಡಿರತಕ್ಕಂಥದ್ದು ಸ್ವಾಗತ. ತಮಗೂ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ನಾನು ಸಲ್ಲಿಸುತ್ತೇನೆ.

ಅಧ್ಯಕ್ಷರು:– Thank you. Very good.

ಶ್ರೀ ಕೃಷ್ಣ ಬೈರೇಗೌಡ:– ಕೃಷಿ ಬಗ್ಗೆ ಅನೇಕ ಹಿರಿಯರು, ಯುವಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯರಾದ ಬಸವರಾಜ ಬೊಮ್ಮಾಯಿಯವರು, ಪಿ. ರಾಜೀವ್‌ರವರು, ಜೆ.ಟಿ. ಪಾಟೀಲರು, ಪ್ರಸನ್ನಕುಮಾರ್‌ರವರು, ಶಿವಮೂರ್ತಿ ನಾಯಕ್‌ರವರು, ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಸಿ.ಟಿ. ರವಿಯವರು, ವಡ್ನಾಳ್ ರಾಜಣ್ಣರವರು, ಶಿವಲಿಂಗೇಗೌಡರವರು, ಮಾನ್ಯ ರಮೇಶ್‌ಕುಮಾರ್‌ರವರು, ಗೋವಿಂದ ಕಾರಜೋಳರವರು, ಪುಟ್ಟಣ್ಣಯ್ಯನವರು, ಪ್ರಮೋದ್ ಮಧ್ವರಾಜ್‌ರವರು, ಜಿ.ಟಿ. ದೇವೇಗೌಡರವರು, ಬಿ.ಆರ್. ಪಾಟೀಲ್‌ರವರು ಮಧ್ಯ ಪ್ರವೇಶ ಮಾಡಿದ್ದರು ಮತ್ತು ಪ್ರತ್ಯೇಕವಾಗಿಯೂ ಸಹ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೂ ಇತರರೂ ಸಹ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರ ಸಲಹೆಗಳಿಗೆ ನಾನು ಅವರಿಗೆ ಧನ್ಯವಾದಗಳನ್ನು ಸಹಾ ತಿಳಿಸಲಿಕ್ಕೆ ಬಯಸುತ್ತೇನೆ. ಅದರಲ್ಲಿ ಸಾಕಷ್ಟು ವಿಚಾರಗಳು ನನ್ನ ಇಲಾಖೆಗೆ ಸಂಬಂಧಪಟ್ಟಂಥವು ಇದ್ದವು. ಇನ್ನು ಕೆಲವು ವಿಚಾರಗಳು ಇತರೆ ಇಲಾಖೆಗಳಿಗೆ ಹೊಂದಿದಂಥ ವಿಚಾರಗಳನ್ನೂ ಸಹ ಅವರು ಮಾತನಾಡಿದ್ದಾರೆ. ಸ್ವಲ್ಪ ಹೆಚ್ಚಿನ ಸಹಕಾರ ಇಲಾಖೆಗೆ

ಬರತಕ್ಕಂಥ ಸಾಲ–ಸೋಲ ವ್ಯವಸ್ಥೆ ಏನಿದೆ, ಅದರ ಬಗ್ಗೆಯೂ ಸಹ ಹೇಳಿದ್ದಾರೆ. ಇತರೆ ಇಲಾಖೆಗಳ ಬಗ್ಗೆಯೂ ಮಾತನಾಡಿದ್ದಾರೆ. ಒಟ್ಟಾರೆ ಸರ್ಕಾರದ ಪರವಾಗಿ ನಾನು ಅವರೆಲ್ಲರಿಗೂ ಸಹ ಧನ್ಯವಾದಗಳನ್ನು ಹೇಳುತ್ತೇನೆ. ಕೃಷಿ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಸುಮಾರು ಜನ, 2–3 ಸಾವಿರ ಕೋಟಿ ರೂಪಾಯಿ ಎಲ್ಲಿಗೆ ಸಾಲುತ್ತದೆ ಎನ್ನುವ ವಿಚಾರವನ್ನು ಹೇಳಿದರು. ಅದರ ಹಿನ್ನೆಲೆಯಲ್ಲಿ ನಾನು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡುವಂಥದ್ದು ಏನೆಂದರೆ, ಕೃಷಿ ಇಲಾಖೆಯ ವ್ಯಾಪ್ತಿ ಏನಿದೆ, ತಂತ್ರಜ್ಞಾನ ವರ್ಗಾವಣೆ, ಸಮಯಕ್ಕೆ ಸರಿಯಾಗಿ ಬೇಕಾದಂಥ ಬೀಜ, ಸಾಮಗ್ರಿಗಳನ್ನು ಒದಗಿಸತಕ್ಕಂಥದ್ದು ಈ ರೀತಿಯ ಕಾರ್ಯ ವ್ಯಾಪ್ತಿಯನ್ನು ಹೊಂದಿದೆ ಇನ್ನೂ ಇವೆ. ಅಷ್ಟೇ ಅಲ್ಲ. ಇನ್ನೂ ಬೇರೆ ಕಾರ್ಯ ವ್ಯಾಪ್ತಿ ಇದೆ. ಆದರೆ, ಕೃಷಿಗೆ ಸಂಬಂಧಪಟ್ಟಂಥದ್ದು ನಮ್ಮದೊಂದೇ ಇಲಾಖೆಯಲ್ಲ ಹಾಗೂ ಕೃಷಿಗೆ ಸಂಬಂಧಪಟ್ಟಹಾಗೆ ಆಯವ್ಯಯದಲ್ಲಿ ನಮಗೇನು ಕೊಟ್ಟಿದ್ದಾರೆ, ಅದಷ್ಟೇ ರೈತರಿಗೆ ಕೊಟ್ಟಿರತಕ್ಕಂಥದ್ದು ಅಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಕೃಷಿ ಇಲಾಖೆಯಲ್ಲಿ ತೋಟಗಾರಿಕೆ ಇಲಾಖೆ ಇದೆ, ರೇಷ್ಮೆ ಇಲಾಖೆ ಇದೆ, ಪಶು ಸಂಗೋಪನೆ ಇದೆ, ನೀರಾವರಿ ಇಲಾಖೆ ಇದೆ, ಸಣ್ಣ ನೀರಾವರಿ ಇಲಾಖೆ ಇದೆ, ಸಹಕಾರ ಇಲಾಖೆ ಇದೆ, ಕೃಷಿ ಮಾರುಕಟ್ಟೆ ಇಲಾಖೆ ಇದೆ ಹಾಗೂ ಇಂಧನ ಇಲಾಖೆ ಇದೆ. ಇಂಧನ ಇಲಾಖೆ ಒಂದರಲ್ಲಿಯೇ 7400 ಕೋ.ರೂ. ರೈತರಿಗೆ, ವಿದ್ಯುತ್ತಿಗೆ ಉಚಿತವಾಗಿ ಕೊಡಲಿಕ್ಕೆ ಸರ್ಕಾರ ಕೊಡುತ್ತಿರುವ ಸಹಾಯಧನ. 7400 ಕೋ.ರೂ. ಅದೊಂದೇ ಇಲಾಖೆಯಿಂದ. ಹಾಗಾಗಿ, ಕೇವಲ 2–3 ಸಾವಿರ ಕೋ.ರೂ. ಅಷ್ಟೇ ರೈತರಿಗೆ ಕೊಡುತ್ತಿರುವ ಅನುದಾನವಲ್ಲ. ನೀರಾವರಿಗೆ ನಮ್ಮ ಸರ್ಕಾರ ಪ್ರತಿ ವರ್ಷ 10 ಸಾವಿರ ಕೋ.ರೂ.ಗಳನ್ನು ಖರ್ಚು ಮಾಡಬೇಕು, ನಮ್ಮ ಸರ್ಕಾರದ ಅವಧಿಯಲ್ಲಿ 50 ಸಾವಿರ ಕೋಟಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದೂ ಸಹ ರೈತರ ಅನುಕೂಲಕ್ಕಾಗಿಯೇ. ಹೀಗೆ ಇತರೆ ಇಲಾಖೆಗಳ ಮುಖಾಂತರವೂ ಸಹ ರೈತರಿಗೆ ಅನುಕೂಲವಾಗತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ

ಎನ್ನುವುದನ್ನು ಸಹ ಪೂರಕವಾಗಿ, ಪ್ರಾಸ್ತಾವಿಕವಾಗಿ ನಾನು ಹೇಳಬಯಸುತ್ತಿದ್ದೇನೆ. ಉಳಿದಹಾಗೆ, ಕಳೆದ ವರ್ಷ ನಮ್ಮ ಇಲಾಖೆ ವತಿಯಿಂದ ರೈತರಿಗೆ ಸಮಯಕ್ಕೆ ಸರಿಯಾಗಿ ಗೊಬ್ಬರ ಒದಗಿಸತಕ್ಕಂಥದ್ದು, ಬಿತ್ತನೆ ಬೀಜಗಳನ್ನು ಒದಗಿಸತಕ್ಕಂಥದ್ದು ಆ ವ್ಯವಸ್ಥೆಯನ್ನು ಕಳೆದ ವರ್ಷವೂ ಸಮರ್ಪಕವಾಗಿ ಮಾಡಿದ್ದೇವೆ ಎನ್ನುವುದನ್ನೂ ಸಹ ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಎಲ್ಲಿಯೂ ಸಹ ದೊಡ್ಡ ಪ್ರಮಾಣ ಗೊಬ್ಬರದ ಕೊರತೆಯಾಯಿತು, ಬಿತ್ತನೆ ಬೀಜದ ಕೊರತೆಯಾಯಿತು ಎನ್ನುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಆ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ವರ್ಷವೂ ಸಹ ಅದಕ್ಕೆ ಬೇಕಾದ ತಯಾರಿಗಳನ್ನು ಸಹ ನಾವು ಈಗಾಗಲೇ ಮಾಡಿಕೊಂಡಿದ್ದೇವೆ. ಈ ವರ್ಷವೂ ರಸಗೊಬ್ಬರಕ್ಕಾಗಲಿ ಬಿತ್ತನೆ ಬೀಜಕ್ಕಾಗಲಿ ಯಾವುದೇ ಕೊರತೆ ಬಾರದ ಹಾಗೆ ನಾವು ನೋಡಿಕೊಳ್ಳುತ್ತೇವೆ, ಅದಕ್ಕೆ ಬೇಕಾದಂಥ ಎಲ್ಲಾ ಪ್ರಯತ್ನಗಳನ್ನು ಸರ್ಕಾರ ಮಾಡುತ್ತದೆ ಎಂದು ನಾನು ಸದನಕ್ಕೆ ಭರವಸೆ ಕೊಡಲಿಕ್ಕೆ ಬಯಸುತ್ತೇನೆ. ಆದರೆ, ಮುಂಗಾರು ಮೇ ತಿಂಗಳಿನಲ್ಲಿ ವಾಡಿಕೆಗಿಂತ ಹೆಚ್ಚಾಗಿದೆ. ಆ ಸಂದರ್ಭದಲ್ಲಿ ವಾಡಿಕೆಗಿಂತಲೂ ಹೆಚ್ಚು ಬಿತ್ತನೆಯಾಗಿದೆ. ಜೂನ್ ನಲ್ಲಿ ವಾಡಿಕೆಗಿಂತ ಬಹಳ ಕಡಿಮೆ ಮಳೆಯಾಗಿ ಸ್ವಲ್ಪ ಈಗ ಆತಂಕದ ಪರಿಸ್ಥಿತಿಯಲ್ಲಿದ್ದೇವೆ. ಜುಲೈ ಮೊದಲ ವಾರದಲ್ಲಿ ಸಾಕಷ್ಟು ಮಳೆಯಾಗುತ್ತದೆನ್ನುವ ಮುನ್ಸೂಚನೆಗಳಿವೆ. ಮಳೆಯಾದರೆ ಬಿತ್ತನೆಯಾಗಿರುವ ಸಾಕಷ್ಟು ಬೆಳೆಗಳು ಕೂಡ ಉಳಿದುಕೊಳ್ಳುತ್ತದೆ. ಬಿತ್ತನೆಗೆ ಬಾಕಿ ಇರತಕ್ಕಂಥದ್ದು ಸಹ ಮಳೆ ಬಂದ ಮೇಲೆ ಬಿತ್ತನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಈ ವರ್ಷದ ಕೃಷಿ ಚಟುವಟಿಕೆಗಳ ಒಂದು ಚಿತ್ರಣ. ಮೇ ತಿಂಗಳ ಮತ್ತು ಜೂನ್ ತಿಂಗಳ ಮೊದಲ ಭಾಗಕ್ಕೆ ಹೋಲಿಸಿದರೆ ವಾಡಿಕೆಗಿಂತಲೂ ಹೆಚ್ಚು ಬಿತ್ತನೆ ಈಗಾಗಲೇ ಆಗಿದೆ. ಆದರೆ, ಈಗ ನಾವು ಬಹಳವಾಗಿ ಮಳೆಯ ನಿರೀಕ್ಷೆಯಲ್ಲಿದ್ದೇವೆ, ಜುಲೈ ಮೊದಲ ವಾರ ಮಳೆ ಬರಬಹುದು ಎನ್ನುವ ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಕಳೆದ ವರ್ಷದಲ್ಲಿ ಬೆಳೆದಂಥ ಬೆಳೆಗಳಿಗೆ ಅದರಲ್ಲಿ ನಾವು ಸರ್ಕಾರ ರೈತರಿಗೆ ಕನಿಷ್ಠ ಉತ್ತಮ ಬೆಲೆ ಸಿಗಬೇಕೆನ್ನುವ ಹಿನ್ನೆಲೆಯಲ್ಲಿ ಯಾವ ಬೆಳೆಗಳಿಗೆ

ಉತ್ತಮ ಮಾರುಕಟ್ಟೆ ವ್ಯವಸ್ಥೆ ಆಗಲಿಲ್ಲ, ಯಾವ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿತ್ತು, ಅಂಥವುಗಳನ್ನು ಕಳೆದ ವರ್ಷದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ರೈತರಿಂದ ನಾವು ನೇರವಾಗಿ ಖರೀದಿಸಿದ್ದೇವೆ. ಇದರಲ್ಲಿ ಮೇಕ್ಕೆಜೋಳ ಇರಬಹುದು, ಭತ್ತ ಇರಬಹುದು, ಶೇಂಗಾ ಅಗಬಹುದು, ತೊಗರಿ ಆಗಬಹುದು, ಕೊಬ್ಬರಿ ಆಗಬಹುದು, ಹೀಗೆ ಅನೇಕ ಉತ್ಪನ್ನಗಳನ್ನು ರೈತರಿಂದ ನಾವು ನೇರವಾಗಿ ಖರೀದಿಸಿದ್ದೇವೆ. ಸುಮಾರು 83.41 ಲಕ್ಷ ಕ್ವಿಂಟಾಲ್‌ನಷ್ಟು ಉತ್ಪನ್ನಗಳನ್ನು ರೈತರಿಂದ ಕಳೆದ ವರ್ಷ ನೇರವಾಗಿ ಖರೀದಿಸಿದ್ದೇವೆ. ರೈತರಿಂದ ನೇರವಾಗಿ ಖರೀದಿ ಮಾಡುವುದಕ್ಕಾಗಿದೆಯೇ ಸರ್ಕಾರ 1,700/- ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದೇವೆ. ನನಗೆ ಇರುವ ಮಾಹಿತಿ ಪ್ರಕಾರ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕರ್ನಾಟಕದ ಇತಿಹಾಸದಲ್ಲಿ ರೈತರಿಂದ ನೇರವಾಗಿ ಖರೀದಿ ಮಾಡತಕ್ಕಂಥದ್ದು ಆಗಿರಲಿಲ್ಲ. ಇದಕ್ಕೆ ಬೇರೆ ಏನಾದರೂ ಮಾಹಿತಿ ಇದ್ದರೆ I will stand corrected but ನನಗಿರುವ ಮಾಹಿತಿ ಪ್ರಕಾರವಾಗಿ ಇದಕ್ಕಾಗಿಯೇ ಅತಿ ಹೆಚ್ಚಿನ ಹಣವನ್ನು ಮೀಸಲಿಟ್ಟು 1,700/- ಕೋಟಿ ರೂಪಾಯಿಗಳ ವೆಚ್ಚದಲ್ಲಿ ರೈತರಿಂದ ಉತ್ಪನ್ನಗಳನ್ನು ಖರೀದಿಸಿದ್ದೇವೆ. ಕೆಲವರು ಆವರ್ತ ನಿಧಿಯ ಬಗ್ಗೆ ಮಾತನಾಡಿದರು. ಆವರ್ತ ನಿಧಿಯನ್ನು ಮೀರಿ ನಾವು ಹಣವನ್ನು ಇದಕ್ಕಾಗಿ ವ್ಯಯ ಮಾಡಿದ್ದೇವೆ. ಆವರ್ತ ನಿಧಿಗೆ ಅಷ್ಟಕ್ಕೆ ನಾವು ಸೀಮಿತರಾಗಿಲ್ಲ. ಆವರ್ತ ನಿಧಿ ಬಹುಶಃ ಜನವರಿ ತಿಂಗಳಲ್ಲಿಯೇ ಖಾಲಿ ಆಯಿತು. ಅದು ಖಾಲಿ ಆಗಿದೆ ಎಂದು ನಾವು ಎಲ್ಲಿಯೂ ಸಹ ನಿಲ್ಲಿಸಲಿಕ್ಕೆ ಹೋಗಲಿಲ್ಲ. ಆವರ್ತ ನಿಧಿ ಖಾಲಿಯಾದ ಮೇಲೆ ಅದಕ್ಕೆ ಪರ್ಯಾಯವಾಗಿ ಹಣವನ್ನು ಕ್ರೋಢೀಕರಿಸಿ ಕೆಲವು ಸಂದರ್ಭದಲ್ಲಿ ನಮ್ಮದೇ ಸಂಸ್ಥೆಯಾದ ಅಪೆಕ್ಸ್ ಬ್ಯಾಂಕ್‌ನಿಂದ ಹಣವನ್ನು ತೆಗೆದುಕೊಂಡು ರೈತರಿಂದ ಖರೀದಿ ಮಾಡಿದ್ದೇವೆ. ತೊಗರಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಯಿತು ಇದಕ್ಕೆ ಏನು ಕಾರಣ ಎಂದರೆ, ಚುನಾವಣಾ ನೀತಿಸಂಹಿತೆ ಅಡ್ಡ ಬಂದಿದ್ದರಿಂದ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದು ಬಿಟ್ಟರೆ ಇಷ್ಟೊಂದು ಗರಿಷ್ಠ ಪ್ರಮಾಣದಲ್ಲಿ ಮೊದಲ ಬಾರಿಗೆ ಸರ್ಕಾರ ರೈತರ

ಪರವಾಗಿ ನೇರವಾಗಿ ಖರೀದಿಸಿದೆ ಎನ್ನುವುದನ್ನು ಸಹ ನಾನು ಸದನಕ್ಕೆ ಗಮನಕ್ಕೆ ತರಬಯಸುತ್ತೇನೆ.

ಇನ್ನು ಕೆಲವು ವಿಸ್ತೃತವಾದ ವಿಚಾರಗಳ ಬಗ್ಗೆ ಮಾನ್ಯ ಅನೇಕ ಸದಸ್ಯರು ಮಾತನಾಡಿದ್ದಾರೆ. ಕೆಲವು ಪಾಯಿಂಟ್ ವಿಚಾರಗಳ ಬಗ್ಗೆ ನಂತರ ಬರುತ್ತೇನೆ, ಈಗ ವಿಸ್ತೃತವಾದ ವಿಚಾರಗಳ ಬಗ್ಗೆ ಒಂದೆರಡು ವಿಚಾರಗಳ ಬಗ್ಗೆ ಮಾತನಾಡುತ್ತೇನೆ. ಕೃಷಿಯಿಂದ ರೈತರು ವಿಮುಖರಾಗುತ್ತಿದ್ದಾರೆ, ನಗರೀಕರಣವಾಗುತ್ತಿದೆ, ಹೀಗೆ ಅನೇಕ ಸದಸ್ಯರು ತಮ್ಮ ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ನನಗೆ ಸ್ವಲ್ಪ ಇತಿಹಾಸದಲ್ಲಿ ಅಭಿರುಚಿ. ಇತಿಹಾಸವನ್ನು ಆದಷ್ಟು ತಿಳಿದುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತೇನೆ. ನಮ್ಮ ಭಾರತ ದೇಶದ ಇತಿಹಾಸದಲ್ಲಿ ನೋಡಿದರೆ, ಒಂದು ಕಡೆ ನಮಗೆ ಸಿಂಧೂ ಕಣಿವೆ ನಾಗರೀಕತೆ ಏನಿತ್ತು, (Indus valley civilization) Harappa and Mahenjo-daro civilization, ಇದರ ಬಗ್ಗೆ ನಾವು ನಮಗೆ ಇರುವ ದಾಖಲೆಗಳು ಸಿಕ್ಕಿರತಕ್ಕಂಥ ಪುರಾತನ ಕುರುಹುಗಳನ್ನು ನೋಡಿದಾಗ, ಆ ಕಾಲದಲ್ಲಿ ಆಗಿದ್ದಂತಹ ನಗರೀಕರಣ ಇವತ್ತಿಗೂ ಸಹ ಅಷ್ಟು ನಗರೀಕರಣ ನಮ್ಮಲ್ಲಿ ಆಗಿಲ್ಲ. ಹಾಗೆಂದ ಮಾತ್ರಕ್ಕೆ ನಾನು ಅದನ್ನು ಸಮಜಾಯಿಷಿ ಮಾಡುತ್ತೇನೆಂದು ತಿಳಿಯಬೇಡಿ. ಏಕೆಂದರೆ, ನಾವು ಏನಾದರೂ ಹೇಳಿದರೆ ಅದಕ್ಕೆ ಇನ್ನೊಂದು ಹುಡುಕುವುದರಲ್ಲಿ ನಾವು ಎಲ್ಲರೂ ಬಹಳ ಕಾತುರರಾಗಿರುತ್ತೇವೆ. ನಮ್ಮ ಇತಿಹಾಸವನ್ನು ನಾನು ಮತ್ತೆ ಪುನರಾಲೋಕನ ಮಾಡುತ್ತಿದ್ದೇನಷ್ಟೆ. ಅಂದು Harappa and Mahenjo-daro 5 ಸಾವಿರದಿಂದ 15 ಸಾವಿರ ಜನ ವಾಸ ಮಾಡತಕ್ಕಂಥದ್ದು ಎಂದರೆ, ಆ ದಿನಗಳಲ್ಲಿ ಅಂದರೆ ಕ್ರಿಸ್ತ ಪೂರ್ವ 2600 ವರ್ಷಗಳ ಹಿಂದೆ ಅಷ್ಟು ದೊಡ್ಡ ನಗರಗಳು ಪ್ರಪಂಚದಲ್ಲಿಯೇ ಇರಲಿಲ್ಲ. ಸಿಂಧೂ ಕಣಿವೆ ನಾಗರೀಕತೆ ಏನಿತ್ತು, ಅದೊಂದು ನಗರ ಆಧಾರಿತ ನಾಗರೀಕತೆಯಾಗಿತ್ತು, ಹಾಗೆಂದ ಮಾತ್ರಕ್ಕೆ ಅದು ಆಗಬೇಕೆಂದು ನಾನು ಹೇಳುತ್ತಿಲ್ಲ. ಇತಿಹಾಸದ ಒಂದು ತುಣುಕನ್ನು ನಾನು ಹೇಳುತ್ತಿದ್ದೇನಷ್ಟೆ.

ಶ್ರೀ ಬಿ.ಆರ್. ಪಾಟೀಲ್:- ತಾವು ಹೇಳುವಾಗ ಯಾವ ಕಾರಣಕ್ಕಾಗಿ ನಗರೀಕರಣವಾಯಿತು ಎಂದು ಹೇಳಿದರೆ ಒಳ್ಳೆಯದು.

ಶ್ರೀ ಕೃಷ್ಣ ಭೈರೇಗೌಡ:- ಈಗ ಆ ವಿಚಾರ ಬೇಡ. ನಾನು ಈಗ ಕೃಷಿಯ ಬಗ್ಗೆ ಮಾತನಾಡುತ್ತಿದ್ದೇನೆ. ಅದನ್ನು ಬೇಕಾದರೆ ಇನ್ನೊಂದು ಸಂದರ್ಭದಲ್ಲಿ ಚರ್ಚೆ ಮಾತನಾಡೋಣ. ಆದರೆ ಇವತ್ತು ಆ ದಿಕ್ಕಿನಲ್ಲಿ ಹೋದರೆ ಮತ್ತೆ ಈ ದಿಕ್ಕಿಗೆ ಬರುವುದು ಕಷ್ಟ.

ಶ್ರೀ ಬಿ.ಆರ್. ಪಾಟೀಲ್:- ತಾವು ಸಿಂಧೂ ನಾಗರೀಕತೆಯ ಬಗ್ಗೆ ಹೇಳಿದಿರಿ, ಆ context ಗೂ ಈ context ಗೂ ಏನು ಸಂಬಂಧ ಎನ್ನುವುದನ್ನು ತಾವು ಹೇಗೆ ಸಮರ್ಥನೆ ಮಾಡುತ್ತೀರಿ?

ಶ್ರೀ ಕೃಷ್ಣ ಭೈರೇಗೌಡ:- ನಾನು ಹೇಳುತ್ತೇನೆ. ನಗರೀಕರಣದ ಬಗ್ಗೆ ನಾವು ಆತಂಕ ಇಟ್ಟುಕೊಳ್ಳಬೇಕಾಗಿಲ್ಲ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಇತಿಹಾಸದ ಕಾಲಚಕ್ರದಲ್ಲಿ ಇವೆಲ್ಲಾ ಆಗುತ್ತಿರುತ್ತವೆ. ಕೃಷಿ ಒಂದು ಅಲ್ಲಿಂದ ಅಲ್ಲಿಗೆ ನಡೆದುಕೊಂಡು ಹೋಗತಕ್ಕಂಥ ಚಟುವಟಿಕೆಯಾಗಿ ಶತಮಾನಗಳಿಂದ ಬಂದಿದೆ. ಅಂದರೆ ನಾವೇನು subsistence farming ಎಂದು ಏನು ಕರೆಯುತ್ತೇವೆ, subsistence agriculture, ಅದರಲ್ಲಿಯೂ ನಮ್ಮ ದೇಶದಲ್ಲಿಯೇ ಅಲ್ಲ ಬೇರೆ ದೇಶಗಳಲ್ಲಿಯೂ ಸಹ subsistence agriculture, ಶತಶತಮಾನಗಳಿಂದ ಇದ್ದಂಥದ್ದು. ಆದರೆ, ನಾವು ಯಾವಾಗ ಆ subsistence agriculture, ನಿಂದ ಆದಾಯಕ್ಕಾಗಿ ಕೃಷಿಯ ಕಡೆಗೆ ತೇರ್ಗಡೆಯಾಗುತ್ತೇವೆ, ಆಗ ಕೃಷಿಯಿಂದ ಜನಸಂಖ್ಯೆ ಬೇರೆ ಕಡೆಗೆ ವರ್ಗವಾಗತಕ್ಕಂಥದ್ದು ಸಹಜ. ಇದು ನಮ್ಮ ದೇಶದಲ್ಲಿ ಅಲ್ಲ, ಇಡೀ ಪ್ರಪಂಚದ ಪ್ರತಿಯೊಂದು ದೇಶದಲ್ಲಿ ಆಗಿರತಕ್ಕಂಥದ್ದು. ಅದರಿಂದ ತೊಂದರೆಗಳಿವೆ, ತೊಂದರೆಗಳಿಲ್ಲವೆಂದು ನಾನು ಹೇಳುತ್ತಿಲ್ಲ. ಹಾಗೆಂದು ಇಲ್ಲಿಗೆ ಮುಗಿಯಿತು ಎನ್ನುವ ಭಾವನೆ ಹೊಂದಬೇಕಾಗಿಲ್ಲ ಎನ್ನುವುದಕ್ಕಾಗಿ ನಾನು ಈ ಉದಾಹರಣೆ ಹೇಳಿದ್ದು. ಉದಾಹರಣೆಗೆ ಹೇಳುತ್ತೇನೆ, ಇಂಗ್ಲೆಂಡ್ ದೇಶದಲ್ಲಿ 1801 ರಲ್ಲಿ ನಗರೀಕೃತ ಸಂಖ್ಯೆ ಎಷ್ಟು ಎಂದರೆ ಶೇಕಡ 17 ರಷ್ಟು ಇತ್ತು. ಉಳಿದವರೆಲ್ಲರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನು ನಂಬಿಕೊಂಡಿದ್ದಂಥವರು. 1891 ರಷ್ಟೊತ್ತಿಗೆ ನಗರದಲ್ಲಿ ವಾಸ ಮಾಡತಕ್ಕಂಥವರ ಸಂಖ್ಯೆ ಶೇಕಡ 72 ರಷ್ಟಾಗಿತ್ತು. ಅದೇ ರೀತಿಯಲ್ಲಿ ನೀವು

ಯಾವ ದೇಶದ ಬಗ್ಗೆ ತೆಗೆದುಕೊಂಡರೂ ಎಲ್ಲಾ ದೇಶಗಳಲ್ಲೂ ಸಹ ಅಭಿವೃದ್ಧಿಯ ಜೊತೆ ಜೊತೆಗೆ ನಗರೀಕರಣ ಹೋಗುತ್ತದೆ. United Nations ಒಂದು ಅಧ್ಯಯನದ ಪ್ರಕಾರ 2050ನೇ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸುಮಾರು ಶೇಕಡ 64ರಷ್ಟು ನಗರೀಕೃತವಾಗಿರುತ್ತದೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಾದರೆ ಸುಮಾರು ಶೇಕಡ 86ರಷ್ಟು ನಗರೀಕೃತವಾಗಿರುತ್ತದೆ ಎನ್ನುವ ವಿಚಾರ ಇದೆ. ನೀವು ಅಮೇರಿಕಾವನ್ನೇ ಉದಾಹರಣೆಗೆ ತೆಗೆದುಕೊಂಡರೆ ಒಂದು ಕಾಲದಲ್ಲಿ ಶೇಕಡ 90 ರಷ್ಟು ಜನ ಕೃಷಿಯ ಮೇಲೆ ಅವಲಂಬಿತರಾಗಿ ಜೀವನ ಮಾಡುತ್ತಿದ್ದರು. ಅಲ್ಲಿ ಇವತ್ತು ಎಷ್ಟು ಎಂದರೆ ಶೇಕಡ 2 ರಷ್ಟು ಜನ ಕೃಷಿಯ ಮೇಲೆ ಅವಲಂಬಿತರಾಗಿ ಜೀವನ ಮಾಡುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಅವರಲ್ಲಿ ಉತ್ಪಾದನೆ ಕಡಿಮೆಯಾಗಿದೆಯೇ? ಇವತ್ತು ಅಮೇರಿಕಾ ದೇಶ ಉತ್ಪಾದನೆ ಮಾಡತಕ್ಕಂಥದ್ದು ಅಮೇರಿಕಾ ದೇಶದ ಜನಸಂಖ್ಯೆ ಏನಿದೆ, ಅದರ 2 ಅಥವಾ 3 ಪಟ್ಟು ಜನಸಂಖ್ಯೆಗೆ ಆಗುವಷ್ಟು ಉತ್ಪಾದನೆ ಮಾಡತಕ್ಕಂಥ ಸಾಮರ್ಥ್ಯವನ್ನು ಅವರು ಇಟ್ಟುಕೊಂಡಿದ್ದಾರೆ. ಇನ್ನೊಂದು ಅಧ್ಯಯನದ ಪ್ರಕಾರವಾಗಿ.. ಮಾನ್ಯ ಪಾಟೀಲ್‌ರವರೇ, ನಾನು ಹೇಳುವುದನ್ನು ತಾವು ಕೇಳಿಸಿಕೊಳ್ಳಿ. ಆನಂತರ ತಾವು ಜಡ್ಜ್‌ಮೆಂಟ್ ಮಾಡಿ. ನಾನು ಹೇಳುವುದನ್ನು ಮೊದಲು ಕೇಳಿಸಿಕೊಳ್ಳಿ. ಎರಡು ದಿನ ಈ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ನಾನು ಮಧ್ಯೆ ಪ್ರವೇಶ ಮಾಡದೆ ಕೇಳಿಸಿಕೊಂಡಿದ್ದೇನೆ. ನನ್ನಿಂದ ಏನಾದರೂ ಅಕಸ್ಮಾತ್ ಸ್ವಲ್ಪ ವ್ಯತಿರಿಕ್ತವಾಗಿದ್ದರೂ ಕೂಡ ದಯವಿಟ್ಟು ಕೇಳಿಸಿಕೊಳ್ಳಿ. ನಾನೇನು 100ಕ್ಕೆ 100 ಪರಿಪಕ್ವ ಎಂದು ಹೇಳುತ್ತಿಲ್ಲ. ನಾನು ಹೇಳುತ್ತಿರುವ ಎಲ್ಲ ವಿಷಯಗಳು ಅಂಕಿ–ಸಂಖ್ಯೆಗಳೆ ಹೊರತು ಯಾವುದನ್ನು ನಾನು ಕಲ್ಪನೆ ಮಾಡಿ ಹೇಳುತ್ತಿಲ್ಲ. 1940ರಲ್ಲಿ ಒಬ್ಬ ಕೃಷಿಕನ ಉತ್ಪಾದಕತೆ ಎಷ್ಟಿತ್ತೆಂದರೆ, ಒಬ್ಬ ಕೃಷಿಕ ಕೃಷಿ ಮಾಡಿದರೆ 19 ಜನರಿಗೆ ಅವಶ್ಯಕತೆ ಇರುವಷ್ಟು ಉತ್ಪಾದನೆ ಮಾಡತಕ್ಕಂಥ ಸಾಮರ್ಥ್ಯ ಒಬ್ಬ ಕೃಷಿಕನಿಗೆ ಇತ್ತು. ಇವತ್ತು ಒಬ್ಬ ಕೃಷಿಕ ಕೃಷಿ ಮಾಡಿದರೆ 155 ಜನಗಳಿಗೆ ಬೇಕಾಗಿರುವಷ್ಟು ಅವರ ಅವಶ್ಯಕತೆಯನ್ನು ಪೂರೈಸುವಂಥ ಸಾಮರ್ಥ್ಯ ಒಬ್ಬ ರೈತನಿಗೆ ಇದೆ. ತಂತ್ರಜ್ಞಾನ ಮತ್ತು ಮಾನವನ ಸಾಮರ್ಥ್ಯ

ಅಭಿವೃದ್ಧಿಯಾಗಿದೆ, ಹಾಗೆಯೇ ಉತ್ಪಾದಕತೆ ನಮ್ಮದು ಹೆಚ್ಚಾಗಿದೆ. ಅವತ್ತಿನ ದಿನ 19 ಜನರಿಗೆ ಅವಶ್ಯಕತೆಯನ್ನು ಪೂರೈಸುವಂಥ ಸಾಮರ್ಥ್ಯ ಒಬ್ಬ ರೈತನಿಗೆ ಇತ್ತು. ಆದರೆ, ಇವತ್ತಿನ ದಿವಸ 155 ಜನರಿಗೆ ಬೇಕಾಗುವಷ್ಟು ಪೂರೈಸುವಂಥ ಸಾಮರ್ಥ್ಯವನ್ನು ಒಬ್ಬ ರೈತ ಪಡೆದುಕೊಂಡಿದ್ದಾನೆ. 1961ರಲ್ಲಿ ಪ್ರಪಂಚದ ಜನಸಂಖ್ಯೆ 3.5 ಬಿಲಿಯನ್ ಇತ್ತು. ಅವತ್ತಿನ ದಿನ 1.37 ಬಿಲಿಯನ್ ಹೆಕ್ಟೇರ್ ನಷ್ಟು ಕೃಷಿ ಪ್ರದೇಶ ಇತ್ತು. 2011 ರಲ್ಲಿ 7 ಬಿಲಿಯನ್ ಜನಸಂಖ್ಯೆ ಪ್ರಪಂಚದಲ್ಲಿತ್ತು. ಇವತ್ತು 1.53 ಬಿಲಿಯನ್ ಹೆಕ್ಟೇರ್ ಪ್ರದೇಶ ಕೃಷಿ ಜಮೀನು ಇದೆ. ಇವತ್ತಿನ ದಿವಸ ಕೃಷಿ ಪ್ರದೇಶದಲ್ಲಿ ಶೇಕಡ 12 ರಷ್ಟು ಹೆಚ್ಚಾಗಿದೆ. ಆದರೆ ಜನಸಂಖ್ಯೆ ಸುಮಾರು 3 ಪಟ್ಟು ಜಾಸ್ತಿಯಾಗಿದೆ. ಕೃಷಿ ಪ್ರದೇಶದಲ್ಲಿ ಕೇವಲ 12% ಹೆಚ್ಚುವರಿಯಾದರೂ ಸಹ ಇವತ್ತು ಜನಸಂಖ್ಯೆಯ 3 ಪಟ್ಟು ಅದರ ಅವಶ್ಯಕತೆಯನ್ನು ಪೂರೈಸುವಂಥ ಸಾಮರ್ಥ್ಯ ಕೃಷಿ ವ್ಯವಸ್ಥೆ ಪಡೆದುಕೊಂಡಿದೆ ಎಂಬ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 3.5 to 7.00 ಆಗಿದ್ದರೂ ಸಹ ಅವತ್ತಿಗೂ ಮತ್ತು ಇವತ್ತಿಗೂ per capita consumption ಜಾಸ್ತಿಯಾಗಿದೆ. Population double ಆಗಿದ್ದರೂ ಸಹ ನಾವು per capita ಅನ್ನು ತೆಗೆದುಕೊಂಡಾಗ consumption 3 ಪಟ್ಟು ಜಾಸ್ತಿಯಾಗಿದೆ. 1961 ಮತ್ತು 2011ರ ನಡುವೆ consumption 3 ಪಟ್ಟು ಜಾಸ್ತಿಯಾಗಿದೆ. ಆದರೆ, ಕೃಷಿ ಭೂಮಿಯಲ್ಲಿ ಕೇವಲ 12% ಮಾತ್ರ ಹೆಚ್ಚಳವಾಗಿದೆ. ಈ ಅಂಕಿ-ಸಂಖ್ಯೆಗಳ ಮೇಲೆ ನಾವು ಯಾವ ರೀತಿ ಅರ್ಥ ಮಾಡಿಕೊಳ್ಳುತ್ತೇವೆಯೋ ಅದು ಅವರವರಿಗೆ ಬಿಟ್ಟಂಥ ವಿಚಾರ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಈ ಅಂಕಿ-ಸಂಖ್ಯೆಗಳನ್ನು ಎಲ್ಲಿಂದ ಪಡೆದುಕೊಂಡಿದ್ದೀರಿ?

ಶ್ರೀ ಕೃಷ್ಣ ಬೈರೇಗೌಡ:- ಈ ವಿಚಾರವನ್ನು ಆನಂತರ ಹೇಳುತ್ತೇನೆ. ಇದರಲ್ಲಿ U.N.O.ದು ಕೆಲವೊಂದಿದೆ, ಇದು ಬಹುಶಃ Food and Agriculture Organization ನಿಂದ ತೆಗೆದುಕೊಂಡಿದ್ದೇನೆ. ಇದು ಬಹುಶಃ FAO ನಿಂದ ತೆಗೆದುಕೊಂಡಿರಬಹುದು.

ಶ್ರೀ ವೈ.ಎಸ್.ಆರ್. ದತ್ತ:- ಈ ಅಂಕಿ-ಅಂಶಗಳನ್ನು ಎಲ್ಲಿಂದ ಪಡೆದುಕೊಳ್ಳಲಾಗಿದೆ ಎಂಬ ಬಗ್ಗೆ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು:- ನೀವು ಹೇಳಿ ಕೇಳಿ ಮೇಸ್ಟ್ರು ಆಗಿದ್ದೀರಿ. ಆನಂತರ ಎಲ್ಲಿಂದ ಬಂದಿದೆ ಎಂದು ಹುಡುಕಿ.

ಶ್ರೀ ವೈ.ಎಸ್.ಆರ್. ದತ್ತ:- ಮೇಸ್ಟ್ರು ಆಗಿದ್ದಲಿಂದಲೇ ಎಲ್ಲಿಂದ ಬಂತು ಎಂದು ಕೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಸಚಿವರೇ, ನಾನು ಹೇಳುವುದೇನೆಂದರೆ, ನಿಮ್ಮ ಪರಿಶ್ರಮ ಮತ್ತು ಎಲ್ಲಾ ವಿಷಯವನ್ನು ತಿಳಿದುಕೊಂಡು ಬರುವುದಕ್ಕೆ ನೀವು ಮಾಡಿರುವ ಪ್ರಯತ್ನಕ್ಕೆ ನಮ್ಮೆಲ್ಲರ ಅಭಿನಂದನೆ ಇದೆ. ಆದರೆ, ಈಗ ನಾನು ಹೇಳುವುದೇನೆಂದರೆ, Worlsd Bank and International Monitory Fund ಇದೆಯಲ್ಲ ಇವು ನಮ್ಮ ಪರಮ ಶತ್ರುಗಳು. ಆದ್ದರಿಂದ, ಈ ಸಂಸ್ಥೆಯವರು ಕೊಟ್ಟಿರುವ ಮಾಹಿತಿಗಳಾದರೆ ದಯಮಾಡಿ ಈ ಮಾಹಿತಿಗಳನ್ನು ಹೇಳುವುದಕ್ಕೆ ಹೋಗಬೇಡಿ. ಏಕೆಂದರೆ, ಇದು ನಿಮಗೆ ಉರುಳು ಹಾಕಿಕೊಂಡಂತೆ ಆಗುತ್ತದೆ. ಆನಂತರ defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. Please bank on your own information. Kindly if it is the basis. Please do not bank on that. It is very very harmful to us.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಸಚಿವರೆ, ಮಾನ್ಯ ರಮೇಶ್ ಕುಮಾರ್ ಹೇಳುವಂಥ ವಿಷಯವನ್ನು ತಾವು ಕೇಳಿಸಿಕೊಳ್ಳುತ್ತೀರಿ. ನಾವು ಹೇಳುವುದನ್ನು ಏಕೆ ಕೇಳಿಸಿಕೊಳ್ಳುವುದಿಲ್ಲ?

ಶ್ರೀ ಕೃಷ್ಣ ಬೈರೇಗೌಡ:- ಆಯಿತು ಹೇಳಿ.

ಶ್ರೀ ಬಿ.ಆರ್. ಪಾಟೀಲ್:- ನಾವು ಒಪ್ಪಿದಂಥ ಗಾಂಧಿ ಸಿದ್ಧಾಂತದ ಹಿನ್ನೆಲೆಯಲ್ಲಿ ನಾವು ದೇಶ ಕಟ್ಟುವುದಕ್ಕೆ ನಾವು ಹೊರಟ್ಟಿದ್ದೇವೆ. ಗ್ರಾಮೀಣ

ಭಾಗ ಮತ್ತು ಪಟ್ಟಣಗಳ ನಡುವೆ ಕಂದಕ ಇರಬಾರದೆಂದು ಗಾಂಧೀಜಿರವರ ಸಿದ್ಧಾಂತ ಇತ್ತು. ಆದ್ದರಿಂದ, ಆ ಸಿದ್ಧಾಂತವನ್ನು ತಾವು..

ಅಧ್ಯಕ್ಷರು:– ಮಾನ್ಯ ಪಾಟೀಲ್‌ರವರೆ, ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರು ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಈ ಮಾಹಿತಿಗಳು world bank statistics....

ಅಧ್ಯಕ್ಷರು:– ಇದೆಲ್ಲ ಜನರಲ್ ವಿಷಯವಾಗಿದೆ.

ಶ್ರೀ ಬಿ.ಆರ್. ಪಾಟೀಲ್:– ಇವತ್ತಿನ ದಿವಸ ಜೋಳ ಮತ್ತು ರಾಗಿಯನ್ನು ಕೊಡುವುದಕ್ಕೆ ಆಗದೆ ಇರುವ ಸ್ಥಿತಿ ಇದೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ತಾವು ಮಾತನಾಡಿ.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಒಂದೆರಡು ಅಂಕಿ–ಸಂಖ್ಯೆಗಳನ್ನು ನಾನು world bankನಿಂದ ಪಡೆದುಕೊಂಡಿರಬಹುದು. ಬಹುತೇಕವಾಗಿ U.N.O.ನಿಂದ ತೆಗೆದುಕೊಂಡಿದ್ದೇನೆ. Food and Agriculture Organization ಕೂಡ U.N.O.ನ ಒಂದು ಅಂಗ ಸಂಸ್ಥೆಯಾಗಿದೆ. ಅದರಿಂದ ಕೂಡ ಮಾಹಿತಿ ತೆಗೆದುಕೊಂಡಿದ್ದೇನೆ. International Food Policy Research Institute ಕೂಡ U.N.ಗೆ ಸಮಾನವಾದಂತಹ ಸಂಸ್ಥೆಯಾಗಿದ್ದು, ಇದರಿಂದ ಕೂಡ ಮಾಹಿತಿ ತೆಗೆದುಕೊಂಡಿದ್ದೇನೆ. ಒಂದೆರಡು ಅಂಕಿ–ಸಂಖ್ಯೆಗಳು, ಅಂದರೆ, population ಮತ್ತು ಇತರೇ ಕೆಲವು ವಿಷಯಗಳನ್ನು World Bankನಿಂದ ನಾನು ತೆಗೆದುಕೊಂಡಿರಬಹುದು. ಹಾಗಾಗಿ ಇವತ್ತು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆಯನ್ನು ಬೇರೆ ದೇಶಗಳಿಗೆ ಹೋಲಿಕೆ ಮಾಡಿದಾಗ, ಇವತ್ತಿನ ದಿವಸ ಬಹಳ ಅಭಿವೃದ್ಧಿ ಹೊಂದಿದಂಥ ದೇಶಗಳು ಕೆಲವು ಇವೆ. ಅಮೇರಿಕಾ 2% ನಷ್ಟಿದೆ. ಆಸ್ಟ್ರೇಲಿಯ 3% ನಷ್ಟು ಜನ ಮಾತ್ರ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಈ ದೇಶಗಳನ್ನು ಬಿಟ್ಟು ಬಿಡೋಣ. ಏಕೆಂದರೆ ಆ ದೇಶಗಳಿಗೆ ನಾವು ಹೋಲಿಕೆ ಮಾಡುವುದು ಬಹುಶಃ

ಸಮಂಜಸವಲ್ಲ. ನಮ್ಮ ಪಕ್ಕದ ದೇಶವಾದ ಭೂತಾನ್ ದೇಶದಲ್ಲಿ ಸುಮಾರು 62% ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ನಮಗಿಂತ ಸ್ವಲ್ಪ ಮುಂದೆ ಇದ್ದರೂ ಕೂಡ ನಮ್ಮ ಸಮಾನಂತರವಾಗಿರುವ ಬ್ರೆಜಿಲ್ ದೇಶದಲ್ಲಿ ಶೇ.15 ರಿಂದ 17% ನಷ್ಟು ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಜನಸಂಖ್ಯೆಯ ಆಧಾರದ ಮೇಲೆ ನಾವು ನೋಡುವುದಾದರೆ, ನಮಗೆ ಸಮಾನಂತರವಾಗಿರುವ ದೇಶವಾಗಿರುವ ಚೈನಾ ದೇಶ. ಚೈನಾ ದೇಶದಲ್ಲಿ ಸುಮಾರು ಶೇ.35 ರಷ್ಟು ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶ ಈಜಿಪ್ಟ್. ಇಲ್ಲಿ ಸುಮಾರು 29% ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಫ್ರಾನ್ಸ್, ಜರ್ಮನಿ ದೇಶಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮುಂದೊಂದು ದಿನ ಆ ಒಂದು ಪರಿಸ್ಥಿತಿಯನ್ನು ತಲುಪಬೇಕೆಂದು ಇದ್ದರೂ ಕೂಡ ಇವತ್ತಿಗೆ ಅದನ್ನು ಹೋಲಿಕೆ ಮಾಡತಕ್ಕಂಥದ್ದು ಸೂಕ್ತವಲ್ಲ. ಭಾರತ ದೇಶದಲ್ಲಿ ಶೇ.50 ರಷ್ಟು ಜನರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇಂಡೋನೇಷಿಯದಲ್ಲಿ ಶೇ. 35 ರಷ್ಟು ಮತ್ತು ಮಲೇಷ್ಯಾ ದೇಶದಲ್ಲಿ ಶೇ.13ರಷ್ಟು ಇದ್ದಾರೆ. ನಾನು ಹೇಳುವುದೇನೆಂದರೆ, ನಮ್ಮ ಸಮಾನಂತರ ದೇಶಗಳಿಗೆ ಹೋಲಿಕೆ ಮಾಡಿದಾಗ ಅಂದರೆ, ಇಂಡೋನೇಷಿಯಾ, ಈಜಿಪ್ಟ್, ಚೈನಾ ಇಂಥ ದೇಶಗಳಿಗೆ ಹೋಲಿಕೆ ಮಾಡಿದಾಗ ಕೃಷಿಯಲ್ಲಿರತಕ್ಕಂಥವರ ಸಂಖ್ಯೆ ನೋಡಿದಾಗ ನಮ್ಮ ದೇಶದಲ್ಲಿ ಈ ಸಂಖ್ಯೆ ಜಾಸ್ತಿ ಇದೆ. ಆ ದೇಶಗಳಲ್ಲಿ ಕಡಿಮೆ ಇದೆ. ಕಡಿಮೆ ಇದೆ ಎಂದು ಆ ದೇಶಗಳಲ್ಲಿ ಎಲ್ಲಿಯೂ ಕೂಡ ಆಹಾರದ ಕೊರತೆಯನ್ನು ಎದುರಿಸುತ್ತಿಲ್ಲವೆಂಬ ಅಂಶವನ್ನು ಸಹ ನಾವು ಗಮನಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಂಥ ಸಂಖ್ಯೆ ಶೇಕಡವಾರು ಕಡಿಮೆ ಆಗುತ್ತಿದೆ. ಆದರೆ, ಅದರ ಸಂಖ್ಯೆ ನೋಡಿದಾಗ ಸಂಖ್ಯೆ ಕಡಿಮೆ ಆಗಿದೆ ಎಂಬ ಅರ್ಥ ಬರುವುದಿಲ್ಲ. ಏಕೆಂದರೆ, 1980 ರಿಂದ 2011 ರವರೆಗಿನ ಈ 30 ವರ್ಷದ ಅವಧಿಯನ್ನು ನೋಡಿದಾಗ ನಮ್ಮ ದೇಶದಲ್ಲಿ ಕೃಷಿಯಲ್ಲಿರತಕ್ಕಂಥವರ ಸಂಖ್ಯೆಯನ್ನು ಮಾತ್ರ ನಾವು ಗಮನಕ್ಕೆ ತೆಗೆದುಕೊಂಡರೆ, ಈ ಸಂಖ್ಯೆ ಶೇಕಡ

50ರಷ್ಟು ಜಾಸ್ತಿಯಾಗಿದೆ. ಅಂದರೆ, absolute numbers, numbers have increased. Not the percentage. ಚೈನಾ ದೇಶದಲ್ಲಿ 33% ರಷ್ಟು ಸಂಖ್ಯೆ ಜಾಸ್ತಿಯಾಗಿದೆ. ಇದೇ ಸಂದರ್ಭದಲ್ಲಿ ಅಮೇರಿಕಾ ದೇಶದಲ್ಲಿ ಶೇಕಡ 37ರಷ್ಟು ಸಂಖ್ಯೆ ಕಡಿಮೆ ಆಗಿದೆ. ಹಾಗಾಗಿ, ಪರ್ಸೆಂಟೇಜ್ ಕಡಿಮೆ ಆದ ಕೂಡಲೇ ಕೃಷಿಯಲ್ಲಿರತಕ್ಕಂಥವರ ಸಂಖ್ಯೆಯೂ ಕಡಿಮೆ ಆಗಿದೆ ಎಂಬ ಅರ್ಥವಲ್ಲ. ಏಕೆಂದರೆ, ನಮ್ಮಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದಂಥ ಅವಧಿಯಲ್ಲಿ ಪರ್ಸೆಂಟೇಜ್ ಕಡಿಮೆ ಆದರೂ ಸಹ absolute number ಜಾಸ್ತಿ ಆಗತಕ್ಕಂಥದ್ದನ್ನು ಗಮನಿಸಿಕೊಳ್ಳಬೇಕು ಎನ್ನುವಂಥ ವಿಚಾರ ಇದೆ. ಅರ್ಥಶಾಸ್ತ್ರದಲ್ಲಿ ಒಂದು ಪದ ಇದೆ distress labour ಎಂದು. ಅದರ ಅರ್ಥ ಯಾರಿಗೆ ಬೇರೆ ಚಟುವಟಿಕೆ ಮಾಡುವುದಕ್ಕೆ ಉದ್ಯೋಗ ಸಿಗುವುದಿಲ್ಲ, ಅವರು ಎಲ್ಲಿಯಾದರೂ ಒಂದು ಕಡೆ ಅನಿವಾರ್ಯವಾಗಿ ಇದ್ದಂಥ ಸಂದರ್ಭದಲ್ಲಿ ಅದಕ್ಕೆ distress labour ಎಂದು ಕರೆಯುತ್ತಾರೆ. ಈಗ ನಮ್ಮಲ್ಲಿ ಇರತಕ್ಕಂಥವರು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರೆಲ್ಲರೂ ಕೃಷಿಯನ್ನು ಮಾಡುತ್ತಿದ್ದಾರೆ ಎಂದು ಬಹುಶಃ ನಾವು ಆ ತರಹ ಅರ್ಥೈಸಲಿಕ್ಕೆ ಸಹ ಸಾಧ್ಯವಾಗುವುದಿಲ್ಲ. ಬಹುಶಃ ಕೆಲವೊಬ್ಬರಿಗೆ ಬೇರೆಕಡೆ ಉದ್ಯೋಗ ಸಿಗದೆ ಹೋದಂಥ ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿರತಕ್ಕಂಥ ಸಾಧ್ಯತೆಗಳು ಸಹ ಇರುತ್ತವೆ. ಇವೆಲ್ಲವನ್ನು ಸೇರಿಸಿದಾಗ ಒಟ್ಟಾರೆ ನಮ್ಮ ದೇಶದಲ್ಲಿ ಬೇರೆ ದೇಶಗಳಿಗೆ ಹೋಲಿಕೆ ಮಾಡಿದಾಗ ಸಂಖ್ಯೆಯನ್ನು ಹೋಲಿಕೆ ಮಾಡಲಿ ಅಥವಾ ಪ್ರಮಾಣವನ್ನು ಹೋಲಿಕೆ ಮಾಡಿದರೂ ಸಹ ನಮ್ಮ ದೇಶದಲ್ಲಿ ಕೃಷಿಕರ ಸಂಖ್ಯೆ ಮತ್ತು ಕೃಷಿಕರ ಪ್ರಮಾಣ ಬಹುತೇಕ ಬೇರೆ ದೇಶಗಳಿಗಿಂತ ಹೆಚ್ಚಿದೆ ಎನ್ನುವುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ಎಲ್ಲೋ ಒಂದು ಕಡೆ ಕೃಷಿ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವೆಲ್ಲರೂ ಸಹ ಆತಂಕಕ್ಕೆ ಒಳಗಾಗುತ್ತೇವೆ. ಕೃಷಿಯ ಭವಿಷ್ಯ ಏನು ಎನ್ನುವುದನ್ನು ಮಾತನಾಡುತ್ತೇವೆ. ಇದು ಎಲ್ಲೋ ಒಂದು ಕಡೆ ಕೃಷಿಕರ ಮನಸ್ಸನ್ನು ಅವರ ಸ್ಥೈರ್ಯವನ್ನು ಕುಂದಿಸುವಹಾಗೆ ಆಗಬಾರದು ಎನ್ನುವುದು ಅಷ್ಟೇ ನನ್ನ ಉದ್ದೇಶ. ಇವೆಲ್ಲವೂ ಸಹ ಜಗತ್ತಿನ ಕಾಲದ ನಿಯಮಗಳು,

ಬದಲಾವಣೆ ಎನ್ನತಕ್ಕಂಥದ್ದು ಶಾಶ್ವತ. ಬದಲಾವಣೆ ಒಂದೇ ಶಾಶ್ವತ, ಇನ್ನ್ಯಾವುದು ಸಹ ಶಾಶ್ವತ ಅಲ್ಲ. ಹಾಗಾಗಿ ಇವೆಲ್ಲವೂ ಸಹ ಕಾಲಮಾನದಲ್ಲಿ ನಡೆಯುತ್ತವೆ. ಹಾಗಂತ ಹೇಳಿ ಬಹುಶಃ ಪ್ರಪಂಚದಲ್ಲಿ ಯಾವುದಾದರೂ ಮೊದಲು ಕಸುಬು ಇದ್ದರೆ ಅದು ಕೃಷಿ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪ್ರಪಂಚ ಇರಬೇಕು, ಜನ ಬದುಕಬೇಕು ಜನಸಂಖ್ಯೆ ಬಾಳಬೇಕು ಎಂದರೆ ಅಲ್ಲಿಯವರೆಗೆ ಕೃಷಿಯನ್ನು ಬಿಟ್ಟು ಪ್ರಪಂಚ ಬದುಕಲಿಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಧ್ಯದಲ್ಲಿ ತೊಂದರೆಗಳು ಬರುತ್ತವೆ, ಇಲ್ಲವೆಂದು ನಾನು ಎಲ್ಲೂ ಹೇಳುತ್ತಿಲ್ಲ. ಆದರೆ ಇತಿಹಾಸ ಮತ್ತು ಭವಿಷ್ಯವನ್ನು ಅವಲೋಕನ ಮಾಡಿದಾಗ ನಾಳೆ ಕೃಷಿ ಇರುತ್ತದೋ ಇಲ್ಲವೋ, ಕೃಷಿ ಇಲ್ಲವೆಂದರೆ ಮನುಷ್ಯ ಇರುವುದಕ್ಕೆ ಸಾಧ್ಯವಿಲ್ಲ. ಮನುಷ್ಯನಿಗೆ ಮೊದಲು ಕೃಷಿ ಇರಬೇಕು, ಕೃಷಿ ಇದ್ದರೆ ಮನುಷ್ಯ ಬದುಕಲಿಕ್ಕೆ ಸಾಧ್ಯ. ಹೇಗೆ ಗಾಳಿ ಇದ್ದರೆ ಮನುಷ್ಯ ಬದುಕಲಿಕ್ಕೆ ಸಾಧ್ಯವೋ ಹಾಗೆ ಕೃಷಿ ಇದ್ದರೇನೆ ಈ ಸಂಕುಲನ ಬದುಕುವುದಕ್ಕೆ ಸಾಧ್ಯವೆನ್ನುವ ವಿಚಾರವನ್ನು ನಾವು ಅಷ್ಟೇ ಗಂಭೀರವಾಗಿ ತೆಗೆದುಕೊಳ್ಳೋಣ ಎಂದು ನಾನು ಮನವಿ ಮಾಡಿಕೊಳ್ಳತಕ್ಕಂಥದ್ದು. ಮಧ್ಯದಲ್ಲಿ ತೊಂದರೆಗಳು ಬರುತ್ತವೆ, ಅದನ್ನು ನಾವು ಸರಿಪಡಿಸಿಕೊಳ್ಳಬೇಕಾಗುತ್ತದೆ. ಆ ಕೆಲಸವನ್ನು ನಾವು ಮಾಡಿಕೊಳ್ಳಬೇಕಾಗಿದೆ. ಭಾರತದ ಕೃಷಿಯ ಬಗ್ಗೆ ನಾನು ಮಾತನಾಡುವುದಾದರೆ, ನಾವು ಸ್ವಾತಂತ್ರ್ಯ ಬಂದ ನಂತರ ಸಾಕಷ್ಟು ಪ್ರಗತಿಯನ್ನು ಮಾಡಿದ್ದೇವೆ. ಹಾಗಂತ ಹೇಳಿದರೆ ಕೆಲವರು ತಕ್ಷಣ ಯೋಚನೆ ಮಾಡುತ್ತಾರೆ. ಹಾಗಾದರೆ ಎಲ್ಲಾ ಸರಿ ಇದೆಯಾ? ಎಲ್ಲಾ ಸರಿ ಇದೆ ಎಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ. ಆದರೆ ಏನೂ ಆಗಿಲ್ಲ ಎನ್ನುವಂಥದ್ದು ಸಹಾ ಸರಿ ಅಲ್ಲ ಎನ್ನುವುದನ್ನು ಅಷ್ಟೇ ನಾನು ಹೇಳುತ್ತಿದ್ದೇನೆ. ಪ್ರಗತಿ ಮಾಡಿದ್ದೇವೆ, ಪ್ರಗತಿ ಮಾಡಿಲ್ಲ, ದೇಶದಲ್ಲಿ ಏನೂ ಆಗಿಲ್ಲ ಎನ್ನುವಂಥದ್ದು ಸಹ ಸರಿಯಲ್ಲ. ಅದಕ್ಕೂ ಸಹ ಈ ಅಂಕಿ ಸಂಖ್ಯೆಗಳು ಯಾವ World Bank ದ್ದು ಅಲ್ಲ. ನಾನು ಬೇರೆ ಸಂಪನ್ಮೂಲದಿಂದ ತೆಗೆದುಕೊಂಡಿರತಕ್ಕಂಥದ್ದು. Millet Production ಅಂದರೆ Coarse grains. Millet Production ನಲ್ಲಿ ಭಾರತದೇಶ ಇಡೀ ಪ್ರಪಂಚದಲ್ಲಿ ಒಂದನೇ

ಸ್ಥಾನದಲ್ಲಿದ್ದೇವೆ. ಭತ್ತ ಬೆಳೆಯುವುದರಲ್ಲಿ ಇಡೀ ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ನಾವು ಬಹಳ ಹಿಂದೆ ಏನು ಇಲ್ಲ. ಗೋಧಿ ಬೆಳೆಯುವುದರಲ್ಲಿಯೂ ಸಹ ನಾವು ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. Sour gum ಅದಲ್ಲಿಯೂ ಸಹ ನಾವು ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಬೀನ್ಸ್‌ನಲ್ಲಿ ನಾವು ಒಂದನೇ ಸ್ಥಾನದಲ್ಲಿದ್ದೇವೆ. ಚಿಕ್‌ಪೀಸ್, pulses, ಕಾಳುಗಳು ಅವುಗಳಲ್ಲಿಯೂ ಸಹ ನಾವು ಒಂದನೇ ಸ್ಥಾನದಲ್ಲಿದ್ದೇವೆ. ಬದನೆಕಾಯಿಯಲ್ಲಿ ಪ್ರಪಂಚದಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಆಲೂಗಡ್ಡೆಯಲ್ಲಿ ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಹಣ್ಣುಗಳನ್ನು ತೆಗೆದುಕೊಂಡರೆ ಬಾಳೆಹಣ್ಣಿನಲ್ಲಿ ಪ್ರಪಂಚದಲ್ಲಿ ಒಂದನೇ ಸ್ಥಾನದಲ್ಲಿದ್ದೇವೆ. ಮಾವು ಬೆಳೆಯುವುದರಲ್ಲಿ ಪ್ರಪಂಚದಲ್ಲಿ ಒಂದನೇ ಸ್ಥಾನದಲ್ಲಿದ್ದೇವೆ. ಕಬ್ಬು ಬೆಳೆಯುವುದರಲ್ಲಿ ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಪಪ್ಪಾಯಲ್ಲಿ ಪ್ರಪಂಚದಲ್ಲಿ ಒಂದನೇ ಸ್ಥಾನದಲ್ಲಿದ್ದೇವೆ. ಹಾಗೂ ಅನೇಕ spices ನಲ್ಲಿ ಪ್ರಪಂಚದಲ್ಲಿ ನಾವು ಒಂದನೇ ಸ್ಥಾನದಲ್ಲಿದ್ದೇವೆ. ಹತ್ತಿ ಬೆಳೆಯುವುದರಲ್ಲಿಯೂ ಸಹ ನಾವು ಪ್ರಪಂಚದಲ್ಲಿಯೇ ಎರಡನೇ ಸ್ಥಾನದಲ್ಲಿದ್ದೇವೆ. Jute, silk ಬೆಳೆಯುವುದರಲ್ಲಿ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಈಗ ನಾವು ಕೆಲವು ಉದಾಹರಣೆಗಳನ್ನು ಕೊಡುತ್ತಿದ್ದೇನೆ. ಭಾರತ ದೇಶದಲ್ಲಿ ಕೃಷಿಯಲ್ಲಿ ಏನು ಆಗಿಯೇ ಇಲ್ಲ ಎಂದು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಅಷ್ಟೊಂದು ಏನೂ ಆಗಿಲ್ಲ ಎನ್ನುವಂಥದ್ದು ಬಹುಶಃ ಸೂಕ್ತವಲ್ಲ. ಸ್ವಾತಂತ್ರ್ಯ ಬಂದಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಸುಮಾರು 50 ಮಿಲಿಯನ್ ಟನ್‌ನಷ್ಟು ಇತ್ತು. ಈ ವರ್ಷ 262 ಮಿಲಿಯನ್ ಟನ್ ಉತ್ಪಾದನೆ ನಮ್ಮ ದೇಶದಲ್ಲಿ ಆಗಿದೆ. ಸ್ವಾತಂತ್ರ್ಯ ಬಂದ ನಂತರ 5 ಪಟ್ಟು ಉತ್ಪಾದನೆಯಲ್ಲಿ ನಾವು ಹೆಚ್ಚುವರಿಯನ್ನು ಕಂಡಿದ್ದೇವೆ. ಹಣ್ಣು ತರಕಾರಿಗಳು ಸಹ ಸುಮಾರು 260 ಮಿಲಿಯನ್ ಟನ್ ಉತ್ಪಾದನೆ ಇವತ್ತು ನಮ್ಮ ದೇಶದಲ್ಲಿ ಆಗುತ್ತಿದೆ. ಮಾನ್ಯ ಅಧ್ಯಕ್ಷರೆ, 1960ರ ದಶಕದಲ್ಲಿ ನಾನು ಹುಟ್ಟಿರಲಿಲ್ಲ, ತಾವು ಇದ್ದಿರಿ. ಸದನದ ಅನೇಕ ಜನ ಸದಸ್ಯರು ಹಿರಿಯರೆಲ್ಲಾ ಇದ್ದಾರೆ, ಅವರೆಲ್ಲರೂ ಇದ್ದರು. ಇವತ್ತು ಎಷ್ಟು ಜನರಿಗೆ ನಮ್ಮ ದೇಶದಲ್ಲಿ

ಜ್ಞಾಪಕ ಇದೆಯೊ ಗೊತ್ತಿಲ್ಲ. PL–480 ಎನ್ನುವುದನ್ನು ಇವತ್ತಿನವರೆಗೂ ಎಷ್ಟು ಜನ ಜ್ಞಾಪಕ ಇಟ್ಟುಕೊಂಡಿದ್ದಾರೆ ಗೊತ್ತಿಲ್ಲ. ಏನು PL–480, ಅದು ಕಾರ್ಯಕ್ರಮ ಏನಾದರೂ ಇರಲಿ. ಅದರ ನಿಜವಾದ ಅರ್ಥ ಏನು ಇತ್ತು ಎಂದರೆ, ನಮ್ಮ ಸ್ವಾಭಿಮಾನವನ್ನು ಅಡ ಇಟ್ಟು ಇನ್ನೊಂದು ದೇಶದ ಮುಂದೆ ಒಂದು ಸ್ವಲ್ಪ ನಮ್ಮ ಹೊಟ್ಟೆಗೆ ಏನೂ ಇಲ್ಲ ನಮಗೆ ಬದುಕುವುದಕ್ಕೆ ಆಗುವುದಿಲ್ಲ ಸತ್ತು ಹೋಗುತ್ತೇನೆ ಸ್ವಲ್ಪ ಭಿಕ್ಷೆ ಕೊಡಪ್ಪಾ ಎಂದು ಹೇಳಿ ತೆಗೆದುಕೊಂಡು ಬಂದು ಗಂಜಿ ಮಾಡಿಕೊಂಡು ಕುಡಿಯುವುದೆ PL–480, ಹೌದೋ ಇಲ್ಲವೋ? ನಮ್ಮ ಸ್ವಾಭಿಮಾನವನ್ನು ಬದಿಗಿಟ್ಟು ಇನ್ನೊಂದು ದೇಶದ ಮುಂದುಗಡೆ ಭಿಕ್ಷಾಪಾತ್ರೆ ಹಿಡಿದುಕೊಂಡು ನಿಂತುಕೊಂಡು ಅದನ್ನು ತೆಗೆದುಕೊಂಡು ಬಂದು ಅದನ್ನು ಗಂಜಿ ಮಾಡಿ ದೇಶದಲ್ಲಿ ಕೋಟ್ಯಾಂತರ ಪ್ರಾಣಗಳನ್ನು ಉಳಿಸುವಂಥ ಅನಿವಾರ್ಯತೆ ನಮ್ಮ ದೇಶಕ್ಕೆ ಇತ್ತು. ಒಂದು ಸ್ವಾವಲಂಬಿ ಮತ್ತು ಸ್ವಾಭಿಮಾನಿ ಈ ದೇಶ ಆಗಬೇಕಾದರೆ ನನ್ನ ಹೊಟ್ಟೆಯನ್ನು ನಾನು ತುಂಬಿಸಿಕೊಳ್ಳುವುದಕ್ಕೆ ತಯಾರಿಲ್ಲವೆಂದು ಹೇಳಿದರೆ ಇನ್ನೇನು ನಾನು ಸ್ವಾವಲಂಬಿ, ಏನು ಸ್ವಾಭಿಮಾನಿ. ಯಾವ ದೇಶ ನಮಗೆ ಗೋಧಿಯನ್ನು ಕೊಡುತ್ತದೆ, ಅದೇ ದೇಶ ಹೇಳುತ್ತಿತ್ತು. ಒಂದು Foreign Policy ಹೀಗೆ ಇರಬೇಕು ಮತ್ತು Defence Policy ಹೀಗೆ ಇರಬೇಕು. ಹಾಗಾದರೆ ಸ್ವಾತಂತ್ರ್ಯದ ಅರ್ಥ ಏನು ಬಂತು. ಅಂತಹ ದಿನಗಳಿಂದ ಇವತ್ತು ಎಲ್ಲಿಯವರೆಗೆ ನಾವು ಸಾಧನೆ ಮಾಡಿದ್ದೇವೆಂದು ಹೇಳಿದರೆ, ಬೇರೆ ದೇಶದಲ್ಲಿ ಯಾರಾದರೂ ಹಸಿವಿನಿಂದ ಸಾಯುತ್ತಿದ್ದರೆ ಅವರಿಗೆ ಉಚಿತವಾಗಿ ನಮ್ಮ ಖರ್ಚಿನಲ್ಲಿ ನಮ್ಮ ಆಹಾರ ಧಾನ್ಯವನ್ನು ತೆಗೆದುಕೊಂಡು ಹೋಗಿ ದಾನವಾಗಿ ಕೊಡುವ ಹಂತಕ್ಕೆ ಭಾರತ ದೇಶ ತಲುಪಿದೆ ಎನ್ನುವುದನ್ನು ನಾವು ಗಮನಿಸಿಕೊಳ್ಳಬೇಕಾಗಿದೆ. ನಾವು ನಮ್ಮ ನಿರೀಕ್ಷೆಗೆ ಸಾಕಾಗುವಷ್ಟು ಪ್ರಗತಿಯನ್ನು ಮಾಡದೆ ಹೋಗಿರಬಹುದು, ಅಂತರ ಇನ್ನೂ ಸಾಕಷ್ಟು ಇದೆ. ಹಾಗಂತ ಏನು ಪ್ರಗತಿ ಆಗಿಲ್ಲ, ಇದಕ್ಕೆ ನಮ್ಮ ಕಾಂಗ್ರೆಸ್ ಸರ್ಕಾರ ಕಾರಣವೆಂದು ನಾನು ಹೇಳುವುದಿಲ್ಲ. ಅಥವಾ ವಿಜ್ಞಾನಿಗಳು ಕಾರಣವೆಂದು ನಾನು ಹೇಳುವುದಿಲ್ಲ. ದೇಶ ಪ್ರಗತಿ ಮಾಡಿದೆ, ರೈತರು ಪ್ರಗತಿ ಮಾಡಿದ್ದಾರೆ. ರೈತರಿಗೆ ತಕ್ಕ ಹಾಗೆ

ವಿಜ್ಞಾನಿಗಳು ಮತ್ತು ತಕ್ಕ ಮಟ್ಟಿಗೆ ಇಲಾಖೆಗಳು ಸಹ ಸಹಕಾರ ಕೊಟ್ಟಿವೆ. ನಮ್ಮ ದೇಶದವರೆ ಅಲ್ಲ. Norman Borlaug ಅವರನ್ನು ಎಷ್ಟು ಜನ ಸ್ಮರಿಸಿಕೊಳ್ಳುತ್ತಾರೆ ಗೊತ್ತಿಲ್ಲ. ಯಾವುದೋ ದೇಶದಲ್ಲಿ ಹುಟ್ಟಿದವನು, ಯಾವುದೋ ದೇಶದಲ್ಲಿ ಬೆಳೆದವನು ಅವನು ಬಂದು ನಮ್ಮ ದೇಶದ ಹಸಿರು ಕ್ರಾಂತಿಯಲ್ಲಿ ಕೈಜೋಡಿಸಿ ಇವತ್ತು ಕನಿಷ್ಠಪಕ್ಷ ಆಹಾರ ವಿಚಾರದಲ್ಲಿ ಸ್ವಾವಲಂಬಿ ಆಗತಕ್ಕಂಥ ಮಟ್ಟಕ್ಕೆ ನಮ್ಮ ದೇಶ ತಲುಪಿದೆ. ಅಷ್ಟೇ ಅಲ್ಲದೆ ಬೇರೆ ದೇಶಗಳಿಗೆ PL–480 ರೀತಿಯಲ್ಲಿ ದಾನ ಕೊಡುವ ಮಟ್ಟಕ್ಕೆ ನಮ್ಮ ದೇಶ ತಲುಪಿದೆ ಎನ್ನುವಂಥದ್ದನ್ನು ನಾವೆಲ್ಲರೂ ಸಹ ಮರೆಯಬಾರದು ಎಂದು ನಾನು ಮನವಿ ಮಾಡುತ್ತೇನೆ. ಈ ಸಂದರ್ಭದಲ್ಲಿ ಪಾರ್ಥೇನಿಯಂ ಸಹಾ PL–480 ಒಳಗಡೆ ಮಿಕ್ಸ್ ಆಗಿ ಬಂದಂಥದ್ದು. ಪಾರ್ಥೇನಿಯಂ ನಮ್ಮ ದೇಶಕ್ಕೆ ಬಂದದ್ದು ಸಹಾ ಹಡಗುಗಳಲ್ಲಿ PL–480 number ಅದು. ಅದು ಅಮೇರಿಕಾ ದೇಶದಲ್ಲಿ ಗ್ರಾಂಟ್ ಕೊಡುವುದಕ್ಕೆ programme ನ code number ಅದು. ಅಮೇರಿಕಾ ದೇಶ ನಮಗೆ ಗೋಧಿಯನ್ನು ಕೊಡುತ್ತಾ ಇತ್ತು. ಅವರು ಪುಕ್ಕಟೆಯಾಗಿ ಕೊಡುತ್ತಿದ್ದರು, ಅದನ್ನು ತೆಗೆದುಕೊಂಡು ಬಂದು ಗಂಜಿ ಮಾಡಿ ಸಾಯುವುದನ್ನು ಬದುಕಿಸುತ್ತಿದ್ದೆವು. ಆ ರೀತಿ ಇತ್ತು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆಗ ಬರ ಇತ್ತು. ರಾಜ್ಯದಲ್ಲಿ ಏನೂ ಉತ್ಪಾದನೆ ಆಗುತ್ತಿರಲಿಲ್ಲ. ಅದಕ್ಕೋಸ್ಕರ ಅಷ್ಟೇ.

ಶ್ರೀ ಕೃಷ್ಣ ಭೈರೇಗೌಡ:– ಹೌದು. Even I may be wrong.

ಶ್ರೀ ವೈ.ಎಸ್.ವಿ. ದತ್ತ:– PL 480 ಯಲ್ಲಿ ಪೂರ್ಣವಾಗಿ ನಾವು ಅದನ್ನು ಭಿಕ್ಷೆಯಾಗಿ ತೆಗೆದುಕೊಂಡಿಲ್ಲ. ನನಗೆ ಜ್ಞಾಪಕವಿರುವ ಹಾಗೆ ಆಗ ನಾವು ಅದಕ್ಕೆ ಸಕ್ಕರೆಯನ್ನು ಕೊಟ್ಟು ತೆಗೆದುಕೊಂಡಿದ್ದೇವೆ. ಹಾಗಾಗಿ ಅದು ಭಿಕ್ಷೆಯಲ್ಲ. ನಾವು ಸಕ್ಕರೆಯನ್ನು ಕೊಟ್ಟು ತೆಗೆದುಕೊಂಡಿದ್ದೇವೆ. If I am correct.

ಶ್ರೀ ಕೃಷ್ಣ ಬೈರೇಗೌಡ:– ಇರಬಹುದು. ಆದರೆ major portion. . .

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ಭಿಕ್ಷೆ ತೆಗೆದುಕೊಂಡಿದ್ದೇವೆ ಎಂದು ಹೇಳಬೇಡಿ. ಭಿಕ್ಷೆ ಎಂದು ಅಲ್ಲ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ತೀರಾ ಕೆಳಗೆ ಬಿದ್ದು ಮಾತನಾಡುವುದು ಬೇಡ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ನಾವು ಸಕ್ಕರೆ ಕೊಟ್ಟು ಪರ್ಯಾಯ ಮಾಡಿಕೊಂಡಿದ್ದೇವೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):– The concept of the world was in under developed countries and developed countries, India was considered as an under developed country. It was an aid as Mr. Datta said. But, at the same time ನಾವು ಆ ಸ್ಥಿತಿಯಲ್ಲಿದ್ದರೂ ಕೂಡ ಮಲೇಷಿಯಾಕ್ಕೆ ಆವತ್ತು milk powder ಕೊಡುತ್ತಿದ್ದೆವು. Tunku Abdul Rahman was the Prime Minister of Malaysia. ಅವರು ನಮ್ಮಿಂದ ಸಹಾಯವನ್ನು ಪಡೆದುಕೊಳ್ಳುತ್ತಿದ್ದರು. ನಾವು ನಮ್ಮ ದುಸ್ಥಿತಿ ಏನೇ ಇದ್ದರೂ ಕೂಡ ಮತ್ತೊಬ್ಬರಿಗೆ ಸಹಾಯ ಮಾಡಲು ಹಿಂದೆ ಹೋಗಿಲ್ಲ. ಮೊನ್ನೆಯವರೆಗೂ ಭೂತಾನ್‌ರವರನ್ನೂ ನಾವೇ ಸಾಕಿದ್ದೇವೆ. The disaster of PL 480 is...ಅವರು capitalists in the World. Imperial capital ಇರತಕ್ಕಂಥವರು. ನಮಗೆ aid ಎಂದು ಗೋಧಿಯನ್ನು ಕಳುಹಿಸುವುದರ ಜೊತೆಗೆ ಕಳುಹಿಸಿದ ಪಾರ್ಥೇನಿಯಂ, after effects ಇವತ್ತಿನವರೆಗೂ ನಾವು ಅದರಿಂದ recovery ಆಗುವುದಕ್ಕೆ ಆಗಿಲ್ಲ. ಅದಕ್ಕೆ ಜನರು ಏನು ಮಾಡಿದ್ದರು ಅಂದರೆ, ಆಗ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತಲ್ಲ, adverse name ಆಗಿ ಅದನ್ನು ತಂದು ಕಾಂಗ್ರೆಸ್‌ಗೆ ಕೊಟ್ಟರು. ಅದು Congress grass ಎಂದು

ಹೇಳಿದರು. Congress grass ಕೂಡ ಇದೆ, JD grass ಕೂಡ ಇದೆ. BJP ಯವರದ್ದು ಸ್ವಲ್ಪ ಮಧ್ಯೆ ಅಲ್ಲಲ್ಲಿ ಸೇರಿಕೊಂಡಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಕೃಷ್ಣ ಬೈರೇಗೌಡರವರೆ, ಆಗ ಜನಸಂಘದವರು PL 480 ವಿರೋಧ ಮಾಡಿದ್ದರು.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಒಂದು ಕಾಲದಲ್ಲಿ ನಾವು ಬೇರೆ ದೇಶದಿಂದ ಆಹಾರ ತೆಗೆದುಕೊಂಡು ಬದುಕಬೇಕಾಗಿದ್ದವರು ಇವತ್ತು ಬೇರೆ ದೇಶಕ್ಕೆ ದಾನ ಕೊಡುವಂತಹ ಹಂತವನ್ನು ನಾವು ತಲುಪಿದ್ದೇವೆ. ಭಾರತದ ಕೃಷಿಕ ಅದನ್ನು ಸಾಧನೆ ಮಾಡಿದ್ದಾನೆ. ಅದಕ್ಕೆ ಸ್ವಲ್ಪಮಟ್ಟಿಗೆ ಸರ್ಕಾರಗಳಿಂದಲೂ ಸಹಕಾರ ಸಿಕ್ಕಿದೆ. ಯಾವುದೇ ಸರ್ಕಾರ ಇರಬಹುದು. ಅದನ್ನೂ ಸಹ ನಾವು ಮರೆಯುವ ಹಾಗೆ ಇಲ್ಲ. ಇವತ್ತು ಯಾವ ಮಟ್ಟಕ್ಕೆ ಮುಟ್ಟಿದ್ದೇವೆ ಎಂದರೆ...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನೀವು ಮೊದಲು ಕೃಷಿಕನ ಸಾಧನೆ ಹೇಳಬೇಕು.

ಶ್ರೀ ಕೃಷ್ಣ ಬೈರೇಗೌಡ:– ಹೇಳಿದ್ದೇನೆ. ಮೊದಲು ಕೃಷಿಕನದ್ದು ಹೇಳಿದ್ದೆ. ಅದಕ್ಕೆ ಸಹಕಾರ ಸ್ವಲ್ಪಮಟ್ಟಿಗೆ ಸರ್ಕಾರ, ವಿಜ್ಞಾನಿಗಳು ಕೊಟ್ಟಿದ್ದಾರೆ ಎಂದು ಹೇಳಿದೆ. ಮೊದಲೇ ಹೇಳಿದ್ದೇನೆ. ಈಗ ಅದನ್ನು ಪುನರುಚ್ಚಾರ ಮಾಡಿದ್ದು ಅಷ್ಟೆ. ಇವತ್ತು ಅನೇಕ ಆಹಾರ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದೇವೆ. 2,30,000 ಕೋಟಿ ರೂ. ಮೌಲ್ಯದಷ್ಟು ಆಹಾರ ಪದಾರ್ಥಗಳನ್ನು ನಮ್ಮ ದೇಶ ಬೇರೆ ದೇಶಕ್ಕೆ ರಫ್ತು ಮಾಡುತ್ತಿದೆ. ಅದರಲ್ಲಿ ಸ್ವಲ್ಪ ಆದಾಯ ರೈತರಿಗೂ ಸಹ ಸಿಗುತ್ತಿದೆ ಎನ್ನುವುದನ್ನು ನಾವು ಮರೆಯಬಾರದು. ಇವತ್ತು ನಮ್ಮ ದೇಶದಲ್ಲಿ ಕೃಷಿ ರಫ್ತು ಸಾಕಷ್ಟು ಬೆಳೆಯುತ್ತಿದೆ. ಸುಮಾರು 40 million dolar worth ಬೇರೆ ದೇಶಕ್ಕೆ ರಫ್ತು ಮಾಡುತ್ತಿದ್ದೇವೆ. ನಾನು specific points ಗೆ ಬರುವ ಮೊದಲು ಇನ್ನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಏನೂ ಪ್ರಗತಿಯೇ ಆಗಿಲ್ಲ ಎನ್ನುವ ಕಲ್ಪನೆಗೆ ಬರುವಂತಹ ಹಿನ್ನೆಲೆಯಲ್ಲಿ ನಾವು ಹತ್ತಿಯದ್ದು ಒಂದು ಉದಾಹರಣೆಯನ್ನು ತೆಗೆದುಕೊಂಡರೆ ನಮ್ಮ ದೇಶದಲ್ಲಿ 2000–2001ರಲ್ಲಿ ಒಟ್ಟು ಹತ್ತಿಯ ಉತ್ಪಾದನೆ 95 ಲಕ್ಷ ಬೇಲ್ಸ್ ಏನಿತ್ತು, ಕಳೆದ ವರ್ಷ 365 ಲಕ್ಷ ಬೇಲ್ಸ್‌ಗೆ ಹೆಚ್ಚುವರಿಯಾಗಿದೆ. ಅಂದರೆ 4 ಪಟ್ಟು ಉತ್ಪಾದನೆ ಜಾಸ್ತಿಯಾಗಿದೆ. ಉತ್ಪಾದಕತೆ ನೋಡಿದಾಗ, 2000–2001 ರಲ್ಲಿ 190 ಬೇಲ್ಸ್ per hectre ಇತ್ತು. ಇವತ್ತು 491 ಬೇಲ್ಸ್ per hectre ಆಗಿದೆ. ಕರ್ನಾಟಕದ್ದು ಹೇಳುವುದಾದರೆ, 2000–2001 ರಲ್ಲಿ 5,52,000 ಹೆಕ್ಟೇರ್ ಪ್ರದೇಶ ಇತ್ತು. ಉತ್ಪಾದನೆ 8,55,000 ಬೇಲ್ಸ್ ಇತ್ತು. ಉತ್ಪಾದಕತೆ 277 ಬೇಲ್ಸ್ per hectre ಇತ್ತು. ಇವತ್ತು ಏರಿಯಾ ಕೂಡ ಸುಮಾರು ಆರು, ಆರೂವರೆ ಲಕ್ಷ ಹೆಕ್ಟೇರ್‌ನಷ್ಟಾಗಿದೆ. ಉತ್ಪಾದನೆ 885 ಇದ್ದಿದ್ದು, 14,81,000 ಆಗಿದೆ. ಉತ್ಪಾದಕತೆಯೂ ಸಹ ಸುಮಾರು 420–430 ಬೇಲ್ಸ್ per hectre ಜಾಸ್ತಿಯಾಗಿದೆ. ಹಾಗಾಗಿ ಇನ್ನೂ ಆಗಬೇಕಾಗಿತ್ತು.

ಶ್ರೀ ಬಿ.ಆರ್. ಯಾವಗಲ್:– ಅದು ಬೇಲ್ಸ್ ಅಲ್ಲ. ಅದು ಕ್ವಿಂಟಾಲ್ ಇರಬೇಕು.

ಶ್ರೀ ಕೃಷ್ಣ ಬೈರೇಗೌಡ:– ಉತ್ಪಾದನೆ ಬೇಲ್ಸ್. ಉತ್ಪಾದಕತೆ Kilo grams. ಇದು ಆಗಬೇಕಾಗಿರುವಂಥದ್ದು. ಆಗದೇ ಇರುವುದು ಬಹಳಷ್ಟು ಇದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಅದೇ ರೀತಿ ಸಾರಾಸಗಟಾಗಿ ಎಲ್ಲವನ್ನೂ ತಿರಸ್ಕೃತ ಮಾಡುವಂಥದ್ದು ಏನೂ ಆಗಿಲ್ಲ ಎಂದು ಹೇಳುವಂಥದ್ದು ಸರಿಯಲ್ಲ. ಏಕೆಂದರೆ ಎಲ್ಲರೂ ಕುಳಿತು ಸರ್ಕಾರ ನಡೆಸಿದ್ದೀರಿ. ಎಲ್ಲರೂ ಆಡಳಿತ ಮಾಡಿದ್ದೀರಿ. ಎಲ್ಲರದ್ದೂ ಇದರಲ್ಲಿ ಕೊಡುಗೆ ಇದೆ. ಸಾಕಷ್ಟು ನಾವು ಪ್ರಗತಿ ಮಾಡಿದ್ದೇವೆ. ಪ್ರಗತಿ ಆಗಬೇಕಾಗಿರುವುದು ಇದೆ. ಅದಕ್ಕೆ ಬರುತ್ತೇನೆ. ಬಹಳ ಮುಖ್ಯವಾಗಿ ಇವತ್ತು ಬಿತ್ತನೆ ಸ್ವಲ್ಪ ಪ್ರಮಾಣದಲ್ಲಿ ಆಗಿದೆ. ಆದರೆ ಇವತ್ತು ಮಳೆ ಕೊರತೆ ಎದ್ದು ಕಾಣುತ್ತಿದೆ. ಅದಕ್ಕೆ ಬೇಕಾದ ರೀತಿಯಲ್ಲಿ ಪರ್ಯಾಯ ಯೋಜನೆ, contingency plan ಅನ್ನೂ ನಮ್ಮ ಇಲಾಖೆಯವರು ಮಾಡಿಕೊಂಡಿದ್ದಾರೆ ಎನ್ನುವ ವಿಚಾರವನ್ನು ತಮ್ಮೆಲ್ಲರಿಗೂ ತಿಳಿಸಲು ಬಯಸುತ್ತೇನೆ. ಜುಲೈ ಮೊದಲ ವಾರದವರೆಗೂ ನೋಡುತ್ತೇವೆ. ಜುಲೈ 10

ರೊಳಗೆ ಮುಂಗಾರು ಸುಧಾರಣೆ ಆಗಲಿಲ್ಲವೆಂದರೆ ತಕ್ಷಣ ಸ್ವಲ್ಪ ಸಮರೋಪಾದಿಯಲ್ಲಿ contingency plan, ಅಂದರೆ ನಾವು ಇಲ್ಲಿಯವರೆಗೂ ದೀರ್ಘಾವಧಿ ಬೆಳೆಗಳನ್ನು ನಾವು ಶಿಫಾರಸ್ಸು ಮಾಡಿದ್ದೇವೆ. ಅದು ಸ್ವಲ್ಪ ಪ್ರಮಾಣದಲ್ಲಿ ಬಿತ್ತನೆ ಕೂಡ ಆಗಿದೆ. ಈಗ ಬಿತ್ತನೆ ಒಣಗಿ ಹೋಗಿದೆ ಎನ್ನುವುದನ್ನು ಕಣ್ಣಾರೆ ನಾನು ಚಾಮರಾಜ ನಗರ, ಮೈಸೂರು ಭಾಗದಲ್ಲಿ ಹೋಗಿ ನೋಡಿದ್ದೇನೆ. ಅಕಸ್ಮಾತ್ ಮುಂಗಾರು ಇದೇ ರೀತಿ ಕೈ ಕೊಟ್ಟರೆ ತಕ್ಷಣ ನಾವು ಸ್ವಲ್ಪ ಮಧ್ಯಮಾವಧಿ ಬೆಳೆಗಳಿಗೆ ಅಥವಾ ಅಲ್ಪಾವಧಿ ಬೆಳೆಗಳಿಗೆ ಬೇಕಾದಂತಹ ಬಿತ್ತನೆ ಬೀಜಗಳನ್ನು ತಯಾರು ಮಾಡಿ ಇಟ್ಟುಕೊಂಡಿದ್ದೇವೆ. ಅದಕ್ಕೆ ವ್ಯಾಪಕವಾಗಿ ಪ್ರಚಾರ ಕೊಟ್ಟು . . .

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಳೆ ಬೀಳದೆ ಇದ್ದರೆ ಏನು ಮಾಡುವುದು?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ಈಗ ಬಿತ್ತನೆ ಆಗಿದೆ. ಮಳೆ ಬೀಳುವುದು ನಿಮ್ಮ ಕೈಯಲ್ಲಿ ಏನಾದರೂ ಇದ್ದರೆ ಹೇಳಿ ನೋಡೋಣ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಳೆ ಬೀಳುವುದು ನಿಮ್ಮ ಕೈಯಲ್ಲಿಯೂ ಇಲ್ಲ. ನಮ್ಮ ಕೈಯಲ್ಲಿಯೂ ಇಲ್ಲ. ಅದಕ್ಕೆ ಪರಿಹಾರ ಏನು? ಅದಕ್ಕೆ ಪರಿಹಾರ ಕೊಡಿ ಎಂದು ಕೇಳಿದ್ದು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ನಮ್ಮ ಬೀದರ್‌ನಲ್ಲಿ ಇನ್ನೂ ಬಿತ್ತನೆಯೇ ಆಗಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಬಿತ್ತನೆ ಆಗಿದೆ ಆದರೆ ಉತ್ತಿಲ್ಲ. ಬಿತ್ತನೆ ಆಗದೇ ಅಧಿಕಾರಿಗಳು ಬಿತ್ತನೆ ಆಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಈಗಾಗಲೇ ಮುಂಗಾರು ಬಿತ್ತನೆ ಮಾಡಿ ಪೈರೆಲ್ಲಾ ಒಣಗುತ್ತಿವೆ. ಮತ್ತೆ ಬರಗಾಲಕ್ಕೆ ತುತ್ತಾಯಿತು. ಅದಕ್ಕೆ ಏನಾದರೂ ಪರಿಹಾರ ಕೊಡಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರು ಉತ್ತರ ನೀಡುವುದನ್ನು ಪೂರೈಸಲಿ. ಆನಂತರ ಮಾತನಾಡಿ ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಬಿತ್ತನೆ ಎಷ್ಟು ಪ್ರಮಾಣದಲ್ಲಿ ಆಗಿದೆ ಎನ್ನುವುದನ್ನೂ ಹೇಳಿ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– ಬೆಂಗಳೂರು ನಗರ ಜಿಲ್ಲೆಯಲ್ಲಿ ಎಲ್ಲಿಯೂ ಉತ್ತಿಲ್ಲ. ಬರೀ ರೆವಿನ್ಯೂ ಲೇಔಟ್‌ಗಳಿವೆ. ನಮ್ಮ ಕೃಷಿ ಭೂಮಿಯಲ್ಲಿ ಸುಮಾರು 14,000 ಲೇಔಟ್‌ಗಳಾಗಿವೆ. ನಮ್ಮ ಕೃಷಿ ಸಚಿವರಿಗೆ ಗೊತ್ತಿದೆ. ದಯವಿಟ್ಟು ಅದರ ಬಗ್ಗೆ ಗಮನಹರಿಸಿ. ಬೆಂಗಳೂರು ಗ್ರಾಮಾಂತರದಲ್ಲಿ ಕೃಷಿ ಹೆಚ್ಚು ಕಡಿಮೆ ನಿಂತು ಹೋಗಿದೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಬಹಳ ಗೌರವ ಪೂರ್ವಕವಾಗಿ ತಮ್ಮ ಹಾಗೂ ಸದಸ್ಯರ....

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಬೆಳೆ ಪರಿಹಾರಕ್ಕೆ ಸರ್ಕಾರ ಏನಾದರೂ ವಿಚಾರ ಮಾಡುತ್ತಿದೆಯೇ?

(ಗೊಂದಲ)

ಅಧ್ಯಕ್ಷರು:– ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ಕೇಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಬಹಳ ಗೌರವ ಪೂರ್ವಕವಾಗಿ ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ.

(ಗೊಂದಲ)

ಅಧ್ಯಕ್ಷರು:– ನಿಮ್ಮ line up argument ಮಾಡಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ನಾನು ಬಹಳ ಜವಾಬ್ದಾರಿಯಿಂದ ಇಲ್ಲಿ ನಿಂತು ಉತ್ತರ ಕೊಡುತ್ತಿದ್ದೇನೆ. ಬಿತ್ತನೆ ಆಗಿದೆ ಎಂದು ಸುಳ್ಳು ಮಾಹಿತಿಯನ್ನು ಸದನಕ್ಕೆ ಕೊಡುವಷ್ಟು ಬೇಜವಾಬ್ದಾರಿತನ ನನಗೆ ಇಲ್ಲ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ:– ಮಳೆ ಬಂದು ಬಿತ್ತನೆ ಮಾಡಿ ಬೆಳೆ ಬಂದಿದೆ. ಬೆಳೆ ಬಂದು ಒಣಗುತ್ತಿವೆ. ನಮ್ಮ ಭಾಗದಲ್ಲಿ ಏಪ್ರಿಲ್ ತಿಂಗಳಿನಲ್ಲಿಯೇ ಮಳೆ ಬಂದು ಒಳ್ಳೆಯ ಬೆಳೆ ಬಂದು, ನಾಶವಾಗುತ್ತಿವೆ. ನಮ್ಮ ಭಾಗದಲ್ಲಿ ಸಂಪೂರ್ಣವಾಗಿ ಬಿತ್ತನೆ ಆಗಿದೆ. ಸುಳ್ಳು ಅಲ್ಲ ಸತ್ಯ ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು:– ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ clarification ಕೇಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಜಿ.ಟಿ. ದೇವೇಗೌಡರು ನಾನು ಹೇಳಿದ್ದನ್ನು ಕೇಳಿಸಿಕೊಳ್ಳಲಿಲ್ಲ. ಇಷ್ಟೊತ್ತು ನಾನು ಅದನ್ನೇ ಹೇಳಿದ್ದು. ಅದಕ್ಕೋಸ್ಕರ ಮಾನ್ಯ ಬಿ.ಆರ್. ಪಾಟೀಲ್‌ರವರು ಬಿತ್ತನೆ ಎಲ್ಲಿ ಆಗಿದೆ ಎಂದು ಸಿಟ್ಟಾದರು. ಬೀದರ್, ಗುಲ್ಬರ್ಗಾದಲ್ಲಿ ಬಿತ್ತನೆ ಆಗಿಲ್ಲವೆಂದರೆ ಎಲ್ಲಿಯೂ ಆಗಿಲ್ಲವೆಂದು ಅಲ್ಲ. ರಾಜ್ಯದಲ್ಲಿ ಯಾವ ಭಾಗದಲ್ಲಿ.. . .

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ಸಾರಾಸಗಟಾಗಿ ಬಿತ್ತನೆ ಆಗಿದೆ ಎಂದು ಹೇಳಿದರೆ, ಸಾರಾಸಗಟಾಗಿ ಆಗಿಲ್ಲ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ನಾನು ಸಾರಾಸಗಟಾಗಿ ಹೇಳಲಿಲ್ಲ. ದಯವಿಟ್ಟು ನಾನು ಹೇಳುವುದನ್ನು ಕೇಳಿಸಿಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– ತಾವು ಜಗತ್ತಿನದ್ದು ಹೇಳುತ್ತಿದ್ದೀರಿ. ಕರ್ನಾಟಕದ್ದು ಹೇಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಏಕೆ ತಾವು ಈ ರೀತಿ ತಪ್ಪು ಕಲ್ಪನೆ ಮಾಡಿಕೊಳ್ಳುತ್ತಿದ್ದೀರಿ? ತಾವು ಅನಾವಶ್ಯಕವಾಗಿ ಏತಕ್ಕಾಗಿ ತಪ್ಪು ಕಲ್ಪನೆಯನ್ನು ಮಾಡಿಕೊಳ್ಳುತ್ತಿದ್ದೀರಿ?

ಶ್ರೀ ಬಿ.ಆರ್. ಪಾಟೀಲ್:– ತಾವು ಬಿತ್ತನೆಯು ಎಲ್ಲಾ ಕಡೆಯಲ್ಲಿ ಆಗಿದೆ ಎಂದು ಹೇಳುತ್ತಿದ್ದೀರಿ?

ಶ್ರೀ ಕೃಷ್ಣ ಭೈರೇಗೌಡ:– ನಾನು ಎಲ್ಲಾ ಕಡೆಯಲ್ಲಿ ಬಿತ್ತನೆ ಆಗಿದೆ ಎಂದು ಆ ತರಹ ಹೇಳಲಿಲ್ಲ. ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿ ಬಿತ್ತನೆ ಆಗಿದೆ ಎಂದು ಹೇಳಲೇ ಇಲ್ಲ.

ಅಧ್ಯಕ್ಷರು:– ಅವರು ಆ ರೀತಿಯಾಗಿ ಹೇಳಲಿಲ್ಲ.

ಶ್ರೀ ಕೃಷ್ಣ ಭೈರೇಗೌಡ:– ಕೆಲವು ಕಡೆಗಳಲ್ಲಿ ಆಗಿದೆ, ನಾನು ಹೇಳುವ ಮಾತನ್ನು ತಾವು ತಾಳ್ಮೆಯಿಂದ ಕೇಳಿಸಿಕೊಳ್ಳಬೇಕು. ಕೆಲವು ಕಡೆಗಳಲ್ಲಿ ಬಿತ್ತನೆ ಕೆಲಸ ಆಗಿದೆ, ಬಿತ್ತನೆ ಆಗಿರುವಂತಹದ್ದು ಒಣಗುತ್ತಿದೆ ಎಂದು ಸಹ ಹೇಳಿದ್ದೇನೆ. ಇನ್ನು ಕೆಲವು ಕಡೆಗಳಲ್ಲಿ ಬಿತ್ತನೆ ಕೆಲಸ ಆಗಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ದಯವಿಟ್ಟು ನಾನು ಹೇಳುವ ಮಾತನ್ನು ಕೇಳಿಸಿಕೊಳ್ಳಬೇಕು. ನಾನು ಯೋಚನೆ ಮಾಡಿ ಪದಗಳನ್ನು ಹೇಳುತ್ತಿದ್ದೇನೆ. ಎಲ್ಲಿ ಬಿತ್ತನೆ ಕೆಲಸ ಆಗಿದೆ, ಅದಕ್ಕೆ ಪರ್ಯಾಯ ಬೆಳೆಗಳನ್ನು, ಅಕಸ್ಮಾತ್ ಆ ಬೆಳೆ ಸಂಪೂರ್ಣವಾಗಿ ನಷ್ಟವಾದರೆ, ಆಗದೆ ಇರುವ ಕಡೆಗಳಲ್ಲಿ ಅದಕ್ಕೆ ಏನು ನಾವು ಮಧ್ಯಮಾವಧಿ ತಳಿಗಳನ್ನು ರೈತರಿಗೆ ತಿಳಿಸಬಹುದು, ಈ ಬಗ್ಗೆ ನಾವು ಜುಲೈ 10ರವರೆಗೆ ಕಾದು ಅಲ್ಲಿಯವರೆಗೂ ಸಹ ಮುಂಗಾರು ಮಳೆ ನಮಗೆ ಕೈಕೊಟ್ಟಿದ್ದೇ ಆದರೆ ನಮ್ಮ ಪರ್ಯಾಯ ಕಾರ್ಯಯೋಜನೆ ಏನಿದೆ, ಆ ಹಂತಕ್ಕೆ ನಾವು ಹೋಗುತ್ತೇವೆ. ನಾವು ಜುಲೈ 10ವರೆಗೆ ಕಾಯುವುದು ಒಳ್ಳೆಯದು ಎಂದು ವಿಜ್ಞಾನಿಗಳು ನಮಗೆ ಒಂದು advice ಕೊಟ್ಟಿದ್ದಾರೆ. ಅದರ ಪ್ರಕಾರವಾಗಿ ನಾವು ತಯಾರಿಯನ್ನು ಸಹ ಮಾಡಿಕೊಂಡಿದ್ದೇವೆನ್ನುವಂತಹ ವಿಚಾರವನ್ನು ಸಹ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ಬಹಳ ಬೇಡಿಕೆಯ ಸಂದರ್ಭದಲ್ಲಿ ಬಹಳ ವಿಸ್ತ್ರುತವಾಗಿ ಚರ್ಚೆಯಾದಂತಹ ವಿಚಾರ ಏನೆಂದರೆ ಬೆಳೆಗಳು ಬೆಳೆಯುತ್ತಿರುವ ಬಗ್ಗೆ ನಮಗೆ ಯೋಜನೆ ಇರಬೇಕು. ಅಂದರೆ crop planning, crop Pattern ಇರಬೇಕು. ಇದು ಒಂದು ಒಳ್ಳೆಯ ಸಲಹೆಯಾಗಿದೆ. ಇದು ಒಳ್ಳೆಯ ಸಲಹೆ ಅಲ್ಲವೆಂದು ನಾನು ಹೇಳುವುದಿಲ್ಲ ಅಥವಾ ಇದೇ ಮೊದಲನೆಯ ಬಾರಿಗೆ ಈ ಸಲಹೆ ಬಂದಿದೆ ಎಂದು ಅಲ್ಲ. ಬಹುಶಃ ನನಗೆ ತಿಳಿದ ಹಾಗೆ 20–30 ವರ್ಷದಿಂದ ಈ ಸಲಹೆಯು ಬಂದಿರಬಹುದು ಮಾನ್ಯ

ಅಧ್ಯಕ್ಷರೆ ಇದು ತಮಗೆ ಕೂಡ ಗೊತ್ತಿರಬಹುದು, ಇದೂ ಇದೆ. ನಾವು ರೈತರಿಗೆ ಎಲ್ಲಾದರೂ ಒಂದು ಕಡೆಯಲ್ಲಿ ಹೋಗಿ ನೀವು ಈ ಬೆಳೆಯನ್ನು ಏತಕ್ಕಾಗಿ ಬೆಳೆಯುತ್ತೀರಿ, ಇದೇ ಬೆಳೆಯನ್ನು ಬೆಳೆಯಿರಿ ಎಂದು ಹೇಳಿದರೆ ನಮ್ಮ ಮಾತನ್ನು ಕೇಳುವಂತಹ ಹಂತದಲ್ಲಿ ಯಾವ ರೈತನು ಕೂಡ ಇಲ್ಲ. ಈ ಬಗ್ಗೆ ನಾನು ವೈಯಕ್ತಿಕವಾದ ಅನುಭವವನ್ನು ಹೇಳುತ್ತಿದ್ದೇನೆ. ಕಳೆದ ವರ್ಷ ಬಿತ್ತನೆ ಆದ ನಂತರ ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕು ಮತ್ತು ಜಗಳೂರು ತಾಲ್ಲೂಕಿನ ಒಂದು ಗಡಿಯ ಹತ್ತಿರ ಒಬ್ಬ ರೈತರ ಜಮೀನಿಗೆ ಹೋಗಿದ್ದೆ. ಅವರು ಮೆಕ್ಕೆ ಜೋಳವನ್ನು ಹಾಕಿದ್ದರು, ಅವರು ಅದರ ಬಗ್ಗೆ ಸಮಸ್ಯೆಯನ್ನು ಹೇಳುತ್ತಿದ್ದರು. ನಾವು ನಿಮಗೆ ಬಿಳಿಜೋಳ ಬೆಳೆಯಿರಿ, ರಾಗಿ ಬೆಳೆಯಿರಿ ಎಂದು ನಾವು ಹೇಳಿದರೆ ನಿಮಗೆ ನಾವು ಮೆಕ್ಕೆ ಜೋಳ ಬೆಳೆಯಿರಿ ಎಂದು ಹೇಳಿದ್ದೇವಾ ಎಂದು ಹೇಳಿದರೆ ಅವರು ನೇರವಾಗಿ ನಾನು ಮಂತ್ರಿಯಾಗಿದ್ದೇನೆ ಮತ್ತೊಂದು ಆಗಿದ್ದೇನೆ ಯಾವುದನ್ನೂ ಲೆಕ್ಕಕ್ಕೆ ಇಟ್ಟುಕೊಳ್ಳದೆ ನನ್ನ ಮುಖಕ್ಕೆ ನೇರವಾಗಿ ಉತ್ತರವನ್ನು ಕೊಟ್ಟ. ನೀವ್ಯಾರಿ ನಮಗೆ ಹೇಳುವವರು ನಮಗೆ ಇಷ್ಟ ಬಂದದ್ದನ್ನು ನಾವು ಬೆಳೆಯುತ್ತೇವೆ, ನಾವು ಬೆಳೆಯುವುದಕ್ಕೆ ಯಾವುದು ಅನುಕೂಲವಿದೆ, ಅದನ್ನು ನಾವು ಬೆಳೆಯುತ್ತೇವೆ ಎಂದು ಹೇಳಿದರು. ನೀನು ಮೆಕ್ಕೆಜೋಳ ಬೆಳೆಯಬೇಡ, ಇದು ಎಲ್ಲಾ animal feedಗೆ ಹೋಗುತ್ತದೆ ಇದು ಆಹಾರ ಪದಾರ್ಥ ಅಲ್ಲ ನಮ್ಮ ಆಹಾರ ಭದ್ರತೆಯ ದೃಷ್ಟಿಯಿಂದ ನೀನು ರಾಗಿಯನ್ನೆ ಬೆಳೆಯಬೇಕು, ಬಿಳಿ ಜೋಳ ಬೆಳೆಯಬೇಕೆಂದು ಹೇಳಿದರೆ ಅವರು ಕೇಳುವಂತಹ ಪರಿಸ್ಥಿತಿಯಲ್ಲಿಲ್ಲ. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ ಮಾನ್ಯ ಅಧ್ಯಕ್ಷರೆ ಅದು ತಮಗೂ ಸಹ ಗೊತ್ತಿದೆ. ಅಡಿಕೆ ಬೆಳೆಯುವುದಕ್ಕೆ ಒಂದು ಸೀಮಿತವಾದಂತಹ ಪ್ರದೇಶ ಇದೆ. ಅದರ ಬಗ್ಗೆ ಕೇಂದ್ರಸರ್ಕಾರವು ಬೋರ್‌ವೆಲ್ ಆಧಾರಿತವಾಗಿ ಅಡಿಕೆಯನ್ನು ಬೆಳೆಯುವುದು ಸೂಕ್ತವಲ್ಲ ಎಂದು ಹೇಳುತ್ತದೆ. ಈ ಬಗ್ಗೆ ನಾವು ಯಾರನ್ನಾದರೂ ನಿಲ್ಲಿಸುವುದಕ್ಕೆ ಸಾಧ್ಯವೇ? ಈ ಬಗ್ಗೆ ತಾವು ಹೇಳಬೇಕು. ಯಾರಾದರೂ ನಮ್ಮ ಮಾತನ್ನು ಕೇಳುತ್ತಾರೆಯೇ? ಈಗ ಬೋರ್‌ವೆಲ್ ಹಾಕಿರುವವರಿಗೆ ನಾವು dripಗೆ subsidy ಕೊಡುವುದಿಲ್ಲ ಎಂದಿದ್ದಕ್ಕೆ ನಮ್ಮ

ಮೇಲೆ ದೊಡ್ಡ ಜಗಳ ನಡೆಯುತ್ತಿದೆ. ಈ ವಿಚಾರವು ತಮಗೂ ಸಹ ಗೊತ್ತಿರಬಹುದು, ಇದು ಹೌದೋ ಅಥವಾ ಇಲ್ಲವೋ? ಇನ್ನು ನಮ್ಮ ಕೋಲಾರ ವಿಭಾಗದಲ್ಲಿ ಅಂತರಜಲವು 1300 ರಿಂದ 1400 ಅಡಿಗೆ ಕುಸಿದುಹೋಗಿದೆ. ನೋಡು ಈ ರೀತಿಯಾಗಿದೆ ನೀನು ಬೋರ್‌ವೆಲ್ ಹಾಕಬೇಡ ಎಂದು ಹೇಳಿದರೆ ಅವರ್‍ಯಾರು ನನ್ನ ಮಾತನ್ನು ಕೇಳುತ್ತಾರೆಯೇ? ಅವರು ನನಗೆ ಕೊಡುವ ಉತ್ತರ ಏನಿರುತ್ತದೆ ಎಂದು ತಾವೇ ಊಹೆ ಮಾಡಿಕೊಳ್ಳಿ. Crop planning, ಹೇಳುವುದು ಒಳ್ಳೆಯ ಸಲಹೆಯಾಗಿದೆ. ಆದರೆ ರೈತ ಇರುವಂತಹ ಕಷ್ಟದಲ್ಲಿ ....

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, Sorry ನಾನು ಮಧ್ಯ interfere ಆಗುವುದು ನನಗೆ ಇಷ್ಟವಿಲ್ಲ, ನಿಮ್ಮ flow of thoughts break ಮಾಡಬಾರದು, but it leads to distortion of facts. This should not happen. You are presenting a matter in isolation of other things. ಅದು ಆಗಕೂಡದು. ನಾವು ಏನು ಹೇಳುತ್ತೇವೆಂದರೆ cropping pattern ಅನ್ನು ನೀವು legitimize ಮಾಡಿ, legislate ಮಾಡಿ, ಅವರಿಗೆ price assurance ಕೊಡಿ, demand and supply theory ನೋಡಿಕೊಳ್ಳಿ. ನೀನು ಯಾವುದನ್ನು ಬೆಳೆದರೆ ಕ್ಷೇಮ ಎಂದು ಹೇಳಿಕೊಳ್ಳಿ. Marketನಲ್ಲಿ ಯಾವುದು ಬೇಕಾಗುತ್ತದೆ ಎಂದು ಹೇಳಿ. ಇದನ್ನು ಬೆಳೆದರೆ ನಾವು ಜವಾಬ್ದಾರಿಯಲ್ಲ ಎಂದು ಹೇಳಿ. ನಿಮಗೆ accountability ಇಲ್ಲದೆ ನೀವು ಹರಿಕತೆ ದಾಸರ ತರಹ ಉಪನ್ಯಾಸ ಹೇಳುವುದಕ್ಕೆ ಹೋದರೆ ಅವನು ಬೋರ್‌ವೆಲ್ ಹಾಕಬೇಡ ಎಂದು ಹೇಳಿದರೆ ಅವನು ಕೇಳುತ್ತಾನೇನು? See, you should legislate. ನಿಮ್ಮ ಮೇಲೆ ಜವಾಬ್ದಾರಿ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ:- ನಾವು ಹರಿಕತೆ ದಾಸರು ಅಲ್ಲ, ಉಪನ್ಯಾಸ ಮಾಡುವವನು ಅಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ರೈತನ ಬಾಳಿನ ಸಂಕ್ಷೇಮದ ಜವಾಬ್ದಾರಿಯನ್ನು ತೆಗೆದುಕೊಂಡು ನೀವು ಸಲಹೆಯನ್ನು ಕೊಟ್ಟರೂ ಆದೇಶ ಕೊಟ್ಟರೂ ಅವನು ನಿಮ್ಮನ್ನು ಗೌರವಿಸುತ್ತಾನೆ. ಅವನ ಬಾಳಿಗೆ ನಿಮ್ಮ ಉತ್ತರದಾಯಿಕತ್ವ ಇಲ್ಲದೆ ನೀವು ಕೇವಲ ಸಲಹೆಯನ್ನು ಕೊಟ್ಟರೆ ನಿಮ್ಮ ಮಾತನ್ನು ಯಾರು ಕೇಳುತ್ತಾರೆ?

ಶ್ರೀ ಬಿ.ಆರ್. ಪಾಟೀಲ್:– ಅಧ್ಯಕ್ಷರೆ, ಸರ್ಕಾರ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಬಾರದು. Ground Water Regulation and Control Act ಎನ್ನುವ model act Central Governmentನಿಂದ ಬಂದಿದೆ. ಆ ಕಾಯಿದೆಯನ್ನು ತೆಗೆದುಕೊಂಡು ಬನ್ನಿ, Act ಮಾಡಿ.

ಶ್ರೀ ಕೃಷ್ಣ ಭೈರೇಗೌಡ:– ನಾವು ಪರ್ಯಾಯವಾಗಿ ರೈತನಿಗೆ ಯಾವ ರೀತಿಯಾಗಿ ಉತ್ತೇಜನವನ್ನು ಕೊಡಬಹುದು. ಇಂತಹ ಬೆಳೆಯನ್ನು ಬೆಳೆಯುವುದಕ್ಕೆ ಮತ್ತು ನಾವು ಕೆಲವಕ್ಕೆ ಉತ್ತೇಜನವನ್ನು ಕಡಿಮೆ ಮಾಡಬಹುದು, ಅದರ ಕಡೆಗೆ ನಾವು ಲಕ್ಷ್ಯವನ್ನು ಕೊಡುತ್ತಿದ್ದೇವೆ. ಉದಾಹರಣೆ ಹೇಗೆ ಎಂದು ತಾವು ಕೇಳಬಹುದು. ಕಳೆದ ವರ್ಷ ನಾವು ಬೆಂಬಲ ಬೆಲೆಯಲ್ಲಿ ರೈತರಿಂದ ಖರೀದಿ ಮಾಡುವಂತಹ ಸಂದರ್ಭದಲ್ಲಿ ಮೆಕ್ಕೆಜೋಳಕ್ಕೆ 1310 ರೂಪಾಯಿಗಳನ್ನು ನಿಗದಿಮಾಡಿದ್ದೆವು. ಬೆಂಬಲ ಬೆಲೆಯನ್ನು ಜಾಸ್ತಿ ಮಾಡಿ ಎಂದು ಆ ಸಂದರ್ಭದಲ್ಲಿ ಬಹಳ ಒತ್ತಡ ಇತ್ತು. ನಾವು ಏತಕ್ಕಾಗಿ ಬೆಂಬಲ ಬೆಲೆಯನ್ನು ಜಾಸ್ತಿ ಮಾಡಲಿಲ್ಲದ್ದಕ್ಕೆ ನಾವು ಪರ್ಯಾಯವಾಗಿ ರಾಗಿ ಮತ್ತು ಜೋಳಕ್ಕೆ 1800 ರೂಪಾಯಿಗಳಷ್ಟು ನಾವು ಘೋಷಣೆಯನ್ನು ಮಾಡಿದೆವು. ನಾವು ಏತಕ್ಕಾಗಿ ಮಾಡಿದ್ದೇವೆಂದರೆ, ಇದರಿಂದ ರಾಗಿ ಮತ್ತು ಜೋಳ ಬೆಳೆಯುವ ಬಗ್ಗೆ ಆಕರ್ಷಣೆಯಾಗಲಿ, ಮೆಕ್ಕೆಜೋಳದ ಆಕರ್ಷಣೆ ಒಂದು ಸ್ವಲ್ಪ ಕಡಿಮೆಯಾಗಲಿ, ರೈತರುಗಳಿಗೆ ಹೆಚ್ಚು ಆ ಕಡೆಗೆ ಅಕರ್ಷಣೆಯಾಗಲಿ ಎಂದು ಮಾಡಿದೆವು. ಆ ತರಹ ನಾವು ಬೆಂಬಲ ಬೆಲೆಯನ್ನು ಘೋಷಣೆ ಮಾಡುವಂತಹ ಸಂದರ್ಭದಲ್ಲಿ ಯಾವ ಬೆಳೆಗಳಿಗೆ ಉತ್ತೇಜನವನ್ನು ಕೊಡಬೇಕು, ಅದನ್ನು ನೋಡಿಕೊಂಡು ನಾವು ಆ ದಿಕ್ಕಿನಲ್ಲಿ ಕ್ರಮ ವಹಿಸುತ್ತಿದ್ದೇವೆ. ಇನ್ನೊಂದು ವಿಚಾರದ ಬಗ್ಗೆ ಬಹಳ

ವರ್ಷಗಳಿಂದ ಬೇಡಿಕೆ ಇತ್ತು. ಕೆಲವು ಬೆಳೆಗಳಿಗೆ ನೀವು ಬಿತ್ತನೆ ಆದ ಮೇಲೆ ಬೆಲೆಯನ್ನು ಘೋಷಣೆ ಮಾಡುವುದಲ್ಲ, ಬಿತ್ತನೆ ಆಗುವಂತಹ ಸಂದರ್ಭದಲ್ಲಿ ಮಾಡಬೇಕು. ಬಹಳ ವರ್ಷಗಳಿಂದ ಆ ರೀತಿಯಾದಂತಹ ಸಲಹೆ ಇದ್ದರೂ ಕೂಡ ಯಾರು ಅದನ್ನು ಮಾಡಿರಲಿಲ್ಲ. ಈ ವರ್ಷ ನಾವು ಆಹಾರ ಮಂತ್ರಿಗಳು, ಮಾನ್ಯ ಕಾನೂನು ಮಂತ್ರಿಗಳು ಕುಳಿತುಕೊಂಡು ಈ ಬಗ್ಗೆ ಮಾತನಾಡಿ ರಾಗಿ ಹಾಗೂ ಬಿಳಿಜೋಳಕ್ಕೆ ಈ ವರ್ಷ ಅಂದರೆ ಇನ್ನು ಒಂದು ವಾರದೊಳಗಾಗಿ ನಾವು ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತಿದ್ದೇವೆ. ಹಾಗಾಗಿ ಅದನ್ನು ಹೆಚ್ಚು ಮಾಡಿ ಹೋದ ವರ್ಷ ನಾವು ಏನು ಕೊಟ್ಟಿದ್ದೆವು, ಆ ಬಗ್ಗೆ ಕ್ಯಾಬಿನೆಟ್‌ನಲ್ಲಿ ಅಂತಿಮವಾಗಿ ತೀರ್ಮಾನ ಆಗದೆ ಇರುವುದರಿಂದ ಈ ಬಗ್ಗೆ ನಾನು ಪ್ರಕಟ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ವರ್ಷ ಬಿತ್ತನೆ ಆಗುವಂತಹ ಸಂದರ್ಭದಲ್ಲಿಯೇ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಆ ಬೆಳೆಗಳನ್ನು ಹೆಚ್ಚು ಆಕರ್ಷಣೀಯ ಮಾಡತಕ್ಕಂಥದ್ದು ರೈತರನ್ನು ಆ ಕಡೆಗೆ ಸೆಳೆಯುವುದನ್ನು ನಾವು ಆ ಪ್ರಯತ್ನವನ್ನು ಸಹ ಮಾಡುತ್ತಿದ್ದೇವೆ. ತಾವು ಏನು ಹೇಳಿದ್ದೀರಿ, ಬೆಲೆ ಆಧಾರಿತವಾಗಿ ನಾವು ರೈತರಿಗೆ ಒಂದು ಸಂದೇಶವನ್ನು ಕೊಡಬೇಕೆನ್ನುವಂತಹ ಪ್ರಯತ್ನವನ್ನು ಈ ವರ್ಷ ನಾವು ಮಾಡುತ್ತಿದ್ದೇವೆ ಎನ್ನುವಂತಹದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕೆಲವು ಸದಸ್ಯರುಗಳು ಮಾತನಾಡುವಂತಹ ಸಂದರ್ಭದಲ್ಲಿ ಕೃಷಿಯಲ್ಲಿ ಬಂಡವಾಳ ಹೂಡಿಕೆ capital investment ಹೇಗಾಗುತ್ತಿದೆ, ಎಷ್ಟು ಪ್ರಮಾಣದಲ್ಲಿ ಆಗುತ್ತಿದೆ ಈ ಬಗ್ಗೆ ಚರ್ಚೆ ಮಾಡಿದ್ದರು. ನಾನು ಆಗಲೇ ಹೇಳಿದ ಹಾಗೆ ಹೆಚ್ಚಿನ ಬಂಡವಾಳ ಹೂಡಿಕೆ ನೀರಾವರಿ ಇಲಾಖೆಯಿಂದ, ವಿದ್ಯುತ್ ಇಲಾಖೆಯಿಂದ ಹಾಗೂ ಇತರೆ ಇಲಾಖೆಗಳಿಂದ ಆಗುತ್ತದೆ. ನಮ್ಮ ಹಂತದಲ್ಲಿ ನಾವು ಬಂಡವಾಳ ಹೂಡಿಕೆ ಕಡೆಗೂ ಸಹ ಗಮನ ಕೊಡುತ್ತಿದ್ದೇವೆ. ಯಾವ ರೀತಿ ಕೊಡುತ್ತೀರಿ ಎಂದು ತಾವು ಕೇಳಬಹುದು, ಆಹಾರ ಸಂಸ್ಕರಣೆಗೆ ಬೇಕಾದಂತಹ ಘಟಕಗಳನ್ನು ಪ್ರೋತ್ಸಾಹ ಮಾಡುವುದು, ರಾಜ್ಯದ 4 ಕಡೆಗಳಲ್ಲಿ ಹಿಂದಿನ ಸರ್ಕಾರಗಳು Food Park ಮಾಡಿದೆ. ಅವುಗಳ ಬಗ್ಗೆ ವಿಶೇಷವಾದಂತಹ ಆಸಕ್ತಿಯನ್ನು ತೆಗೆದುಕೊಂಡು ಖಾಸಗಿ ಕಂಪನಿಗಳು

ಬಂದು ಅಲ್ಲಿ investment ಮಾಡುವಂತಹ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ಅದನ್ನು ನಾವು ಮಾಡುತ್ತಿದ್ದೇವೆ. ಇದರ ಜೊತೆಗೆ ರಾಜ್ಯದ ಅನೇಕ ಭಾಗಗಳಲ್ಲಿ cold storage, ಶಿಥಿಲೀಕರಣ ಘಟಕಗಳನ್ನು ಸ್ಥಾಪನೆ ಮಾಡುವಂತಹ ಕೆಲಸವನ್ನು ನಾವು ನಮ್ಮ ಇಲಾಖೆ ಕಡೆಯಿಂದ ಮಾಡುತ್ತಿದ್ದೇವೆ. ಇನ್ನು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ warehouse ಅನ್ನು ಕಟ್ಟುವಂತಹ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ. ಒಂದು ಅಧ್ಯಯನದ ಪ್ರಕಾರ ನಮ್ಮ ರಾಜ್ಯದಲ್ಲಿ ಮುಂದಿನ ಅಂದರೆ 2025ನೇ ಇಸವಿಯಷ್ಟರಲ್ಲಿ 65 ಲಕ್ಷಟನ್‌ನಷ್ಟು ಉಗ್ರಾಣ ಸಾಮರ್ಥ್ಯದ warehouse ನ ಅವಶ್ಯಕತೆ ಇದೆ ಎನ್ನುವುದು ನಮ್ಮ ಅಧ್ಯಯನದ ಪ್ರಕಾರ ಇರುವಂತಹ ಅಂದಾಜು ಆಗಿದೆ. ಇವತ್ತು ನಮ್ಮ ಹತ್ತಿರ ಇರುವಂತಹದ್ದು ಕೇವಲ 30 ಲಕ್ಷ ಮೆಟ್ರಿಕ್ ಟನ್‌ನಷ್ಟು capacity ಇದೆ. ಹಾಗಾಗಿ 35 ಲಕ್ಷ ಮೆಟ್ರಿಕ್ ಟನ್‌ನ warehouses ಅನ್ನು ನಾವು ಸೃಷ್ಟಿ ಮಾಡಬೇಕಾಗುತ್ತದೆ. ಇದಕ್ಕಾಗಿ ನಾವು ನಮ್ಮ ಇಲಾಖಾ ವತಿಯಿಂದ ಸುಮಾರು 1 ಲಕ್ಷ ಮೆಟ್ರಿಕ್ ಟನ್‌ನಷ್ಟು storage capacity built ಮಾಡುವಂತಹ ಕಾರ್ಯಕ್ರಮವನ್ನು ಈ ವರ್ಷದಲ್ಲಿ ಹಾಕಿಕೊಳ್ಳುತ್ತಿದ್ದೇವೆ. ನಾನು ಈ ವರ್ಷಕ್ಕೆ ಮಾತ್ರ ಹೇಳುತ್ತಿದ್ದೇನೆ. ಇದಕ್ಕಾಗಿ ಸುಮಾರು 70 ರಿಂದ 75 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ನಾವು ಇನ್ನು ಕೆಲವೇ ದಿನಗಳಲ್ಲಿ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಬರುತ್ತಿದ್ದೇವೆ. ಇದಷ್ಟೇ ಅಲ್ಲ, ಉಗ್ರಾಣ ನಿಗಮದವರು ಸಹ 1.6 ಲಕ್ಷ ಮೆಟ್ರಿಕ್ ಟನ್ ಅಷ್ಟು ಅವರದು warehouse complete ಆಗಿದೆ. ಇನ್ನುಳಿದ ಹಾಗೆ 1.69 lakh tonnes ಈಗ ಕೆಲಸ ಪ್ರಗತಿಯಲ್ಲಿದೆ. ಜೊತೆಗೆ ಇನ್ನು 8.00 ಲಕ್ಷ ಮೆಟ್ರಿಕ್ ಟನ್‌ನಷ್ಟು capacity ಇರುವ warehouses ಅನ್ನು ಕಟ್ಟಬೇಕೆಂದು ಇದೆ. ಇದರಲ್ಲಿ ಎರಡು ಮೂರು ವಿಧ ಇದೆ, ಒಂದು ಅವರೇ ಕಟ್ಟುವಂಥದ್ದು, ಇನ್ನೊಂದು ಇನ್ನು ಕೆಲವೇ ದಿನಗಳಲ್ಲಿ ಒಂದು PPP model ತೆಗೆದುಕೊಂಡು ಮಾಡುವುದು, ಯಾವ ರೀತಿ ಎಂದು ಹೇಳಿದರೆ ಅವರಿಗೆ ಕನಿಷ್ಠ ಐದು ವರ್ಷ ನಾವು ನಿಮಗೆ ಇಷ್ಟು storage ಉಪಯೋಗ ಮಾಡಿಕೊಳ್ಳುತ್ತೇವೆಂದು ಅವರಿಗೆ guarantee purchase of spaceನ assurance ಕೊಟ್ಟು private ನವರು ಸಹ invest

ಮಾಡುವುದರ ಮೂಲಕ ಅವರು ಒಂದು warehousing Corporation ನವರು 11.50 ಲಕ್ಷ ಟನ್ warehouse capacity build ಮಾಡಲಿಕ್ಕೆ ಅವರು ಸಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಜೊತೆಗೆ ಖಾಸಗಿಯವರು ಉಗ್ರಾಣವನ್ನು ಕಟ್ಟುವುದಾದರೆ ಅವರಿಗೆ 5 ವರ್ಷಗಳ ಅವಧಿಗೆ ಬಡ್ಡಿ ಏನಿದೆ, ಆ ಬಡ್ಡಿಯನ್ನು ನಾವು ಕೊಡುತ್ತೇವೆನ್ನುವ ಯೋಜನೆಯನ್ನು ಈಗಾಗಲೇ ನಮ್ಮ ಇಲಾಖೆಯಿಂದ ಘೋಷಣೆ ಮಾಡಿದ್ದೇವೆ. ಅದರ ಬಗ್ಗೆ ನಾವು ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಸಹ ಕೊಟ್ಟಿದ್ದೇವೆ. Interest subsidy, 5 ವರ್ಷಗಳಿಗೆ ಯಾರಾದರೂ ಖಾಸಗಿಯವರು ಕಟ್ಟುವುದಾದರೆ 10% ವರೆಗೆ interest subsidy ಯನ್ನು ಕೊಡುವಂಥ ಯೋಜನೆಯನ್ನು ಸಹ ಹಾಕಿಕೊಂಡಿದ್ದೇವೆ. ಇನ್ನೊಂದು ಪ್ರಶ್ನೆ ಎತ್ತಿದ್ದರು, ಈ Global Investors Meet ಜೊತೆಗೆ capital investment ಬಂದಾಗ ಒಂದು ಕಡೆ drip irrigation ಸಹ ಅದು ಐದು ವರ್ಷಗಳ ಕಾಲಾವಧಿ ಇರುವುದರಿಂದ ಅದನ್ನು ಸಹ capital investment ಎಂದು ಪರಿಗಣಿಸುವುದು. ಇದರಲ್ಲಿ mechanization ನಲ್ಲಿ ನಾನು ಮಾತನಾಡುತ್ತೇನೆ. ಜೊತೆಗೆ ನೀರಾವರಿ ಇಲಾಖೆಯವರು ಸಹ ಹಿಂದಿನ ವರ್ಷದಲ್ಲಿ ಏನು ತಯಾರು ಆಗಿತ್ತು, ಸುಮಾರು 7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ micro irrigation ಹನಿ ನೀರಾವರಿಯನ್ನು ಅಳವಡಿಸಬೇಕೆಂಬ ಒಂದು ಕಾರ್ಯ ಯೋಜನೆಯನ್ನು ಸಹ ಅವರು ಹಾಕಿಕೊಂಡಿದ್ದಾರೆ. ಅದರಿಂದ ನೀರಿನ ಉಳಿತಾಯವು ಸಹ ಆಗುತ್ತದೆ. ಹಿಂದೆ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಆಗಿತ್ತು, ಅದರಿಂದ ಏನು ಬಂತು, ಏನಾಯಿತು, ಏನು ಹೋಯಿತು ಎಂದು ಕೇಳಿದರು. ಅದರ ಅಂಕಿಸಂಖ್ಯೆಯನ್ನು ಸಹ ಕೊಡಬೇಕೆಂದು ಆಗ್ರಹಿಸಿದರು. ಸುಮಾರು 69 ಪ್ರಸ್ತಾವನೆಗಳನ್ನು ಆ ಸಂದರ್ಭದಲ್ಲಿ ಸರ್ಕಾರ ಅಂಗೀಕಾರ ಮಾಡಿತ್ತು. ಅದರ ಒಟ್ಟು ಮೌಲ್ಯ 61,200 ಕೋಟಿ ರೂಪಾಯಿಗಳ ಮೌಲ್ಯದ ಪ್ರಸ್ತಾವನೆಗಳನ್ನು ಅಂಗೀಕರಿಸಲಾಗಿತ್ತು. ಅದರಲ್ಲಿ ಇವತ್ತು ನಮ್ಮ ಮುಂದೆ ಉಳಿದಿರತಕ್ಕಂಥವು, ಉಳಿದವು ಏನಾಯಿತು ಎನ್ನುವುದು ಬೇರೆ ವಿಚಾರ. ಆದರೆ ಅದರಲ್ಲಿ ಉಳಿದಿರುವಂಥದ್ದು 31 ಪ್ರಸ್ತಾವನೆಗಳು. ಅದರ ಮೌಲ್ಯ ಹನ್ನೊಂದು ಸಾವಿರದ

ಮೂವತ್ತೆರಡು ಕೋಟಿ ರೂಪಾಯಿಗಳು. ಇಷ್ಟು ಪ್ರಸ್ತಾವನೆಗಳು ಇವತ್ತು ಸಕ್ರಿಯವಾಗಿ follow up ನಲ್ಲಿವೆ. ಅದರಲ್ಲಿ ಸುಮಾರು 26 ಕಂಪೆನಿಗಳು 800 ಕೋಟಿ ರೂಪಾಯಿಗಳೇನಿವೆ, ಅವರ ಜೊತೆಗೆ ನಾವು regular ಆಗಿ ಸಭೆಗಳನ್ನು ನಡೆಸಿ ಅವರಿಗೆ ಬೇಕಾದಂಥ ಸರ್ಕಾರದ ಅನುಮತಿಗಳನ್ನು ಕೊಡಿಸುವಂಥದ್ದು, ಅವರಿಗೆ ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದ ಕೊಡಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಒಟ್ಟು 26 ಪ್ರಸ್ತಾವನೆಗಳು ಸುಮಾರು 800 ಕೋಟಿ ಮೌಲ್ಯದ ಪ್ರಸ್ತಾವನೆಗಳು ಇವತ್ತು ಸಕ್ರಿಯವಾಗಿ follow up ನಲ್ಲಿವೆ. ಅದೇ ರೀತಿ ಬಂಡವಾಳ ಬಂದಂಥ ಸಂದರ್ಭದಲ್ಲಿ ನಾನು ಆರಂಭದಲ್ಲಿಯೇ ಹೇಳಿದೆ, ಕೃಷಿಯಲ್ಲಿ ಬದಲಾವಣೆ ಆಗುತ್ತಿದೆ, ಅದಕ್ಕೆ ತಕ್ಕ ಹಾಗೆ ನಾವು ಹೊಂದಿಕೆ ಆಗಬೇಕಾಗಿದೆ, ಹೊಂದಿಕೆ ಆಗಬೇಕಾದರೆ ಅದಕ್ಕೆ ಬೇಕಾಗುವ ಯಾಂತ್ರೀಕರಣದ ಕೃಷಿ ಕಡೆಗೆ ನಾವು ಹೋಗಬೇಕಾಗುತ್ತದೆ. ನಾವು labour ಆಧಾರಿತದಿಂದ ಸ್ವಲ್ಪಮಟ್ಟಿಗೆ ಯಂತ್ರಗಳ ಆಧಾರಿತ ಕೃಷಿಯ ಕಡೆಗೆ ನಾವು ಹೋಗಬೇಕಾಗುತ್ತದೆ. ಅದಕ್ಕೆ ನಾವು ಹೆಚ್ಚಿಗೆ ಒತ್ತನ್ನು ಕೊಡುತ್ತಿದ್ದೇವೆ. ಯಾವ ರೀತಿ ಎಂದು ತಾವು ಕೇಳಬಹುದು. ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದಂಥ ಸಂದರ್ಭದಲ್ಲಿ ನೀವು ಯಂತ್ರೋಪಕರಣಗಳಿಗೆ ನೀವು ಕೊಡುತ್ತಿರುವ ಸಹಾಯಧನ ಬಹಳಷ್ಟು ದುರುಪಯೋಗ ಆಗುತ್ತಿದೆ ಎನ್ನುವ ಮಾತನ್ನು ಬಹಳಷ್ಟು ಜನ ಪ್ರಸ್ತಾಪ ಮಾಡಿದರು. ಇದು ಸದನದ ಒಳಗೆ ಮಾತ್ರವಲ್ಲ, ನಾವು ರಾಜ್ಯದ ಹೊರಗೆ ಎಲ್ಲಾ ಕಡೆ ಸುತ್ತುವಂಥ ಸಂದರ್ಭದಲ್ಲಿಯೂ ಸಹ ಎಲ್ಲಾ ಕಡೆ ಭೇಟಿಯಾದಾಗಲೂ ಸಹ ಇದರಲ್ಲಿ ಗುಣಮಟ್ಟ ಸರಿಯಿಲ್ಲ, ಅವರು ಏನು ದರ ಕೊಡುತ್ತಿದ್ದಾರೆ, ಮಾರುಕಟ್ಟೆಗಿಂತ ಹೆಚ್ಚಿನ ದರವನ್ನು ನಿಮ್ಮ ಇಲಾಖೆಯಲ್ಲಿ ಕೇಳುತ್ತಿದ್ದಾರೆ ಎಂದು ಇಲ್ಲಿ ಒಬ್ಬರು ಉದಾಹರಣೆ ಕೊಟ್ಟು ಹೇಳಿದರು. ನೀವು 4,000–00 ರೂಪಾಯಿಗಳಿಗೆ ಇಲ್ಲಿ ಮಾರುತ್ತೀರಿ, ಅಲ್ಲಿ ನೋಡಿದರೆ ಅದು ಎರಡು, ಎರಡೂವರೆ ಸಾವಿರ ರೂಪಾಯಿಗಳು ಇರುತ್ತದೆ. ನೀವು ಕೊಡುವ 2000 ರೂಪಾಯಿಗಳ ಸಬ್ಸಿಡಿ ಎಲ್ಲಾ ಸಹ ಉತ್ಪಾದಕರಿಗೆ ಹೋಗುತ್ತಿದೆ. ಹೀಗೆ ಈ ಬಗ್ಗೆ ಈ ಬಗ್ಗೆ ಇರುವ ಅನೇಕ ಸಮಸ್ಯೆಗಳನ್ನು ಕುರಿತು ಹಲವು

ಮಾನ್ಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ಅದಕ್ಕೆ ಪೂರಕವಾಗಿ ಮಾನ್ಯ ಅಧ್ಯಕ್ಷರೆ, ಅದರಲ್ಲಿ ಸ್ವಲ್ಪ ಮಾರ್ಪಾಡು ಮಾಡಿದ್ದೇವೆ. ಆ ಮಾರ್ಪಾಡು ಏನೆಂದರೆ, ಹಿಂದೆ ರೈತರು ನಮಗೆ ಅರ್ಜಿಗಳನ್ನು ಕೊಡುತ್ತಿದ್ದರು. ನಾವು ಅದನ್ನು ಖರೀದಿ ಮಾಡಿ ರೈತರಿಗೆ ಕೊಡುತ್ತಿದ್ದೆವು. ನಮ್ಮದು ದರಪಟ್ಟಿ ಇರುತ್ತದೆ, ಆ ದರಪಟ್ಟಿಯ ಪ್ರಕಾರವೇ ಆ ಹಣವನ್ನು ಪಾವತಿಸಬೇಕಾಗುತ್ತದೆ. ಈಗ ಅದನ್ನು ನಾವು ತೆಗೆದುಹಾಕಿದ್ದೇವೆ. ಯಾವ list approved ಆಗಿದೆ, ಅದನ್ನು ಮಾತ್ರ ಪ್ರಕಟ ಮಾಡಿ ಅವರು ನೇರವಾಗಿ ಮಾರುಕಟ್ಟೆಯಲ್ಲಿ ಅವರು ಅಂಗಡಿಗೆ ಹೋಗಿ ಖರೀದಿ ಮಾಡುವಂಥ ಬದಲಾವಣೆಯನ್ನು ನಾವು ಮಾಡಿಕೊಂಡು ಬಂದಿದ್ದೇವೆ. ರೈತರ ಪ್ರಮಾಣ ಏನಿರುತ್ತದೆ, ಅದನ್ನು ಅವರ ಅಕೌಂಟ್‌ಗೆ ಹಾಕಿ supplier ಗೆ ಪೇಮೆಂಟ್ ಮಾಡಬೇಕು. ನಾವು ನಮ್ಮ ಸಹಾಯಧನವನ್ನು ಸಹ ಅವರ ಖಾತೆಗೆ ಬಿಡುಗಡೆ ಮಾಡುತ್ತೇವೆ. ಅದು ಸಪ್ಲೈಯರ್‌ಗೆ ಪೇಮೆಂಟ್ ಆಗುತ್ತದೆ. ಹೀಗಾಗಿ direct subsidy scheme ಅನ್ನು ತೆಗೆದುಕೊಂಡು ಬಂದಿದ್ದೇವೆ. ಇದರಿಂದ ನಮ್ಮ ಇಲಾಖೆಯವರು ಖರೀದಿ ಮಾಡಿ ಕೊಡುವುದು ಇವೆಲ್ಲಾ ತಪ್ಪುತ್ತದೆ. ನಾವು ಖರೀದಿ ಮಾಡಿ ಕೊಟ್ಟಾಗ ಏನಾಗುತ್ತದೆಂದರೆ, ನಿಮ್ಮ ದರ ಸರಿಯಿಲ್ಲ, ನಿಮ್ಮ ಗುಣ ಮಟ್ಟ ಸರಿಯಿಲ್ಲ ಎನ್ನುವ ದೂರುಗಳಿಗೆ ನಾವು ವಿರಾಮ ಹಾಕಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ರೈತರೇ ಮುಕ್ತವಾಗಿ ಮಾರುಕಟ್ಟೆಯಲ್ಲಿ ಖರೀದಿ ಮಾಡುವಂಥ ಅವಕಾಶವನ್ನು ಅವರಿಗೆ ಕಲ್ಪಿಸಿಕೊಟ್ಟಿದ್ದೇವೆ. ಇನ್ನು ಮೇಲೆ ನಮ್ಮ ಸಹಾಯಧನ ನೇರವಾಗಿ ಕಂಪೆನಿಗೆ ಹೋಗುವುದಿಲ್ಲ. Direct ಆಗಿ ರೈತರ ಅಕೌಂಟ್‌ಗೆ ಹೋಗುತ್ತದೆ. ಆ ಒಂದು ಬದಲಾವಣೆಯನ್ನು ತಂದಿರುವುದರಿಂದ 5000 ರೂಪಾಯಿಗಳ ಮೇಲ್ಪಟ್ಟಿರುವಂಥದ್ದಕ್ಕೆ, ಸ್ವಲ್ಪಮಟ್ಟಿಗೆ ಈ ಗುಣಮಟ್ಟದ ಸಮಸ್ಯೆಗಳೇನಿತ್ತು. ಸ್ವಲ್ಪಮಟ್ಟಿಗೆ ದರ ಹೆಚ್ಚಿಗೆ ಆಗುತ್ತಿದೆ ಎನ್ನುವ ಸಮಸ್ಯೆ ಏನಿತ್ತು, ಅದಕ್ಕೆ ಸಾಕಷ್ಟು.. ಎಲ್ಲದಕ್ಕೂ ನಾವು ಪರಿಹಾರ ಮಾಡಲಿಕ್ಕಾಗದೆ ಹೋಗಬಹುದು. ಆದರೆ ಈ direct subsidy schemeನಿಂದ ಸಾಕಷ್ಟು ಆ ಸಮಸ್ಯೆಗೆ ಸ್ವಲ್ಪ ಪರಿಹಾರ ಸಿಗುತ್ತದೆ. ಇದನ್ನು ಕೆಲವು ಸದಸ್ಯರು ಮಾಡಬಾರದೆಂದು ಸಹ ಹೇಳಿದರು. ಹಾಗಾಗಿ ರೈತರಿಗೆ ಇದನ್ನು implement

ಮಾಡುವಂಥ ಸಂದರ್ಭದಲ್ಲಿ ಸ್ವಲ್ಪ ಸಣ್ಣಪುಟ್ಟ ತೊಂದರೆಯಾಗಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೂ ಇದರ ಉದ್ದೇಶವೇನಿದೆ, ಗುಣಮಟ್ಟ ಸುಧಾರಣೆ ಮತ್ತು ರೈತರಿಗೆ ಅನುಕೂಲ ಮಾಡುವ ಉದ್ದೇಶ ಇಟ್ಟುಕೊಂಡು ಈ ಒಂದು ಬದಲಾವಣೆಯನ್ನು ತಂದಿದ್ದೇವೆಂದು ನಾನು ಹೇಳಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಬೀಜಕ್ಕೆ ಸಂಬಂಧಪಟ್ಟಂತೆ, ಇನ್ನು ಕೆಲವು ಯಂತ್ರೋಪಕರಣಗಳಿಗೆ ಸಂಬಂಧಪಟ್ಟಂತೆ ಯಾರಾದರೂ ಸಪ್ಲೈ ಮಾಡದೇ ಹೋದರೆ ಅಥವಾ ಅದರಲ್ಲಿಯೂ ಗುಣ ಮಟ್ಟವನ್ನು ಸರಿಯಾಗಿ ಕೊಡದೆ ಹೋದರೆ ಅದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಖಂಡಿತವಾಗಿ ಅವರನ್ನು ಕಪ್ಪುಪಟ್ಟಿಗೆ ಹಾಕುತ್ತೇವೆ. ಇದರಲ್ಲಿ ದಯವಿಟ್ಟು ಯಾರು ಅನುಮಾನವನ್ನು ಇಟ್ಟುಕೊಳ್ಳಬೇಡಿ. ಈ ವರ್ಷ ಮೂರು ಸಾವಿರ ಅರ್ಜಿಗಳು ಸಪ್ಲೈ ಮಾಡುವ ಸಲುವಾಗಿ ನಮಗೆ ಬಂದಿದ್ದವು. ತೂಕ ಸರಿಯಿಲ್ಲ, ಗುಣಮಟ್ಟ ಸರಿಯಿಲ್ಲವೆಂದು ನಮ್ಮ ಹಂತದಲ್ಲಿ ಒಂದು ಸಾವಿರ ಅರ್ಜಿಗಳನ್ನು ನಾವು ತಿರಸ್ಕಾರ ಮಾಡಿದ್ದೇವೆ. ಮುಂದೆಯೂ ಅಷ್ಟೇ, approved ಆದವರು ಯಾರಾದರೂ ತಪ್ಪು ಮಾಡಿದರೆ ಅವರನ್ನು ಕಪ್ಪು ಪಟ್ಟಿಗೆ ಹಾಕುವುದರಲ್ಲಿಯೂ ತಾವ್ಯಾರೂ ಸಹ ಅನುಮಾನ ಇಟ್ಟುಕೊಳ್ಳಬೇಡಿ. ಈ ಯಂತ್ರೋಪಕರಣ ಯೋಜನೆ ಏನಾಗುತ್ತಿದೆ ಎಂದರೆ ನಾವು individual ಆಗಿ ರೈತರಿಗೆ ಕೊಡುತ್ತಿದ್ದೇವೆ. ಒಬ್ಬ ರೈತನಿಗೆ 5 ಎಕರೆ ಇರಬಹುದು, 10 ಎಕರೆ ಇರಬಹುದು, ನಾವು ಕೊಟ್ಟಿದ್ದು ಸಂಪೂರ್ಣ ಉಪಯೋಗವಾಗುತ್ತಿದೆಯೇ ಅನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ಒಬ್ಬೊಬ್ಬ ರೈತನಿಗೂ ಕೊಡುತ್ತಾ ಹೋದರೆ ಇನ್ನು 50 ವರ್ಷಗಳಾದರೂ ಕೊಡುತ್ತಲೇ ಇರಬೇಕಾಗುತ್ತದೆ. ಎಲ್ಲಾ ರೈತರಿಗೂ ನಾವು ಯಂತ್ರೋಪಕರಣಗಳನ್ನು ಕೊಡಲಿಕ್ಕಾಗುವುದಿಲ್ಲ. ಮತ್ತೆ ಕೊಟ್ಟರೆ ಅದು ಸರಿಯಾಗಿ ಉಪಯೋಗ ಸಹ ಆಗುವುದಿಲ್ಲ. ಏಕೆಂದರೆ ಈಗ tractor ದಿನಕ್ಕೆ 10 ಗಂಟೆಗಳ ಕಾಲ ಓಡಿಸಿದರೂ ಅದಕ್ಕೇನೂ ಆಯಾಸವಾಗುವುದಿಲ್ಲ. ಒಬ್ಬ ರೈತನಾದರೆ ದಿನಕ್ಕೆ 2–3 ಗಂಟೆ ಓಡಿಸಿ ಅಲ್ಲಿಯೇ ನಿಲ್ಲಿಸಿದರೆ ಆ ಬಂಡವಾಳದ ಸದುಪಯೋಗವಾಗುವುದಿಲ್ಲ. ಹೋಗಲಿಬಿಡಿ, ಆದರೆ ಬೇರೆ

ರೈತರಿಗೆ ಅದರ ಅನುಕೂಲ ಸಿಗುವುದಿಲ್ಲ. ಇದೇ ರೀತಿಯಾಗಿ heavy ಬಂಡವಾಳ ಇರುವುದರಿಂದ ಎಲ್ಲರಿಗೂ ಕೊಡಬೇಕಾದರೆ ಸಮಯ ಬೇಕಾಗುತ್ತದೆ. ಇದಕ್ಕೆ ಪರ್ಯಾಯವಾಗಿ ನಾವು ಏನು ಮಾಡಿದ್ದೇವೆಂದರೆ ಯಂತ್ರೋಪಕರಣಗಳಿಗೆ Customer Hire Centre ಎಂದು ಈ ವರ್ಷ ಜಾರಿಗೊಳಿಸುತ್ತಿದ್ದೇವೆ. ರಾಜ್ಯದಲ್ಲಿ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳು ಎಷ್ಟಿವೆ, ಆ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿಯೂ ಸಹ ಪ್ರಾಯೋಗಿಕವಾಗಿ ಒಂದು Customer Hire Centre ಅನ್ನು ಈ ವರ್ಷ ನಾವು ಆರಂಭ ಮಾಡುತ್ತೇವೆ. Customer Hire Centre ಎಂದರೆ ಏನು ಎಂದು ತಾವು ಕೇಳಬಹುದು. ನಮ್ಮ ದೂರದೃಷ್ಟಿ ಏನೆಂದರೆ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಹೋಬಳಿಗೆ ಒಂದನ್ನು ಮಾಡಬೇಕು ಎನ್ನುವುದು. ಆದರೆ ಆರಂಭದಲ್ಲಿ ಒಂದು ಕ್ಷೇತ್ರಕ್ಕೆ ಒಂದನ್ನು ಪ್ರಾಯೋಗಿಕವಾಗಿ ಆರಂಭ ಮಾಡುತ್ತೇವೆ. ಅಲ್ಲಿ ಒಂದು ಹೋಬಳಿ ಇದ್ದರೆ ಅಲ್ಲಿ ಯಾವ ಯಂತ್ರೋಪಕರಣಗಳ ಅವಶ್ಯಕತೆ ಇದೆ ಎಂಬ ಬಗ್ಗೆ ತಿಳಿಸಲು ಒಂದು ಕಮಿಟಿ ಮಾಡಿ, ಅಲ್ಲಿಂದ ಆ ರೈತರ ಬೇಡಿಕೆಯನ್ನು ತೆಗೆದುಕೊಂಡು, ಆ ಬೇಡಿಕೆಗಳನ್ನು ನಮ್ಮ ಇಲಾಖೆಯವರು ಆ ಒಂದು Customer Hire Centreಗೆ ಕಳುಹಿಸುತ್ತೇವೆ. ಅದು tractor, tiller, harvester ಆಗಬಹುದು, cultivator ಆಗಬಹುದು, rotavator ಆಗಬಹುದು ಅಥವಾ ಯಾವುದೇ man hole digger ಆಗಬಹುದು, ಇಂಥ ಎಲ್ಲಾ ಯಂತ್ರೋಪಕರಣಗಳು ಆ ಹೋಬಳಿಗೆ ಯಾವುದು ಅವಶ್ಯಕತೆ ಇದೆ ಎಂದು ತಿಳಿದು ಅದನ್ನು ಪೂರೈಸುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ರೈತರದು ಕೂಡ constitute ಮಾಡುತ್ತೇವೆ. ಅದು advisory ಯಾಗಿ. ಆದರೆ, ಇದನ್ನು ನಿರ್ವಹಣೆ ಮಾಡುವುದಕ್ಕೆ ನಾವು PPP model ನಲ್ಲಿ ಕರೆದಿದ್ದೇವೆ. ಆ ದರವನ್ನು ನಿಗದಿ ಮಾಡುವುದು ಸಹ ರೈತರ ಜೊತೆಗೆ ಕುಳಿತುಕೊಂಡೇ ದರವನ್ನು ನಿಗದಿ ಮಾಡಬೇಕಾಗುತ್ತದೆ. rental ಇದಕ್ಕೆ ಏನಿರುತ್ತದೆ, ಅದನ್ನು ರೈತರ ಜೊತೆಗೇ ನಿಗದಿ ಮಾಡಬೇಕಾಗುತ್ತದೆ. ಸರ್ಕಾರ ಕೂಡ ಅದರಲ್ಲಿ ಭಾಗವಹಿಸುತ್ತದೆ. CEO ಗಳು ಸಹ ಅದರಲ್ಲಿರುತ್ತಾರೆ. ಅದನ್ನು ಸುಮಾರು ಒಂದಕ್ಕೆ ಮೊದಲನೇ

ವರ್ಷ 50 ಲಕ್ಷ ಬಂಡವಾಳ ಹೂಡುವಂತಹದ್ದು. ಸರ್ಕಾರ ಅಂದರೆ ನಾವು ಮೂವತ್ತೇಳೂವರೆ ಲಕ್ಷ ಬಂಡವಾಳ ಹಾಕುತ್ತೇವೆ. ಅದನ್ನು ಯಾರು ನಡೆಸುತ್ತಾರೆ ಅವರು ಹನ್ನೆರಡೂವರೆ ಲಕ್ಷ ಬಂಡವಾಳವನ್ನು ಮೊದಲನೇ ವರ್ಷ ಹಾಕಬೇಕು. ಎರಡನೇ ವರ್ಷದಲ್ಲಿ ಅವರು 50%, ನಾವು 50% ಬಂಡವಾಳ ಹಾಕುವಂತಹದ್ದು ಇದೆ. ಹೀಗೆ ಒಟ್ಟು ಸುಮಾರು ಒಂದು Customer Hire Centre ಗೆ ಎರಡು ವರ್ಷ ಅವಧಿಯಲ್ಲಿ ` 75 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರೈತರಿಗೆ ಬೇಕಾದಂತಹ ಯಂತ್ರೋಪಕರಣಗಳನ್ನು ಮಾಡತಕ್ಕಂತಹ ಯೋಜನೆಯನ್ನು ಮಾಡಿದ್ದೇವೆ. ಇದಕ್ಕೆ ನಾವು ಅಂದರೆ ಒಂದು PPP ಗೆ ನಾವು ಟೆಂಡರ್‌ಅನ್ನು ಸಹ ಕರೆದಿದ್ದೇವೆ. ಇದರಲ್ಲಿ ನಮ್ಮ ಧರ್ಮಸ್ಥಳದ ಶ್ರೀ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರ ಗ್ರಾಮೀಣ ಸೇವೆಗೆ ಸಂಬಂಧಿಸಿದಂತೆ ಕೃಷಿಗೆ ಸಂಬಂಧಿಸಿದಂತೆ ಅವರದು ಪ್ರತ್ಯೇಕವಾದಂತಹ ಒಂದು ವಿಭಾಗವಿದೆ. ಅವರು ಇದರಲ್ಲಿ ಭಾಗವಹಿಸಿದ್ದಾರೆ. so, ಬಹುತೇಕವಾಗಿ ಅವರ ಜೊತೆಗೆ ಈಗ ಚರ್ಚೆ ನಡೆಯುತ್ತಿದೆ. ಈ ಚರ್ಚೆ ಅಂತಿಮವಾದ ತಕ್ಷಣ ಈ ವರ್ಷವೇ ` 70 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ customer hire centreಗಳನ್ನು ರಾಜ್ಯದ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳು ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಒಂದನ್ನು ಮಾಡುತ್ತೇವೆ. ಇದನ್ನು ಮೂರು ವರ್ಷಗಳ ಅವಧಿಗೆ ಇಟ್ಟುಕೊಂಡಿದ್ದೇವೆ. ಇದನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಮಾಡುವುದರಿಂದ ಏನಾಗುತ್ತದೆ ಎಂದರೆ ಎಲ್ಲರೂ ಸಹ ಟ್ರ್ಯಾಕ್ಟರ್‌ಅನ್ನು ಸ್ವಂತ ಇಟ್ಟುಕೊಳ್ಳಬೇಕಾದಂತಹ ಅವಶ್ಯಕತೆ ಬರುವುದಿಲ್ಲ. ಎಲ್ಲರೂ cultivator ಹಾಗೂ tiller ಗಳನ್ನು ಇಟ್ಟುಕೊಳ್ಳುವಂತಹ ಅವಶ್ಯಕತೆ ಬರುವುದಿಲ್ಲ. ಹಾಗಾಗಿ ಇಲ್ಲಿ ಬಾಡಿಗೆ ದರದಲ್ಲಿ ಅದೂ ಒಂದು ಸರಳ ಬಾಡಿಗೆ ದರದಲ್ಲಿ ತೆಗೆದುಕೊಂಡು ಹೋಗಿ ಅದನ್ನು ಉಪಯೋಗಿಸಿಕೊಂಡರೆ ಹಾಕಿದ ಬಂಡವಾಳಕ್ಕೆ ಅದರಿಂದ ನಮಗೆ ವಾಪಸ್ಸು ಸಿಗತಕ್ಕಂತಹ ಉತ್ಪಾದಕತೆ ಏನಿದೆ, ಅದು ಬಹಳ ಹೆಚ್ಚಾಗಿ ಸಿಗುತ್ತದೆ. ನಮ್ಮದು ಉದ್ದೇಶ ಏನಿದೆ ಎಂದರೆ ಕೇವಲ ಎರಡು ವರ್ಷಕ್ಕೆ ನಡೆಸಿ ಬಿಟ್ಟುಬಿಡಬೇಕು ಎನ್ನುವುದಲ್ಲ. ಎರಡು ವರ್ಷ ನಾವು ಅವರಿಗೆ ಸಹಾಯ ಧನ ಕೊಡುತ್ತೇವೆ. ಮುಂದೆ ಅದು ತಾನೇ ತಾನಾಗಿ ತನ್ನ

ಸ್ವಂತ ಕಾಲಿನ ಮೇಲೆ ನಿಂತು ಬರೀ ಅಷ್ಟನ್ನೇ ನಡೆಸಿಕೊಂಡು ಹೋಗುವುದಲ್ಲ. ಅವರು ಸ್ವಂತ ಬಂಡವಾಳ ಹಾಕಿ ಅದನ್ನು ಇನ್ನೂ ವೃದ್ಧಿ ಮಾಡಬೇಕು ಎನ್ನುವುದು ನಮ್ಮ ಆಶಯ. ನಾವು ಅದನ್ನು ಆರಂಭ ಮಾಡುವುದಕ್ಕೆ ಹೆಚ್ಚಿನ ಸಹಕಾರ ಕೊಟ್ಟು ಪ್ರತಿ ಕ್ಷೇತ್ರದಲ್ಲಿಯೂ ಸಹ ಹೋಬಳಿ ಮಟ್ಟದಲ್ಲಿ ಆರಂಭಿಕವಾಗಿ ಒಂದು customer hire centre ಅನ್ನು ಈ ವರ್ಷ ನಾವು ಮಾಡುತ್ತಿದ್ದೇವೆ. ಅದಕ್ಕೆ 70 ಕೋಟಿ ರೂಪಾಯಿಗಳು ಆಗುತ್ತದೆ. ಅದೂ ಅಲ್ಲದೆ ರೈತರಿಗೆ ನೇರವಾಗಿ ಯಂತ್ರೋಪಕರಣ ಕೊಡತಕ್ಕಂತಹ ಯೋಜನೆಯನ್ನು ಮುಂದುವರೆಸುತ್ತೇವೆ. ಇದನ್ನು ಮಾಡಿದ ಕೂಡಲೇ ಅದನ್ನು ನಿಲ್ಲಿಸುವುದಿಲ್ಲ. ಅದಕ್ಕೆ 146 ಕೋಟಿ ರೂಪಾಯಿಗಳನ್ನು ಈ ವರ್ಷ ನಾವು ವ್ಯಯ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎನ್. ಚಲುವರಾಯಸ್ವಾಮಿ:– Public ನಲ್ಲಿ ಸಿಗುವುದಕ್ಕಿಂತ ಕಡಿಮೆ ದರದಲ್ಲಿ fix ಮಾಡಿ ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ:– ಹೌದು.

ಶ್ರೀ ಎನ್. ಚಲುವರಾಯಸ್ವಾಮಿ:– Same rate fix ಮಾಡಿ customer hire centre ಮಾಡಿದರೆ ಅದು ಉಪಯೋಗವಾಗುವುದಿಲ್ಲ.

ಶ್ರೀ ಕೃಷ್ಣ ಬೈರೇಗೌಡ:– ಇಲ್ಲ. ಇದಕ್ಕೆ ನಾವು ಏಕೆ ಆಸಕ್ತಿ ತೆಗೆದುಕೊಂಡು ಮಾಡುತ್ತಿದ್ದೇವೆ ಎಂದರೆ ನಾವು ಏಕೆ ಇದರಲ್ಲಿ ಮೊದಲನೇ ವರ್ಷದಲ್ಲಿ 75% ಬಂಡವಾಳ ಹೂಡುತ್ತಿದ್ದೇವೆ ಎಂದರೆ, ಎರಡನೇ ವರ್ಷ ಶೇಕಡಾ 50% ನಮ್ಮ ಬಂಡವಾಳ. ಏಕೆ ನಮ್ಮ ಬಂಡವಾಳ ಹೂಡುತ್ತಿದ್ದೇವೆ ಎಂದರೆ ದರ ಕಡಿಮೆಯಾಗಲಿ. ಈಗ ಪೂರ್ತಿ ದರ ಅವರೇ ಬಂಡವಾಳ ಹೂಡಿದರೆ ಅವರು charge ಮಾಡುವ ರೇಟ್ ರೈತರಿಗೆ ಅನುಕೂಲವಾಗುವುದಿಲ್ಲ. ಆ ರೇಟ್ ಕಡಿಮೆಯಾಗಬೇಕೆಂದರೆ ನಾವು ಬಂಡವಾಳ ಹಾಕಬೇಕು. ಹಾಗಾಗಿ ದರ ನಿಗದಿ ಮಾಡುವ ಹಂತದಲ್ಲಿಯೂ ಸಹ ರೈತರ ಸಲಹಾ ಸಮಿತಿಯನ್ನು ಮಾಡಿ ಅದರ ಸಲಹೆ ಮೇರೆಗೆ ಯಂತ್ರೋಪಕರಣ ಖರೀದಿ ಮಾಡುವುದು ಸಹ ರೈತರ ಸಲಹೆ ಮೇರೆಗೆ

ಮಾಡುತ್ತೇವೆ. ಇಲ್ಲದಿದ್ದರೆ ಏನು ಆಗುತ್ತದೆ ಎಂದರೆ ಯಾವುದೋ ಕಂಪನಿಯವನು ಬಂದು ನನ್ನ ಕಂಪನಿ ಹತ್ತಿರ ಇಂತಿಂಥ fancy equipment ಇದೆಯೆಂದು ಹೇಳಿ ಅವುಗಳನ್ನು ಅವರು ಖರೀದಿ ಮಾಡಿದರೆ ರೈತರಿಗೆ ಏನು ಪ್ರಯೋಜನ? ಆ ಹೋಬಳಿ ರೈತರದು ಒಂದು ಸಣ್ಣ ಗುಂಪು ರಚನೆ ಮಾಡಿ ಆ ಹೋಬಳಿಗೆ ಏನು ಅವಶ್ಯಕತೆಯಿದೆ ಎನ್ನುವುದನ್ನು ತಿಳಿದುಕೊಂಡು ಅದನ್ನು ಖರೀದಿ ಮಾಡಿ ಅದಕ್ಕೆ ಕೊಡುತ್ತೇವೆ. ದರ ನಿಗದಿ ಮಾಡುವುದರಲ್ಲಿಯೂ ಸಹ ಆ ರೈತರದು ಜವಾಬ್ದಾರಿ ಇರುತ್ತದೆ. ನಮಗೇನೂ ತೀರಾ zero ಗೆ ಕೊಡಿ ಎಂದು ನೀವು ಕೇಳಬಹುದು. ಆದರೆ, ನಾಳೆ ದಿನ ಅದು ಸ್ವಂತ ಕಾಲಮೇಲೆ ನಿಂತು expand ಆಗಬೇಕು. ಬರೀ ಏನು ಸರ್ಕಾರ ಕೊಡುತ್ತದೆ, ಅದಕ್ಕೇ ಸೀಮಿತವಾಗಿರುವಂತಹದ್ದು ಅಲ್ಲ. ಅದು ತಾನೇ ತಾನಾಗಿ ಬೃಹದಾಕಾರವಾಗಿ ಬೆಳೆಯಬೇಕು ಎನ್ನುವ ಕಾರಣಕ್ಕೆ ಅದರಲ್ಲಿ ಸ್ವಲ್ಪ ಆದಾಯದ ಅಂಶ ಸಹ ಅಂದರೆ income component ಸಹ ಇದ್ದರೆ ನಾಳೆ ದಿನ ಅದು self sustaining ಆಗುತ್ತದೆ ಎನ್ನುವ ಉದ್ದೇಶ ನಮ್ಮದು.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಕೃಷಿ ಸಚಿವರಲ್ಲಿ ಕೇಳುತ್ತೇನೆ. ತಾವು ಏನು ಈಗ Customer Hire Centre ಮಾಡುತ್ತಿದ್ದೀರಿ. ಅದರಲ್ಲಿ ಬೇಕಾದಷ್ಟು flooded ಮೊದಲು ದೂರದಲ್ಲಿ ನಿಲ್ಲಿಸುವುದಕ್ಕೆ ಜಾಗವಿಲ್ಲ ಅಷ್ಟು ಟ್ರ್ಯಾಕ್ಟರ್‌ಗಳು ಆಗಿವೆ. ಅವರದೂ ಸಹಿತ ತೆಗೆದುಕೊಳ್ಳಿ. ಈಗ ಏನು ನಾವು prepaid ಎಲ್ಲಾ ಮಾಡುತ್ತಿದ್ದೇವೆ, ಕಡಿಮೆ ದರದಲ್ಲಿ ಆಗುತ್ತಿದೆ. ಅವರಿಗೆ ಯಾವ ರೀತಿ ಉಪಯೋಗ ಮಾಡಬೇಕು ಎಂಬುದರ ಬಗ್ಗೆ ಟ್ರೈನಿಂಗ್ ಕಲಿಸಬೇಕು. ಆ ಟ್ರ್ಯಾಕ್ಟರ್‌ಗಳನ್ನು ಪಡೆದುಕೊಂಡು ಮಾಡುವುದಕ್ಕೂ ಮಾಡಬೇಕು. ಅಲ್ಲಿ ಯಾರು investors ಯಾರಿದ್ದರು?

ಅಧ್ಯಕ್ಷರು:- ನೀವು yield ಆಗಿದ್ದೀರಿ ನೋಡಿ. ಟೈಮ್ ಆಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಟ್ರ್ಯಾಕ್ಟರ್ ತೆಗೆದುಕೊಳ್ಳುವ ರೈತರಿಗೆ 146 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆ, ಬ್ಯಾಂಕ್ ಮತ್ತು ರೈತರಿಗೆ ಟ್ರ್ಯಾಕ್ಟರ್ original

rate ಏನೆಂಬುದೇ ಗೊತ್ತಿಲ್ಲ. ಪ್ರತಿಯೊಬ್ಬ ಏಜೆನ್ಸಿಯವನು ರೈತರಿಂದ 50 ಕೋಟಿ, 60 ಕೋಟಿ, 100 ಕೋಟಿ ರೂಪಾಯಿಗಳ ದುಡ್ಡು ಮಾಡಿಕೊಂಡು, original rate ಗೊತ್ತಿಲ್ಲದೇ ಒಬ್ಬ ರೈತನು ಟ್ರ್ಯಾಕ್ಟರ್ ತೆಗೆದುಕೊಳ್ಳುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದರೆ ಸರ್ಕಾರ ಎಲ್ಲಾ ಶೋರೂಂಗಳಲ್ಲಿ original rate ಅನ್ನು announce ಮಾಡಬೇಕು ಮತ್ತು ಅವರು ಎಷ್ಟು commission ತೆಗೆದುಕೊಳ್ಳುತ್ತಾರೆ ಎಂದು announce ಆದರೆ correct ಆಗಿ ಆಗುತ್ತದೆ. ಒಂದು ಕಂಪನಿಯವನು ಏನು ಹೇಳುತ್ತಾನೆ ಎಂದರೆ ನೀವು ಒಂದು ಟ್ರ್ಯಾಕ್ಟರ್ ತೆಗೆದುಕೊಂಡರೆ ಮೋಟರ್ ಬೈಕ್ ಕೊಡುತ್ತೇನೆ ಎಂದು ಹೇಳುತ್ತಾನೆ. ಟ್ರ್ಯಾಕ್ಟರ್ ತೆಗೆದುಕೊಂಡರೆ ಮೋಟಾರ್ ಬೈಕ್ ಕೊಡುತ್ತೇನೆ ಎಂದರೆ ಅದರ ಅರ್ಥವೇನು? ಅದು ಎಷ್ಟು ಪರ್ಸೆಂಟ್ ಕಮೀಷನ್? ದಯವಿಟ್ಟು ಅದನ್ನು ಸುಧಾರಣೆ ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಸಹಕಾರ ಸಚಿವರು ಇದರ ಬಗ್ಗೆ ಈಗಾಗಲೇ ಸಭೆಯನ್ನು ಮಾಡಿದ್ದಾರೆ. ಮಾನ್ಯ ಸಹಕಾರ ಸಚಿವರು ಅದರ ಹಿಂದೆಯೂ ಕೂಡ ಇದ್ದಾರೆ. ಈ ಹಿಂದೆ ಏನು ತಪ್ಪಾಗಿದೆ, ಅದನ್ನು ಸರಿಪಡಿಸುವ ಪ್ರಯತ್ನವನ್ನು ಸಹಕಾರ ಸಚಿವರು ಮಾಡುತ್ತಿದ್ದಾರೆ. ಈ Customer Hire Centre ಗಳನ್ನು ಕನಿಷ್ಠ 6 ವರ್ಷ ನಿರ್ವಹಣೆ ಮಾಡಬೇಕು ಎನ್ನುವ ನಿಬಂಧನೆಯನ್ನು ಸಹ ಹಾಕಿದ್ದೇವೆ ಮತ್ತು ಇದನ್ನು ಗ್ರಾಮೀಣ ಮತ್ತು ಕೃಷಿಯಲ್ಲಿ ಹೆಚ್ಚಿಗೆ ಜ್ಞಾನ ಇರತಕ್ಕಂತಹ ಒಂದು ಸಂಸ್ಥೆಯ ಜೊತೆಗೆ ಮಾಡುವುದರಿಂದ ತಾವು ಹೇಳಿದ ಹಾಗೆ ಬೇರೆ ತಂತ್ರಜ್ಞಾನಗಳನ್ನು ಮತ್ತು ಅದನ್ನು ಸರಿಯಾಗಿ ಹೇಗೆ ಉಪಯೋಗ ಮಾಡುವುದು ಅದನ್ನೂ ಸೇರಿಸಿಕೊಂಡು ಮಾಡುವಂತಹದ್ದನ್ನು ಮಾಡುತ್ತೇವೆ.

ಶ್ರೀ ವಿ. ಉಮೇಶ್ ಕತ್ತಿ:- ಮಾನ್ಯ ಅಧ್ಯಕ್ಷರೆ, ಹೋಬಳಿ ಮಟ್ಟಕ್ಕೆ ಉದಾಹರಣೆ ಕೊಡುತ್ತಿದ್ದೀರಿ. ಹೋಬಳಿಯಲ್ಲಿ 50 ಸಾವಿರ ಆಗುತ್ತದೆ. ಅದರಿಂದ ಎಲ್ಲಾ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಸರ್ಕಾರವಿದ್ದಾಗ ನಾವು ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ 10 ಲಕ್ಷ ರೂಪಾಯಿಗಳವರೆಗೆ ಟ್ರ್ಯಾಕ್ಟರ್ ಹಾಗೂ ಕೆಲವು ಪಾರ್ಟ್ಸ್‌ಗಳನ್ನು ಕೊಟ್ಟಿದ್ದೇವೆ.

ಅಂದರೆ ಒಂದು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 3–5 ಸಾವಿರ ಎಕರೆ ಬರುತ್ತದೆ. ರೈತರಿಗೆ ಅನುಕೂಲವಾಗುತ್ತದೆ. ಆ ರೀತಿಯಲ್ಲಿ ಏನಾದರೂ ತಾವು ವಿಚಾರ ಮಾಡಿ. ಹೋಬಳಿ ಮಟ್ಟಕ್ಕೆ ತಂದರೆ ಅದು ಯಾರಿಗೂ ಸಿಗುವುದಿಲ್ಲ. VSS rateಗೆ ತಂದು ಕೊಡುವುದು ಒಳ್ಳೆಯದು ಎಂಬುದು ನಮ್ಮ ಸಲಹೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಸರಿಯಿದೆ.

(ಗೊಂದಲ)

ಅಧ್ಯಕ್ಷರು:– ಆಮೇಲೆ ಪ್ರಶ್ನೆ ಕೇಳಿ.

ಶ್ರೀ ಕೃಷ್ಣ ಬೈರೇಗೌಡ:– ಹಿಂದೆ 2011ರಲ್ಲಿ ಕೊಟ್ಟಿದೆ. ಅದನ್ನು ನಾವು ಈಗ ಮತ್ತೆ renew ಮಾಡಿದ್ದೇವೆ. ಅವು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆನ್ನುವ ಕಾರಣಕ್ಕೆ ಇದನ್ನು ಮಾಡಿದ್ದೇವೆ. ಮತ್ತೆ ಕಳೆದ ಬಾರಿ ತಮ್ಮ ಸರ್ಕಾರ ಇದ್ದಾಗ ಬೇರೆ ಸಹಕಾರ ಸಂಘಗಳಿಂದ ಅರ್ಜಿಯನ್ನು ಕರೆದು ನಾವು ಒಂದು expression of interest ಕರೆದು, ತಮ್ಮ ಸರ್ಕಾರವಿದ್ದಾಗಲೇ ಕರೆದು ಹೋಗಿತ್ತು. ಸಹಕಾರ ಸಂಘಗಳಿಂದ 750 ಅರ್ಜಿಗಳು ಬರುತ್ತವೆ ಎಂಬ ನಿರೀಕ್ಷೆಯಿದ್ದರೆ ಕೇವಲ 20 ಅರ್ಜಿಗಳು ಮಾತ್ರ ಬಂದಿತ್ತು. ಹಾಗಾಗಿ ಇದಕ್ಕೆ ಏನು ಮಾಡುವುದು ಎಂದು ಪರ್ಯಾಯವಾಗಿ ಯೋಚನೆ ಮಾಡಿದಾಗ ಈ ರೀತಿ ಮಾಡುತ್ತಿದ್ದೇವೆ. ನೀವು ಹೇಳಿದ ಹಾಗೆ ಹೋಬಳಿಗೊಂದು ಸಾಲುವುದಿಲ್ಲ. ಆದರೆ, ಇದು ಒಂದು ಪ್ರಾಯೋಗಿಕ. ಇದು success ಆಗುತ್ತದೆ ಎಂಬ ಭರವಸೆ ಬೇಕಲ್ಲವೇ? Success ಆದರೆ ಖಂಡಿತ ಇದನ್ನು ಮುಂದೆ ಮಾಡುತ್ತೇವೆ. ಏಕೆಂದರೆ, ನಮ್ಮ ಯಂತ್ರೋಪಕರಣಕ್ಕೆ ಏನು ಬಜೆಟ್‌ಯಿದೆ, ಅದನ್ನು ಬೇಕಾದರೆ ಸಂಪೂರ್ಣವಾಗಿ ಇದರಲ್ಲಿಯೇ ಹಾಕಿಬಿಡಬಹುದು. ಇದರಲ್ಲಿ ಹಾಕಿದರೆ ಆಗ ಎಲ್ಲರಿಗೂ ಸಿಗುತ್ತದೆ. individual ಆಗಿ ಕೊಡುವ ಅವಶ್ಯಕತೆ ಬರುವುದಿಲ್ಲ. ಆದರೆ, success

ಆಗುತ್ತದೆ ಎನ್ನುವ ಭರವಸೆ ಬೇಕಾಗಿದೆ. ಅದಕ್ಕೋಸ್ಕರ ಇದನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ಆರ್. ಯಾವಗಲ್:- ನಾನು ಹೇಳಿದ್ದು ಇಷ್ಟೆ. ತಾವು ಏನು ಈಗ horse power ಲೆಕ್ಕದ ಮೇಲೆ ಟ್ರ್ಯಾಕ್ಟರ್‌ಗಳನ್ನು ಏನು ಕೊಟ್ಟಿದ್ದಿರಿ, ಕೊಡುತ್ತಾ ಹೋಗಿದ್ದೀರಿ, ಎರಡು ಎಕರೆ, 4 ಎಕರೆ ಹಾಗೂ 8 ಎಕರೆ ಜಮೀನು ಇರುವವರು ತೆಗೆದುಕೊಂಡು ಹೋಗಿದ್ದಾರೆ. ಆದರೆ, horse power ಲೆಕ್ಕಕ್ಕೆ ಅದರಲ್ಲಿ ಏನು ಜಮೀನಿದೆ, ಅದಕ್ಕಿಂತ ತುಂಬಾ ಜಾಸ್ತಿ ತೆಗೆದುಕೊಂಡಿದ್ದಾರೆ. ತುಂಬಾ excess ಇದೆ. ಆ excess horse power ಅನ್ನು ಹೇಗೆ utilize ಮಾಡುತ್ತೀರಿ? ಈ ಸ್ಕೀಂನಲ್ಲಿ ಏನಾದರೂ ಮಾಡುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ:- ನೋಡೋಣ. ಅದನ್ನು ಇದಕ್ಕೆ tie-up ಮಾಡುವಂತಹ ವಿಚಾರ ಮಾಡುತ್ತೇವೆ. ಏಕೆಂದರೆ, ನೀವು ಹೇಳಿದ ಹಾಗೆ ರೈತರ ಹತ್ತಿರವೇ excess capacity ಈಗ ಇದೆ. ಅದೂ ಸಹ ಸದುಪಯೋಗ ಆಗಬೇಕು. ಅದನ್ನು ಬೇಕಾದರೆ ರೈತರೂ ಸಹ ಈ ಕೇಂದ್ರದ ಜೊತೆಗೆ ಹೊಂದಿಕೊಂಡು ಅವರ ಟ್ರ್ಯಾಕ್ಟರ್‌ಅನ್ನು ಮತ್ತೆ ಈ ಕೇಂದ್ರದ ಮುಖಾಂತರ ಭಾಡಿಗೆಗೆ ಕೊಡುವುದಕ್ಕೆ ಬೇಕಾದರೆ ಖಂಡಿತ ಅದರ ವಿಚಾರ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಂಡವಾಳ ಹೂಡಿಕೆ ಇಲ್ಲಿ ಬಹಳ ಚರ್ಚೆಯಾಗಿದ್ದು ಎಂದರೆ ನೀವು ಇಲ್ಲಿಯವರೆಗೆ ರೈತರಿಗೆ ಮಣ್ಣು ಪರೀಕ್ಷೆಯನ್ನೆ ಮಾಡಿಲ್ಲ. ನೀವು ಏನು ತಂತ್ರಜ್ಞಾನ ಕೊಡುತ್ತೀರಿ ಎನ್ನುವಂತಹ ವಿಚಾರ. ಮಣ್ಣಿನ ಫಲವತ್ತತೆ ಏನಿದೆ, ಯಾವ ಅಂಶ ಎಷ್ಟಿದೆ ಎನ್ನುವುದರ ಬಗ್ಗೆ ಸಾಕಷ್ಟು ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನಮ್ಮಲ್ಲಿ ಅಂದರೆ ಈಗ ಸರ್ಕಾರ ನಡೆಸುತ್ತಿರುವ 29 ಮಣ್ಣು ಪರೀಕ್ಷಾ ಕೇಂದ್ರಗಳಿವೆ. ಒಂದು ವರ್ಷಕ್ಕೆ ಆ ಕೇಂದ್ರಗಳಲ್ಲಿ ಸುಮಾರು 1 ಲಕ್ಷ 30 ಸಾವಿರ ಮಣ್ಣುಗಳನ್ನು ನಾವು ಪರೀಕ್ಷೆ ಮಾಡುತ್ತಿದ್ದೇವೆ. 78 ಲಕ್ಷ ಹಿಡುವಳಿದಾರರಿದ್ದಾರೆ. ನಾವು 1,30,000 ಮಣ್ಣಿನ ಪರೀಕ್ಷೆಯನ್ನು ಮಾಡಿಕೊಂಡು ಹೋಗುತ್ತಿದ್ದರೆ ಇನ್ನು ಯಾವ ಕಾಲಕ್ಕೂ ಕೂಡ ಬಹುಶಃ ಮಣ್ಣಿನ ಪರೀಕ್ಷೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ವಿಜ್ಞಾನಿಗಳು 3-4 ವರ್ಷಕ್ಕೊಮ್ಮೆ ಮಣ್ಣಿನ ಪರೀಕ್ಷೆಯನ್ನು

ಮಾಡುತ್ತಿರಬೇಕೆಂದು ಹೇಳುತ್ತಾರೆ. ಅದನ್ನು repeat ಮಾಡುವ ಲೆಕ್ಕವನ್ನು ಹಾಕಿಕೊಂಡರೆ ಈ ವೇಗದಲ್ಲಿ ಈ ಶತಮಾನದಲ್ಲಿ ಎಲ್ಲರಿಗೂ ಮಣ್ಣಿನ ಪರೀಕ್ಷೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅದರ ಜೊತೆಗೆ ಖಾಸಗಿಯವರು ಒಂದು ಮಣ್ಣಿನ ಪರೀಕ್ಷೆಯನ್ನು ಸುಮಾರು 200 ರೂಪಾಯಿಗಳ ವೆಚ್ಚದಲ್ಲಿ ಮಾಡುತ್ತಾರೆ. ಆಡಳಿತ ವೆಚ್ಚ ಎಲ್ಲಾ ಸೇರಿ ನಮಗೆ ಒಂದು ಮಣ್ಣು ಪರೀಕ್ಷೆಗೆ 1,500 ರೂಪಾಯಿಗಳವರೆಗೆ ವೆಚ್ಚ ತಗಲುತ್ತಿದೆ. ಕೇವಲ ಔಷಧಿಯಲ್ಲ, ಅದಕ್ಕೆ ಬೇಕಾದ ಸಿಬ್ಬಂದಿಗಳು, ಅಧಿಕಾರಿ ಎಲ್ಲಾ ಸೇರಿ ಇಷ್ಟು ವೆಚ್ಚ ತಗಲುತ್ತದೆ. ಅದಕ್ಕೋಸ್ಕರ ಇದರ ಬಗ್ಗೆ ನಾವೊಂದು ಹೊಸ ಚಿಂತನೆಯನ್ನು ಮಾಡಿದ್ದೇವೆ. ಎಲ್ಲಾ ರೈತರ ಜಮೀನಿನಲ್ಲೂ ಕೂಡ ಮಣ್ಣಿನ ಪರೀಕ್ಷೆಯಾಗಬೇಕೆಂಬ ವಿಚಾರವನ್ನು ಎಲ್ಲಾ ಸದಸ್ಯರು ಹೇಳಿದ್ದೀರಿ. National Mission for Sustainable Agriculture ಎನ್ನುವುದನ್ನು ಈ ಹಿಂದೆ ಕೇಂದ್ರ ಸರ್ಕಾರದಲ್ಲಿ UPA ಸರ್ಕಾರವಿದ್ದಾಗ ಆರಂಭ ಮಾಡಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದ ಅಂಗವೆಂದರೆ ಮಣ್ಣಿನ ಆರೋಗ್ಯವನ್ನು ಕಾಪಾಡುವುದಾಗಿದೆ. ಎಲ್ಲಾ ರೈತರಿಗೂ ಸಹ ಮಣ್ಣಿನ ಪರೀಕ್ಷೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ವರ್ಷ ಸುಮಾರು 15 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಬೇಕೆಂದು ಮೊನ್ನೆ ಮಾನ್ಯ ಪ್ರಧಾನಮಂತ್ರಿಗಳು ಉಲ್ಲೇಖ ಮಾಡಿದ್ದು, ಈಗಾಗಲೇ ಕೇಂದ್ರ ಸರ್ಕಾರ ಈ ಸಂಬಂಧ ಒಂದು ಕಾರ್ಯಕ್ರಮವನ್ನು ಕೂಡ ರೂಪಿಸಿದೆ. National Mission for Sustainable Agriculture ಅದರಲ್ಲಿ universal soil testing ಆಗಬೇಕೆಂಬ ಅಂಶ ಸೇರಿದೆ. ಅದರಲ್ಲಿ ತೆಗೆದುಕೊಂಡು ಇಡೀ ರಾಜ್ಯದಲ್ಲಿ ಒಂದು mission mode ಮಾಡಿದ್ದು, ರೈತ ನಮ್ಮ ಬಳಿ ಬಂದು ಮಣ್ಣಿನ ಪರೀಕ್ಷೆಯನ್ನು ಮಾಡಿಸಿಕೊಳ್ಳುವುದಲ್ಲ. ನಾವು ಅವರ ಬಳಿಗೆ ಹೋಗಿ ಮಣ್ಣಿನ ಪರೀಕ್ಷೆಯನ್ನು ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ನಾವು ಇದನ್ನು ಪೂರೈಸಬೇಕೆಂದರೆ ಮೂರು ವರ್ಷಗಳ ಅವಧಿ ಬೇಕಾಗುತ್ತದೆ. ನಾವು ಎರಡು ವರ್ಷಗಳಲ್ಲಿ ಮಾಡಬೇಕೆಂದುಕೊಂಡಿದ್ದು ಎರಡು ವರ್ಷಗಳಲ್ಲಿ ಆಗುವುದಿಲ್ಲ. ಮೂರು ವರ್ಷಗಳ ಅವಧಿಯಲ್ಲಿ ಸುಮಾರು 32 ಲಕ್ಷ ಮಣ್ಣಿನ ಸ್ಯಾಂಪಲ್‌ಗಳ

ಪರೀಕ್ಷೆ ಮಾಡಿ ಅವರಿಗೆ ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ವಿತರಣೆ ಮಾಡಿ, ಕೇವಲ ಕಾರ್ಡ್ ಕೊಡುವುದಷ್ಟೇ ಅಲ್ಲ, ಅದು digital record ಅನ್ನು ಕೂಡ maintain ಮಾಡುವ ರೀತಿ ಒಂದು mission ಅನ್ನು ಮಾಡುತ್ತಿದ್ದೇವೆ. ಇದಕ್ಕೆ ಒಟ್ಟು ಮೂರು ವರ್ಷಗಳ ಅವಧಿಯಲ್ಲಿ 80 ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಆದರೆ ಮೂರು ವರ್ಷಗಳ ಅವಧಿಯಲ್ಲಿ ಪ್ರತಿಯೊಬ್ಬ ರೈತರಿಗೂ ಸಹ ಮಣ್ಣಿನ ಆರೋಗ್ಯದ ಕಾರ್ಡ್ ಅವರ ಕೈಯಲ್ಲಿರಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಈ ವಿಷಯ ಸದನದಲ್ಲಿ ವ್ಯಕ್ತವಾಗಿದ್ದು, ಅದನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಮಣ್ಣಿನ ಆರೋಗ್ಯ ಪರೀಕ್ಷೆಯನ್ನು ನಮ್ಮ flagship programme ಆಗಿ mission mode ನಲ್ಲಿ ತೆಗೆದುಕೊಂಡು ಮೂರು ವರ್ಷಗಳಲ್ಲಿ ಮಾಡುತ್ತೇವೆ. ಅದನ್ನು ಕೂಡ PPP ಮಾದರಿಯಲ್ಲಿ ಮಾಡುತ್ತೇವೆ. ಏಕೆಂದರೆ ನಾವೇ ಮಾಡಿಕೊಂಡು ವರ್ಷಕ್ಕೆ 1,30,000 ಮಣ್ಣಿನ ಪರೀಕ್ಷೆಯನ್ನು ಮಾಡುವಂತಹ ಈ speed ನಲ್ಲಿ ಹೋದರೆ ಯಾವತ್ತಿಗೂ ಮುಗಿಸುವುದಕ್ಕಾಗುವುದಿಲ್ಲ. ಆದಕಾರಣ PPP model ನಲ್ಲಿ ಬಹುಶಃ ಇದರಲ್ಲಿ private sector ಅವರು ಯಾರೂ ಬರುವುದಿಲ್ಲ. International Organizations ಇದ್ದು ಅವರ ಬಳಿ ಹೊಸ ತಂತ್ರಜ್ಞಾನ ಇದೆ. ಮಣ್ಣು ಪರೀಕ್ಷೆ ಮಾಡಬೇಕೆಂದರೆ ಇಲ್ಲಿಯವರೆಗೆ chemical analysis ಮಾಡುತ್ತಿದ್ದರು. ಈಗ X-ray based machine ಬಂದಿದೆ. ಅದನ್ನು adopt ಮಾಡಿಕೊಂಡು ಒಂದು mission mode ನಲ್ಲಿ ಬಹಳ ವೇಗವಾಗಿ ಮಾಡಬೇಕೆಂಬ ದೃಷ್ಟಿಯಿಂದ ಆದ್ಯತೆಯಿಂದ ಈ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಕೇವಲ ಕಾರ್ಡ್ ಮಾಡಿಕೊಟ್ಟರೆ ಕೆಲಸವಾಗುವುದಿಲ್ಲ. ಮಣ್ಣಿನ ಆರೋಗ್ಯಕ್ಕನುಗುಣವಾಗಿ ನಾಳೆ ಅವರಿಗೆ ತಂತ್ರಜ್ಞಾನವನ್ನು ಕೊಡಬಹುದು. ಇಷ್ಟು ಯೂರಿಯಾ ಹಾಕಬೇಡ ಇಷ್ಟು ಹಾಕು, ಪೊಟ್ಯಾಷ್ ಕಡಿಮೆ ಇದೆ ಜಾಸ್ತಿ ಹಾಕಿ, ಮಣ್ಣಿನಲ್ಲಿ ಸಾವಯುವ ಅಂಶ ಕಡಿಮೆಯಿದೆ ಸಾವಯುವ ಅಂಶ ಹಾಕಿದರೆ ಹೆಚ್ಚು ಇಳುವರಿ ಬರುತ್ತದೆಂದು ರೈತರಿಗೆ specific crop and soil based advisory ಕೊಡಬೇಕಾದ ಸಂದರ್ಭದಲ್ಲಿ ಮಣ್ಣಿನ ಪರೀಕ್ಷೆ ಆಗಿಲ್ಲವೆಂದರೆ ಕೊಡುವುದಕ್ಕೆ ಸಾಧ್ಯವಿಲ್ಲ. Ultimately, crop

soil based advisory ಕೊಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇದರ ಜೊತೆಗೆ ಕೆ–ಕಿಸಾನ್ ಎಂಬ ಯೋಜನೆ ಮಾಡುತ್ತಿದ್ದು, ಅದರಲ್ಲಿ ಡೇಟಾಬೇಸ್‌ನ್ನು maintain ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಬಹಳ ಚರ್ಚೆಯಾದ ಮತ್ತೊಂದು ವಿಚಾರವೆಂದರೆ ಬಿತ್ತನೆ ಬೀಜಗಳ ಬಗ್ಗೆ ಮಾನ್ಯ ಅಧ್ಯಕ್ಷರೆ, ಇವತ್ತು ಬಿತ್ತನೆ ಬೀಜಗಳ ಗುಣಮಟ್ಟ....

ಅಧ್ಯಕ್ಷರು:– ತಾಲ್ಲೂಕಿಗೆ ಒಂದು soil testing lab ಕೊಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ:– ಅದಕ್ಕೆ ಪರ್ಯಾಯವಾಗಿ ಏನು ಮಾಡಿದ್ದೇವೆಂದರೆ, 29 soil testing ಇದ್ದು ಈ ರೀತಿ ನಡೆಯುತ್ತಿದೆ. ಈ ಸಿಸ್ಟಂನಲ್ಲಿ ಮಾಡಿದರೆ ಒಂದಕ್ಕೆ 1,500 ರೂಪಾಯಿಗಳು ನಮಗೆ ಖರ್ಚಾಗುತ್ತದೆ. PPP model ಮಾಡಿದರೆ 200 ರೂಪಾಯಿಗಳಿಂತ ಕಡಿಮೆ ಖರ್ಚಾಗುತ್ತದೆ. ರೈತರು ನಮ್ಮ ಬಳಿ ಬರುವುದೇ ಬೇಡ, ನಾವೇ ರೈತರ ಬಳಿ ಹೋಗಿ ಮಾಡುವ ಯೋಜನೆಯನ್ನು ಮಾಡಿರುವುದರಿಂದ ಬಹುಶಃ ಈ ಸಮಸ್ಯೆ ತಾವು ಕೊಟ್ಟಿರುವ ಸಲಹೆಯಂತೆ ಪರಿಹಾರವಾಗುತ್ತದೆಂದು ನಾನು ತಿಳಿದಿದ್ದೇವೆ. ಉತ್ತಮ ಗುಣಮಟ್ಟದ ಬೀಜಗಳು ಬಹಳ ಅವಶ್ಯಕವಾಗಿವೆ, ಉತ್ತಮ ಗುಣಮಟ್ಟದ ಬೀಜವಿಲ್ಲದಿದ್ದರೆ ನಾವು ಉತ್ಪಾದನೆಯನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಖಾಸಗಿ ಬಿತ್ತನೆ, ಉದಾಹರಣೆಗೆ ಮೆಕ್ಕೆಜೋಳವನ್ನು ಸರಬರಾಜು ಮಾಡುವವರು ಖಾಸಗಿಯವರು ರೈತರು ಸಹ ಹೆಚ್ಚೆಚ್ಚು ಮೆಕ್ಕೆ ಜೋಳ ಬೆಳೆಯುವ ಕಡೆಗೆ ಹೋಗುತ್ತಿದ್ದಾರೆ. ನಾನು ಅನೇಕ ಸಂದರ್ಭದಲ್ಲಿ ಈ ರೀತಿ ಏಕೆ ಆಗುತ್ತಿದೆ ನಮ್ಮ ಸಂಶೋಧನಾ ಸಂಸ್ಥೆಗಳಿಂದ ಉತ್ತಮ ಬೀಜ ಏಕೆ ಬರುತ್ತಿಲ್ಲವೆಂದು ನಮ್ಮ ವಿಜ್ಞಾನಿಗಳಿಗೆ ಕೇಳಿದ್ದೇನೆ. ಸದನದಲ್ಲೇನು ವ್ಯಕ್ತವಾಗಿದೆ, ಅವರೆಲ್ಲರ ಭಾವನೆಯನ್ನು ಸ್ವೀಕಾರ ಮಾಡುತ್ತೇನೆ. ಅವರು ಹೇಳಿರುವುದು ಸರಿಯಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಬೀಜದ ಗುಣಮಟ್ಟದಲ್ಲಿ ಒಳ್ಳೆಯ ಬೀಜ ಸುಧಾರಣೆಯಾಗಬೇಕೆಂಬ ಬಗ್ಗೆ ನಮ್ಮ ಸಂಕಲ್ಪ ಕೂಡ ಇದೆ. ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತೇವೆ. ಹಾಗೂ ವಿಶ್ವವಿದ್ಯಾನಿಲಯಗಳಿಗೆ ಬೇಕಾದ

ಅನುದಾನವನ್ನು ಕೊಡಲು ತಯಾರಿದ್ದೇವೆ. ಕೇವಲ ಸಂಶೋಧನೆ ಮಾಡುವುದಕ್ಕೆ ಕಳೆದ ವರ್ಷ ಐದು ಕೋಟಿ ರೂಪಾಯಿಗಳ block grant ಅನ್ನು University ಗೆ ಕೊಟ್ಟಿದ್ದೇವೆ. RKVY ನಲ್ಲಿ ಈ ವರ್ಷ 54 ಕೋಟಿ ರೂಪಾಯಿಗಳನ್ನು ಸಂಶೋಧನೆಗಾಗಿ ವಿಶ್ವವಿದ್ಯಾನಿಲಯಗಳಿಗೆ ಕೊಡುತ್ತಿದ್ದೇವೆ. ಹಾಗಾಗಿ ಇನ್ನೂ ಸ್ವಲ್ಪ ಹೆಚ್ಚಿಗೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- Uruguay agreement ಗೆ ನಾವು ಸಹಿ ಹಾಕಿದ ನಂತರ after the advent of liberalization, foreign countries ನಿಂದ ಸೀಡ್ಸ್ ನಮಗೆ flood ಆಗುತ್ತಿದೆ, That is what I mentioned yesterday also. ಆ ಸೀಡ್ಸ್ ಬರುವಾಗಲೇ ಅವರು ಇಂತಹ ಸ್ಟೇಜ್‌ನಲ್ಲಿ ಖಾಯಿಲೆ ಬರುತ್ತದೆಂದು ಔಷಧಿಯನ್ನು ಕೂಡ ಕಳುಹಿಸುತ್ತಿದ್ದಾರೆ. ಎರಡು ಬಾರಿ ಒಳ್ಳೆಯ crop ಬರುತ್ತದೆ, ಮೂರನೇ crop ಗೆ invariably ಖಾಯಿಲೆ ಬಂದೇ ತೀರುತ್ತದೆ. ನೀವು ಕೂಡ ಬೆಳೆದಿದ್ದೀರಿ ನಿಮ್ಮ ಫಾರಂಗೆ ಕೂಡ ನಾನು ಬಂದಿದ್ದೇನೆ. I dont know whether you have been to my farm ನಮ್ಮ ಕಷ್ಟಗಳನ್ನು ನೀವು ನೋಡಿದ್ದಿರೋ ಇಲ್ಲವೋ ಗೊತ್ತಿಲ್ಲ. ಬೀನ್ಸ್ ಯೋಗ್ಯತೆಯೇನು, ಕ್ಯಾಬೇಜ್, ಸೇವಂತಿಗೆ ಹೂವು ಎಲ್ಲ ಬೆಳೆಗೆ ಅನಿವಾರ್ಯವಾಗಿ ನಾವು ಹೊರದೇಶದಿಂದ ಬರುವ ಬೀಜಗಳನ್ನು ತೆಗೆದುಕೊಳ್ಳಬೇಕಾದ ಸ್ಥಿತಿ ಬಂದಿದೆ. ನಮ್ಮ ಸ್ಥಳೀಯ ತಳಿಗಳು ಏನಾಯಿತು? ನಮ್ಮ university ಯಲ್ಲಿರುವವರು ಏನು research ಮಾಡುತ್ತಿದ್ದಾರೆ? ನೀವು ಅದನ್ನು ಎಲ್ಲೋ ಒಂದು ಕಡೆ regulate ಮಾಡದಿದ್ದರೆ, you are a party to Uruguay agreement, there is no way you can escape from it ನಾವು suffer ಆಗಲೇಬೇಕು. The ill and well of liberalization, you have to suffer, but ಅದರ ಜೊತೆ-ಜೊತೆ ಎಲ್ಲೋ ಒಂದು ಕಡೆ ನಮ್ಮ ಸ್ಥಳೀಯ ತಳಿಗಳನ್ನು revive ಮಾಡುವಂತಹದ್ದು, ನಮ್ಮ ಹಳ್ಳಿಕಾರ್ semen ಅನ್ನು ಬೇರೆ ದೇಶಕ್ಕೆ ಕಳುಹಿಸಬೇಕೆಂದು ನಿನ್ನೆ ನಮ್ಮ ಪುಟ್ಟಣ್ಣಯ್ಯನವರು ಹೇಳಿದರು. ದಯವಿಟ್ಟು ಅದರ ಬಗ್ಗೆ ಮಾತನಾಡಿ, ನಮ್ಮ ಸ್ಥಳೀಯ ತಳಿಗಳನ್ನು improvise ಮಾಡುತ್ತೀರಿ, avail ಮಾಡುತ್ತೀರಿ ಮತ್ತು ಇದನ್ನು ಎಲ್ಲಿ regulate

ಮಾಡುತ್ತೀರಿ? ಎಷ್ಟು ದೊಡ್ಡ fraud ನಡೆಯುತ್ತಿದೆಯೆಂದರೆ practically, we have been taken for a ride.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಂತರ ಮಾತನಾಡುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ:– ಉತ್ತಮವಾದ ಬೆಳೆಯನ್ನು ಬೆಳೆಯುವ ರೈತರಿಗೆ ತಂತ್ರಜ್ಞಾನ ಕೊಟ್ಟು ಅವನೇ ಬೆಳೆದು ಅವನೇ ಬಿತ್ತನೆ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡುವವರೆಗೆ ಬಿತ್ತನೆ ಗುಣಮಟ್ಟವನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಆ ರೈತನಿಂದ ಪಡೆದು, ಹೆಚ್ಚಿನ ಬೆಲೆ ಪಡೆಯುವ ಬದಲಾಗಿ ಬೆಳೆ ಬೆಳೆಯುವ ರೈತನಿಗೆ ತಂತ್ರಜ್ಞಾನ ಕೊಟ್ಟು ಅವನೇ ಬಿತ್ತನೆ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಕೃಷ್ಣ ಭೈರೇಗೌಡ:– ನಮ್ಮ ಸರ್ಕಾರದಲ್ಲಿ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ನಡೆದ ಕೃಷಿ ವಿಶ್ವವಿದ್ಯಾಲಯದ ಸಭೆಯಲ್ಲಿ ಬಹಳ ತೀಕ್ಷ್ಣವಾಗಿ ಹೇಳಿದ್ದೇವೆ. ವಿಶ್ವವಿದ್ಯಾಲಯಗಳಿಂದ ಬರುತ್ತಿರುವ ಹೊಸ ಸಂಶೋಧನೆಗಳು ಯಾವುದಕ್ಕೂ ಸಾಲುತ್ತಿಲ್ಲ ಹಾಗೂ ಹೊಸ ತಳಿಗಳನ್ನು ಪರಿಚಯ ಮಾಡುವಲ್ಲಿ ನಾವು ಬಹಳ ಹಿಂದೆ ಇದ್ದೇವೆಂದು ನಾವು ಒಪ್ಪಿಕೊಂಡಿದ್ದೇವೆ. ಈ ವಿಷಯವನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಸದನವೇನು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ, ಅದನ್ನು ನಾವು ಒಪ್ಪಿದ್ದೇವೆ. ಅದನ್ನು ಕಾರ್ಯರೂಪಕ್ಕೆ ತರುವುದನ್ನು ಮುಂದಿನ ದಿನಗಳಲ್ಲಿ ಮಾಡುತ್ತೇವೆ. ಶಿವಲಿಂಗೇಗೌಡರು L–1 ಇದರ ಬಗ್ಗೆ ಮಾತನಾಡಿದ್ದು, ಇವತ್ತು ಉತ್ತರವನ್ನು ಕೊಡಬೇಕೆಂದಿದ್ದೆ ಆದರೆ ಈಗಾಗಲೇ ಸಮಯ ಜಾಸ್ತಿಯಾಗುತ್ತಿರುವ ಕಾರಣ ನಾನು ಅವರ ಜೊತೆ ವೈಯಕ್ತಿಕವಾಗಿ ಕುಳಿತು ಅವರಿಗೆ ಉತ್ತರ ಕೊಡುತ್ತೇನೆ. ಕಳೆದ ವರ್ಷ direct ಸಬ್ಸಿಡಿ ಸ್ಕೀಮ್ ಮಾಡಬೇಕಾದರೆ mechanization ನಲ್ಲಿ ರೈತರ ಸಮಿತಿಯನ್ನು ರಚನೆ ಮಾಡಿ, ಅಧ್ಯಯನ ಮಾಡಿ ಅವರ ಸಲಹೆ ಮೇರೆಗೆ ಈ ಮಾರ್ಪಾಡನ್ನು ತಂದಿದ್ದೇವೆ. ಅದೇ ಸಮಿತಿಯನ್ನು ಈ ವರ್ಷ ಕೂಡ ಮುಂದುವರೆಸಿ ಬಿತ್ತನೆ ಬೀಜಗಳಲ್ಲಿ

ಯಾವ ಬದಲಾವಣೆ ತರಬೇಕೆಂಬ ಬಗ್ಗೆ ರೈತರದೇ ಒಂದು ಸಮಿತಿಯನ್ನು ಮಾಡಿದ್ದೇವೆ. ಅದರಲ್ಲಿ ಅವರು ತಮ್ಮ ಜೊತೆ ಕುಳಿತು ಮಾತನಾಡಿ, ಏನು ಬದಲಾವಣೆಯನ್ನು ತರಲು ಸಾಧ್ಯವೆನ್ನುವುದರ ಬಗ್ಗೆ ನಿಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇವೆ. ಈ ವರ್ಷ ಏನೇ ಅಧ್ಯಯನ ಮಾಡಿದ್ದರೂ ಮುಂದಿನ ವರ್ಷದಲ್ಲಿ ಅದು implement ಆಗುತ್ತದೆ. ಆ ಸಂದರ್ಭದಲ್ಲಿ ನಿಮಗೆ ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುತ್ತೇನೆ. ಆ ಸಮಿತಿಯವರು ನಿಮ್ಮ ಜೊತೆಯಲ್ಲಿ ಕುಳಿತು ಚರ್ಚೆ ಮಾಡುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ವಿಶ್ವವಿದ್ಯಾನಿಲಯಗಳ ಬಗ್ಗೆ ಸಹ ಬಹಳ ಚರ್ಚೆಯಾಯಿತು. ಕೆಲವರು ಪರವಾಗಿ ಮಾತನಾಡಿದ್ದಾರೆ. ಮತ್ತೆ ಕೆಲವರು ಅವರ ಕಾರ್ಯನಿರ್ವಹಣೆ ಬಗ್ಗೆ ಬಹಳ ತೀಕ್ಷ್ಣವಾದ ಮಾತುಗಳನ್ನಾಡಿದ್ದಾರೆ. ಈಗಾಗಲೇ ಒಂದೊಂದಕ್ಕೆ ಒಂದೊಂದು ವಿಶ್ವವಿದ್ಯಾಲಯಗಳು ಆಗಿ ಅವುಗಳಿಂದ ರೈತರಿಗೆ ಏನು ಸಿಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿರುವಂಥದ್ದು ನಿಜವಾಗಿಯೂ ಸಹ ಸಮಂಜಸವಾಗಿದೆ. ನಾನು ಇಲಾಖಾ ಮಂತ್ರಿಯಾಗಿ ಅವರು ಬಹಳ ಸಮಂಜಸವಾಗಿ ಕೆಲಸ ಮಾಡುತ್ತಾರೆನ್ನುವುದಕ್ಕೆ ಆಗುವುದಿಲ್ಲ. ನಾನು ನಿಮ್ಮ ಸಲಹೆಗಳನ್ನು ತೆಗೆದುಕೊಂಡಿದ್ದೇವೆ. ವಿಶ್ವವಿದ್ಯಾಲಯಗಳು ಸಹ ನಮ್ಮ ಸರ್ಕಾರಿ ವ್ಯವಸ್ಥೆಯ ಒಂದು ಭಾಗ. ಸರ್ಕಾರಿ ವ್ಯವಸ್ಥೆಯಲ್ಲಿ ಏನು ರೋಗರುಜಿನಗಳು ಇವೆ, ಅವುಗಳು ಇಲ್ಲಿಯೂ ಸಹ ಇವೆ. ಒಂದು ಸ್ವಜನ ಪಕ್ಷಪಾತವಾಗಿರಬಹುದು, ನೇಮಕಾತಿಗಳಲ್ಲಿ ನಡೆಯತಕ್ಕಂಥ ವಿಚಾರಗಳು ಆಗಿರಬಹುದು ಹಾಗೂ ಸಂಶೋಧನೆಗಳಿಗಿಂತ ಹೆಚ್ಚಾಗಿ ರಾಜಕೀಯದ ಕಡೆಗೆ ಅವರ ಗಮನವಿರುವುದು ಆಗಿರಬಹುದು ಇವು ನಡೆಯುತ್ತಿವೆ. ಇದು ನಿಜ. ನಾನೂ ಸಹ ದೈನಂದಿನ ಜೀವನದಲ್ಲಿ ಕಣ್ಣಾರೆ ನೋಡುತ್ತಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೆ, ಅರಣ್ಯಾ ಇಲಾಖೆಯವರಿಂದ ರೈತರಿಗೆ ಬಹಳ ತೊಂದರೆಯಾಗಿದೆ ಎಂದು ನಿನ್ನೆ ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವ ಸಂದರ್ಭದಲ್ಲಿ ಹೇಳಿದರು. ರೈತರು ಗಿಡ ಹಾಕಿರುತ್ತಾರೆ. ನಂತರ ಅಲ್ಲಿಗೆ ಅರಣ್ಯದವರು ಹೋಗಿ ನಮ್ಮದ್ದು RTC ಎಂದು ಹೇಳುತ್ತಾರೆ. ಕೆಲವರು RTC ಯಲ್ಲಿ ರೈತರದ್ದಾಗಿರುತ್ತದೆ. ನಮ್ಮ

ಲ್ಯಾಂಡ್ ಅನ್ನು encroach ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಅರಣ್ಯ ಅಧಿಕಾರಿಗಳನ್ನು ಓಡಿಸಿದರೆ ಸಾಕು. ಅವರ ಅವಶ್ಯಕತೆಯಿಲ್ಲ. ಬೇಕಾದರೆ ರೈತರೇ ಅರಣ್ಯವನ್ನು ಬೆಳೆಸುತ್ತಾರೆ. ಇವರು ರೈತರನ್ನು ಸುಲಿಗೆ ಮಾಡುತ್ತಾರೆ ಹಾಗೂ ಅರಣ್ಯವನ್ನೂ ನಾಶ ಮಾಡುತ್ತಾರೆ.

ಶ್ರೀ ಕೃಷ್ಣ ಭೈರೇಗೌಡ:– ಅದಕ್ಕೆ ಮಾನ್ಯ ಅಧ್ಯಕ್ಷರೆ ತಯಾರಾಗಿ ಕುಳಿತಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಕೃಷ್ಣ ಭೈರೇಗೌಡರೆ, ತಾವು ರೈತರ ಪರವಾದ ಇಲಾಖೆಯನ್ನು ಹೊಂದಿದ್ದೀರಿ. ಮಾನ್ಯ ಅರಣ್ಯ ಮಂತ್ರಿಗಳು ACFಗಳು, CCFಗಳು ಹೇಳಿದ್ದನ್ನೇ ಅವರು ಕೇಳುವುದು. CCF ಅನ್ನು ಅಥವಾ ACF ರವರನ್ನು ಬಾಯಿ ಮುಚ್ಚಿ ಎಂದು ಹೇಳಿದ ಅರಣ್ಯ ಮಂತ್ರಿಗಳನ್ನು ನಾನು ಇಲ್ಲಿಯವರೆಗೂ ನೋಡಿಯೇ ಇಲ್ಲ.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಅಧ್ಯಕ್ಷರೆ, ನಾವು ವಿಶ್ವವಿದ್ಯಾಲಯಗಳಿಗೆ ಈಗಾಗಲೇ ಸಾಕಷ್ಟು ಅನುದಾನವನ್ನು ಕೊಟ್ಟಿದ್ದೇವೆ. ಸರ್ಕಾರಿ ವ್ಯವಸ್ಥೆಯಲ್ಲಿ ನಾವು ಅವರಿಗೆ ಎಷ್ಟು ಪೂರಕವಾಗಿ ಸಹಕಾರವನ್ನು ಕೊಡುವುದಕ್ಕೆ ಸಾಧ್ಯವೋ ಅಷ್ಟು ಸಹಕಾರವನ್ನು ಕೊಡುತ್ತಿದ್ದೇವೆ. ಈ ಬಗ್ಗೆ ಯಾವುದೇ ಅನುಮಾನ ಬೇಡ. ಸಂಶೋಧನೆಯನ್ನು ಮಾಡಲಿ ಎಂದು RKVYನಲ್ಲಿ 54 ಕೋಟಿ ರೂ.ಗಳನ್ನು, ಬ್ಲಾಕ್ ಗ್ರಾಂಟ್ 5 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಈ ವರ್ಷ ಸಹ 5 ಕೋಟಿ ರೂ.ಗಳನ್ನು ಕೊಡುತ್ತಿದ್ದೇವೆ. ಆದರೆ ಅವರು ಸಂಶೋಧನೆಗಿಂತಲೂ ಹೆಚ್ಚಾಗಿ ಕಟ್ಟಡವನ್ನು ಕಟ್ಟುವುದರಲ್ಲಿ ಹೆಚ್ಚು ತಜ್ಞರಾಗಿದ್ದಾರೆ. ಮಂಡ್ಯದಲ್ಲಿ ಒಂದು organic ಬೆಲ್ಲ ಉತ್ಪಾದನಾ ಘಟಕವನ್ನು ಮಾಡಿದ್ದಾರೆ. ಅದಕ್ಕೆ ಸುಮಾರು 8–9 ಕೋಟಿ ರೂ.ಗಳು ಖರ್ಚು ಆಗಿದೆ. ಆದರೂ ಸಹ ಈ ವರ್ಷ ಅದರಲ್ಲಿ ಒಂದು ಕೆ.ಜಿ.ಯಷ್ಟೂ ಸಾವಯುವ ಬೆಲ್ಲದ ಉತ್ಪಾದನೆಯು ಆಗಿರುವುದಿಲ್ಲ. ನಾನು ಈ ವಿಚಾರಗಳನ್ನು ನೋಡುತ್ತಿದ್ದೇನೆ. ತಾವೆಲ್ಲರೂ ನಮಗೆ ಸ್ವಲ್ಪ ಸಹಕಾರವನ್ನು ನೀಡಿದರೆ ಇದನ್ನು ದಾರಿಗೆ ತರಬಹುದು. ನಾವು ಇದನ್ನು ಸರಿ ಮಾಡುವುದಕ್ಕೆ

ಹೋದರೆ ಬೇರೆ ಬೇರೆ ಕಡೆಗಳಿಂದ ಧ್ವನಿಗಳು ಕೇಳಿಬರುತ್ತವೆ. ವಿಜ್ಞಾನಿಗಳಿಗೆ ರೈತರ ಸಂಪರ್ಕ ಇಲ್ಲವೆಂದು ಅನೇಕ ಜನರು ಹೇಳಿದ್ದಾರೆ. ಅದಕ್ಕಾಗಿ ಪ್ರತಿ ವಿಶ್ವವಿದ್ಯಾಲಯದ ಒಬ್ಬ ವಿಜ್ಞಾನಿಯನ್ನು ಒಂದು ರೈತ ಸಂಪರ್ಕ ಕೇಂದ್ರಕ್ಕೆ ಅಂದರೆ ಒಂದು ಹೋಬಳಿಗೆ Nodal Scientist ಆಗಿ ನೇಮಕ ಮಾಡಿದ್ದೇವೆ. ಅವರು 2 ವಾರದಲ್ಲಿ ಒಂದು ದಿನ ಆ ರೈತ ಸಂಪರ್ಕ ಕೇಂದ್ರದಲ್ಲಿ ಮತ್ತು ಸುತ್ತಲಿನ ಪ್ರದೇಶದಲ್ಲೇ ಕಳೆಯಬೇಕು. ಈ ರೀತಿ ಅವರು ಕನಿಷ್ಠ ಒಂದು ದಿನ ರೈತರ ಬಳಿಗೆ ಹೋದರೆ ಅವರಿಗೆ ರೈತರ ಕಷ್ಟವೇನು ಎಂಬುದು ಅವರಿಗೆ ಗೊತ್ತಾಗುತ್ತದೆ. ರೈತರ ಕಷ್ಟ-ಸುಖ ಅರ್ಥವಾಗುತ್ತದೆ. ಅವರು ಕೇವಲ ವಿಶ್ವವಿದ್ಯಾಲಯದ ಚೌಕಟ್ಟಿನಲ್ಲಿ ಕುಳಿತುಕೊಂಡು ರೈತರ ಕಷ್ಟ-ಸುಖ ಏನು ಎನ್ನುವುದನ್ನೇ ಮರೆತು ಬಿಟ್ಟಿದ್ದಾರೆ. ಆದ್ದರಿಂದ ಕನಿಷ್ಠ ಇವರು ರೈತರ ಹತ್ತಿರ ಹೋಗಲಿ ಎನ್ನುವ ಉದ್ದೇಶದಿಂದ ಪ್ರತಿ ಹೋಬಳಿಗೆ ಒಬ್ಬ Nodals Scientist ಅನ್ನು ನೇಮಕ ಮಾಡಿದ್ದೇವೆ. ಅವರು ಹೋಬಳಿಗೆ ಹೋಗುವ ಕೆಲಸ ಆಗುತ್ತಿದೆ. ಕೆಲವು ಕಡೆ ಇನ್ನೂ ಆಗಿಲ್ಲ. ಮುಂದಿನ ದಿನಗಳಲ್ಲಿ ಅವರು ಹೋಬಳಿಗಳಿಗೆ ಹೋಗಲಿಲ್ಲವೆಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ:- ತಾವು, ಎಲ್ಲಾ ಶಾಸಕರನ್ನು ಅವರ viewsಗೆ ವಿಜ್ಞಾನಿಗಳನ್ನು ಹಾಗೂ ಎಲ್ಲಾ ವಿಶ್ವವಿದ್ಯಾಲಯಗಳನ್ನು co-ordinate ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೀರಾ? ಏಕೆಂದರೆ ಅವರಿಗೆ ಅನುದಾನ ನಮ್ಮಿಂದ ಹೋಗುತ್ತದೆ. ಅವರು ನಮ್ಮ ಮಾತನ್ನು ಕೇಳುವುದಿಲ್ಲ. They think that they are supreme. ಹಾಗಾಗಿ ತಾವು ನಮ್ಮನ್ನು ಮತ್ತು ಅವರನ್ನು ಯಾವ ರೀತಿ co-ordinate ಮಾಡುತ್ತೀರಿ ಎಂದು ದಯವಿಟ್ಟು ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾಲಯಗಳಿಂದ ನಮಗೆ ಏನು ಪರಿಹಾರ ಬೇಕು, ಅದನ್ನು ಬೇಡಿಕೆ ಮಾಡಿ ನಾವು ತೆಗೆದುಕೊಳ್ಳಬೇಕು. ಆದರೆ ಅವು ಕಾನೂನು ಪ್ರಕಾರ ಸ್ವಾಯತ್ತ ಸಂಸ್ಥೆಗಳು.

ಶ್ರೀ ಎಸ್.ಆರ್. ವಿಶ್ವನಾಥ್:– GKVK ವಿಶ್ವವಿದ್ಯಾಲಯಕ್ಕೆ ನೀಡಲಾಗಿರುವ ಅನುದಾನವು ನಮ್ಮದು.

ಶ್ರೀ ಕೃಷ್ಣ ಬೈರೇಗೌಡ:– ಅನುದಾನ ನಿಮ್ಮದೂ ಅಲ್ಲ, ನಮ್ಮದೂ ಅಲ್ಲ. ಅದು ಸರ್ಕಾರದ್ದಾಗಿದೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:– GKVK ಇದೆಯಲ್ಲಾ ಅದು ಸರ್ಕಾರದ ಜಾಗ, ಮತ್ತು ಅವರು ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗ್ರ್ಯಾಂಟ್ ಆಗಿದೆ. ಅವರು ನಮ್ಮನ್ನು ಗಣನೆಗೆ ತೆಗೆದುಕೊಳ್ಳಬೇಕು. ಇಲ್ಲವಾದರೆ ಸರ್ಕಾರ ಏತಕ್ಕಾಗಿ ಅವರಿಗೆ ಹಣ ಕೊಡಬೇಕು? ಮಾನ್ಯ ಚಲುವರಾಯಸ್ವಾಮಿಯವರು ಹೇಳಿದ ಹಾಗೆ ಅವರು ನನ್ನ ಮಾತುಗಳನ್ನು ಕೇಳುವುದಿಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಕೃಷಿ ವಿಶ್ವವಿದ್ಯಾಲಯಗಳು ಯಾರ ಮಾತನ್ನು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣ ಬೈರೇಗೌಡರು ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳು ಎಂದು ಹೇಳಿದ್ದಾರೆ. ನಾವು ಈ ಬಿಲ್ ಅನ್ನು ಅಸೆಂಬ್ಲಿಯಲ್ಲಿ ಪಾಸ್ ಮಾಡಿದ್ದೇವೆ. ಆ ಬಿಲ್ ಅನ್ನು ಪುನಃ ಪರಿಶೀಲನೆ ಮಾಡಲು ಮಾನ್ಯ ಕೃಷ್ಣ ಬೈರೇಗೌಡರು ಮತ್ತೆ ಆ ಬಿಲ್ ಅನ್ನು ಇಲ್ಲಿ ತರಿಸಲಿ. ಸ್ವಾಯತ್ತತೆ ಏನಾಗಿದೆ ಎಂದರೆ, ಅವರೆಲ್ಲರೂ Chancellor ಎಂದು Governor ಆಗಿಬಿಟ್ಟಿದ್ದಾರೆ. ಅದಕ್ಕೆ Vice Chancellor ಎಂದು ಇದೆ. ಆದರೆ ಎಲ್ಲರೂ Chancellor ಆಗಿಬಿಟ್ಟಿದ್ದಾರೆ. Governor ತರಹ ಅಂದರೆ ನಾವೇ ಸುಪ್ರೀಂ ಎಂದು ಅಂದುಕೊಂಡಿದ್ದಾರೆ. ನಾವು ಕಮಿಟಿಯಿಂದ ಹೋದಾಗ ಯಾರೂ ಸರಿಯಾಗಿ ಲೆಕ್ಕಪತ್ರಗಳನ್ನು ಕೊಡುವುದಿಲ್ಲ. ನಮ್ಮನ್ನು ಯಾವುದಕ್ಕೂ ಕರೆಯುವುದಿಲ್ಲ. ಅವರೇ independent body ತರಹ ಕೆಲಸ ಮಾಡುತ್ತಿವೆ. ದಯವಿಟ್ಟು ಇದು

ಬದಲಾವಣೆ ಆಗಬೇಕು. ಅವತ್ತಿನ ದಿವಸ ಒಳ್ಳೆಯ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳನ್ನು ಕೊಟ್ಟಿದ್ದೆವು. ಆದರೆ ಇವತ್ತು ಕೆಟ್ಟ ಉದ್ದೇಶದಿಂದಾಗಿ ಎಲ್ಲ ವಿಶ್ವವಿದ್ಯಾಲಯಗಳು ಹಾಳಾಗುತ್ತಿರುವುದನ್ನು ನೋಡುತ್ತಿದ್ದೇವೆ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ರೈತರಿಗೆ ಪೂರಕವಾಗಿ ಕೆಲಸ ಮಾಡುವುದಕ್ಕೆ ಹಾಗೂ ರೈತರ ಜೊತೆಗೂಡಿ ಕೆಲಸ ಮಾಡುವುದಕ್ಕೆ ಹೊರತು ಅವರು ಕ್ಯಾಂಪಸ್‌ಗಳಲ್ಲಿ, ಕಛೇರಿಗಳಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಅಲ್ಲ. ಅವರನ್ನು ರೈತರ ಸಮೀಪಕ್ಕೆ ತೆಗೆದುಕೊಂಡು ಹೋಗಬೇಕೆನ್ನುವುದು ನಮ್ಮ ಸಂಕಲ್ಪವಾಗಿದೆ. ಅವರು ರೈತರ ಸಮಸ್ಯೆಗಳಿಗೆ ಪರಿಹಾರ ಕೊಡಬೇಕು. ಅದನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕೃಷಿ ವಿಶ್ವವಿದ್ಯಾಲಯಗಳು 4 ಇವೆ. ಇವುಗಳನ್ನು ಸಂಶೋಧನೆಗಳ ಕಡೆಗೆ ಮತ್ತು self-sustainability ಕಡೆಗೆ ಹೇಗೆ ತೆಗೆದುಕೊಂಡು ಹೋಗುವುದು ಎಂಬ ಬಗ್ಗೆ ಅಧ್ಯಯನ ಮಾಡಲಿಕ್ಕೆ ಒಂದು Vision Group ಅನ್ನು set up ಮಾಡುತ್ತಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಯಾರು ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ, ಅಂತಹವರನ್ನು ತೆಗೆದುಕೊಂಡು ಯಾವ ರೀತಿ ವಿಶ್ವವಿದ್ಯಾಲಯಗಳನ್ನು research and self-sustainability ಕಡೆಗೆ re-orient ಮಾಡಬಹುದು ಎನ್ನುವ ಬಗ್ಗೆ ಒಂದು Vision Group ಅನ್ನು setup ಮಾಡುತ್ತಿದ್ದೇವೆ. ಸಂಶೋಧನೆ ಕಡೆಗೆ ಅವರನ್ನು ಹೆಚ್ಚಿಗೆ ತಾಕೀತು ಮಾಡುತ್ತೇವೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು:- ಮಾನ್ಯ ಕೃಷ್ಣ ಭೈರೇಗೌಡರೆ, ತಾವು ಮಾನ್ಯ ಸದಸ್ಯರು ಏನು ಸಂಶಯ ವ್ಯಕ್ತಪಡಿಸಿದರು, ಅದರ ಕಡೆಗೆ ಲಕ್ಷ್ಯ ಕೊಡಿ.

ಶ್ರೀ ಕೃಷ್ಣ ಬೈರೇಗೌಡ:- ಆಗಬಹುದು.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೆ, ತಾವು ಆ ಕಡೆ ಈ ಕಡೆ ಇರುವವರಿಗೆ ಅವಕಾಶ ಕೊಡುತ್ತೀರಿ, ನನಗೆ ಏಕೆ ಅವಕಾಶ ಕೊಡುತ್ತಿಲ್ಲ

ಎಂಬುದು ಗೊತ್ತಾಗುತ್ತಿಲ್ಲ. ನನಗೆ ಮಾತನಾಡಲು ಅವಕಾಶ ಕೊಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ಯಾವಗಲ್ ರವರೆ, ದಯವಿಟ್ಟು ತಾವು ಆ ರೀತಿ ಮಾತನಾಡಬೇಡಿ.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಇಲಾಖೆಯಲ್ಲಿ ಸಿಬ್ಬಂದಿಗಳ ಬಗ್ಗೆ, ಸಿಬ್ಬಂದಿಗಳ ಕೊರತೆಯ ಬಗ್ಗೆ ಹಾಗೂ ಇಲಾಖೆಯಲ್ಲಿ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ, ಯಾವ ರೀತಿ ಕೆಲಸ ಮಾಡುತ್ತಿಲ್ಲ? ಎಂಬುದರ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಇಲಾಖೆಯಲ್ಲಿ 5,300 ಖಾಲಿ ಹುದ್ದೆಗಳು ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ ಸಿಬ್ಬಂದಿಗಳ ಕೊರತೆ ಇದೆ, ಹಾಗಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆಂದು ಅಧಿಕಾರಿಗಳು ತಮ್ಮಲ್ಲಿ ಬಂದು ಸಬೂಬು ಹೇಳಬಹುದು. ಆದರೆ ವಾಸ್ತವಾಂಶ ಏನು ಎಂಬುದನ್ನು ನಾನು ಹೇಳುತ್ತೇನೆ, ಈ 5,300 ಸಿಬ್ಬಂದಿಗಳ ಕೊರತೆಯಲ್ಲಿ ಅರ್ಧ ಹುದ್ದೆಗಳು Clerical Staff ಗೆ ಸಂಬಂಧಿಸಿದೆ. field staff ಅಲ್ಲ. field work ಮಾಡುವುದಕ್ಕೆ, ಅದಕ್ಕೆ ಸಂಬಂಧವಿಲ್ಲ. field work ಮಾಡುವುದಕ್ಕೆ ಯಾವುದೇ ರೀತಿಯ ಕೊರತೆ ಆಗಬಾರದು ಎನ್ನುವುದಕ್ಕೆ ನಾವು ಏನು ಮಾಡಿದ್ದೇವೆಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕಳೆದ ವರ್ಷದಿಂದೀಚೆಗೆ ರೈತ ಸಂಪರ್ಕ ಕೇಂದ್ರಗಳು ರೈತರ ಜೊತೆ front end ಇದ್ದ ಹಾಗೆ. ನಮಗೆ ರೈತರ ಸಂಪರ್ಕವಿರುವುದು ಅಲ್ಲಿಯೇ. ಅಲ್ಲಿ ಇಲಾಖೆಯು ಸುಮಾರು 10–15 ವರ್ಷಗಳಿಂದ ತಾಂತ್ರಿಕತೆ ವರ್ಗಾವಣೆಯನ್ನು ಮಾಡುವುದಕ್ಕಿಂತ ಹೆಚ್ಚಾಗಿ ಬೀಜ, ಗೊಬ್ಬರವನ್ನು ಮಾರಾಟ ಮಾಡುವಂಥ ಏಜೆನ್ಸಿಗಳಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಕೂಡ ಅನೇಕ ಕಡೆ ಈ ವಿಚಾರವನ್ನು ಹೇಳಿದ್ದೇನೆ. ತಾಂತ್ರಿಕತೆ ವರ್ಗ ಮಾಡುವುದನ್ನು ಬಿಟ್ಟು ಒಂದು ಅಂಗಡಿಯನ್ನು ನಡೆಸಿಕೊಂಡು ಹೋಗುವಂಥ ಕೆಲಸ ನಮ್ಮಿಂದ ಆಗುತ್ತಿದೆ. ಇದು ಬದಲಾವಣೆ ಆಗಬೇಕು ಹಾಗೂ ಇಲಾಖೆ ತಾಂತ್ರಿಕತೆ ಕಡೆಗೆ ಮುಂದುವರೆಯಬೇಕೆನ್ನುವುದು ನಮ್ಮ ಗುರಿ. ಆದಕಾರಣ, ನಾವು ಏನು

ಮಾಡಿದ್ದೇವೆಂದರೆ, ರೈತ ಸಂಪರ್ಕ ಕೇಂದ್ರಗಳ ನಿರ್ವಹಣೆ ಮಾಡುವುದಕ್ಕೆ ..... ಈಗ Agriculture graduates ರೈತ ಸಂಪರ್ಕ ಕೇಂದ್ರದಲ್ಲಿ ಕುಳಿತುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಅಂದರೆ ಬೀಜ ಮಾರಾಟ ಮಾಡುತ್ತಿದ್ದಾರೆ. ಇನ್ನು ಮುಂದೆ Agriculture graduates ಆ ಕೆಲಸ ಮಾಬೇಕಾಗಿಲ್ಲ, ಅವರು fieldನಲ್ಲಿರಬೇಕು. ಅದಕ್ಕೋಸ್ಕರ Non-agricultere graduates, BSc, BCom, BBM ಮಾಡಿರುವ 740 ಜನರನ್ನು out source basisನಲ್ಲಿ ತೆಗೆದುಕೊಂಡಿದ್ದೇವೆ. ಬೀಜ ಮಾರಾಟ ಮಾಡುವುದು, ಅಲ್ಲಿ records maintain ಮಾಡುವುದು ಇವೆಲ್ಲವನ್ನು ಈಗ Agriculture graduates ಮಾಡಬೇಕಾಗಿಲ್ಲ. ಅವರನ್ನು ಈ ಕೆಲಸಗಳಿಂದ ಬಿಡುಗಡೆ ಮಾಡಿದ್ದೇವೆ. ಅವರಿಗೆ ಪರ್ಯಾಯವಾಗಿ 740 ಜನ staffನ್ನು out source basis ನಲ್ಲಿ ತೆಗೆದುಕೊಂಡಿದ್ದೇವೆ. ಈ ಪೈಕಿ 400 ಜನ ಈಗಾಗಲೇ report ಆಗಿದ್ದಾರೆ. ಇನ್ನೂ 300 ಜನ ರಿಪೋರ್ಟ್ ಆಗುತ್ತಾರೆ. ಒಟ್ಟಾರೆ 740 ಜನರು ಕೆಲಸ ಮಾಡುತ್ತಾರೆ.

ಇದಲ್ಲದೆ, 'ಆತ್ಮ' ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿಯಲ್ಲಿ 90%ರಷ್ಟು ಅನುದಾನ ನಮಗೆ ಕೇಂದ್ರ ಸರ್ಕಾರದಿಂದ ಬರುತ್ತಿದೆ. ಆತ್ಮ ಯೋಜನೆಯಡಿಯಲ್ಲಿ ವಿಸ್ತರಣಾ ಚಟುವಟಿಕೆಯನ್ನು ಮಾಡುವುದಕ್ಕೆ contract basisನಲ್ಲಿ 1,100 ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೇವೆ. ಅವರೆಲ್ಲರೂ ಸಹ agriculture experts, ಕೆಲವರು diploma holders, ಅದರಲ್ಲಿ 80% ರಿಂದ 90%ರಷ್ಟು 1,100 Agriculture graduatesನ್ನು ನೇಮಕ ಮಾಡಿಕೊಂಡಿದ್ದೇವೆ. ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ಆತ್ಮ ಸಿಬ್ಬಂದಿಯನ್ನು ವಿಸ್ತರಣಾ ಚಟುವಟಿಕೆಗೆ ಈ ವರ್ಷ ನಿಯೋಜನೆ ಮಾಡಿದ್ದೇವೆ. ಈಗಾಗಲೇ ಸುಮಾರು ಜನ ರಿಪೋರ್ಟ್ ಆಗಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಉಳಿದವರು ರಿಪೋರ್ಟ್ ಆಗುತ್ತಾರೆ. 1,100 ಜನ ಇದರ ಜೊತೆಗೆ 740 ಜನ ಒಟ್ಟಾರೆ 1,840 ಜನ ಸಿಬ್ಬಂದಿಗಳಾಗುತ್ತಾರೆ.

ಇದಲ್ಲದೆ, ನಮಗೆ ಇನ್ನೂ ಸಿಬ್ಬಂದಿ ಸಾಕಾಗುವುದಿಲ್ಲವೆಂದು ರೇಷ್ಮೆ ಇಲಾಖೆಯಿಂದ 280 ಜನ ತಾಂತ್ರಿಕ ಸಿಬ್ಬಂದಿಯನ್ನು ನಾವು ಎರವಲಾಗಿ ಪಡೆದುಕೊಂಡಿದ್ದೇವೆ. 2000 ಕ್ಕಿಂತ ಹೆಚ್ಚಿನ ಸಿಬ್ಬಂದಿಯನ್ನು ಕಳೆದ ಒಂದು ವರ್ಷದಲ್ಲಿ ನಾವು ಒದಗಿಸಿಕೊಟ್ಟಿದ್ದೇವೆ. ಹಾಗಾಗಿ ಯಾರಾದರೂ ಸಿಬ್ಬಂದಿ ಕೊರತೆಯಿದೆ ಎಂದು ಹೇಳಿದರೆ ದಯವಿಟ್ಟು ಅದರ ಹಿನ್ನೆಲೆ ಏನು ಎನ್ನುವುದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಅದು ಸಬೂಬು ಎನ್ನುವುದನ್ನು ಸಹ ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಕೆಲವು ಮಾನ್ಯ ಸದಸ್ಯರು ಗ್ರಾಮಸೇವಕರ ಬಗ್ಗೆ ಮಾತನಾಡಿದರು. ಗ್ರಾಮಸೇವಕರ ವೃಂದ ಹಿದೆಯೇ abolish ಆಗಿದೆ. ಆದರೆ, ಅದಕ್ಕೆ ಪರ್ಯಾಯವಾಗಿ ಕೃಷಿ ಚಟುವಟಿಕೆ, ವಿಸ್ತರಣಾ ಚಟುವಟಿಕೆ ಮಾಡಬೇಕೆಂದು ನಾವು ವರ್ಷದಲ್ಲಿ ಒಂದು ಬೆಳೆ ಇರುವ ಕಡೆಗೆ 6 ತಿಂಗಳು, ಎರಡು ಬೆಳೆ ಇರುವ ಕಡೆಗೆ 9 ತಿಂಗಳಿಗೆ ಕೃಷಿ ಅನುವುಗಾರರನ್ನು ನೇಮಕ ಮಾಡುತ್ತಿದ್ದೇವೆ. ಅವರಿಗೆ ದಿನಕ್ಕೆ ` 175/-ಗಳ ಮೇಲೆ ಕೊಟ್ಟು, ತಿಂಗಳಿಗೆ ` 5,000ರಂತೆ ಸಂಬಳ ಕೊಟ್ಟು ಒಂದು ಊರಿಗೆ ಒಬ್ಬರು ಅನುವುಗಾರರನ್ನು ನೇಮಕ ಮಾಡಿದ್ದೇವೆ. ಅವರ ಕೆಲಸವೇನು ಎಂದರೆ, ಕೃಷಿ ಅಧಿಕಾರಿಗಳಿಂದ ತಂತ್ರಜ್ಞಾನವನ್ನು ಪಡೆದುಕೊಂಡು ರೈತರಿಗೆ ತಲುಪಿಸುವುದು. ಅವರಿಗೆ ಟ್ರೈನಿಂಗ್ ಕೊಟ್ಟಿದ್ದೇವೆ. ಅವರ capacity building ಮಾಡುತ್ತಿದ್ದೇವೆ. ಏತಕ್ಕೋಸ್ಕರವೆಂದರೆ, ಹಿಂದೆ ಗ್ರಾಮಸೇವಕರು ಏನು ಕೆಲಸ ಮಾಡುತ್ತಿದ್ದರೋ ಆ ಕೆಲಸವನ್ನು ಈ ಅನುವುಗಾರರು ಮಾಡಲಿ, ಇವರ ಮುಖಾಂತರ ಆಗಲಿ ಎನ್ನುವ ಉದ್ದೇಶಕ್ಕೆ 6,000 ಸಿಬ್ಬಂದಿ ಈ ರೀತಿಯ ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಅಂದರೆ ಪಂಚಾಯತಿಗೆ ಒಬ್ಬರು.

ಶ್ರೀ ಕೃಷ್ಣ ಭೈರೇಗೌಡ:- ಒಂದು ಪಂಚಾಯತಿಗೆ ಒಬ್ಬರಿಗಿಂತಲೂ ಜಾಸ್ತಿ ಜನ ಇದ್ದಾರೆ.

ಶ್ರೀ ಜಿ.ಟಿ. ದೇವೇಗೌಡ:- ಈಗ ಅವರೆಲ್ಲರೂ ಕೆಲಸ ಮಾಡುತ್ತಿದ್ದಾರೆಯೇ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಕೆಲಸ ಮಾಡುತ್ತಿದ್ದಾರೆ, ಆದರೆ ನೀವು ಅವರಿಗೆ ` 5,000/– ಸಂಬಳ ಕೊಡುತ್ತೀರಿ, ಈ ಮೊತ್ತ ಅವರ ಬಸ್ ಚಾರ್ಜ್‌ಗೆ ಸರಿಯಾಗುತ್ತದೆ.

ಶ್ರೀ ಕೃಷ್ಣ ಭೈರೇಗೌಡ:– ಈ ವಿಚಾರವನ್ನು ಏತಕ್ಕಾಗಿ ಗಮನಕ್ಕೆ ತರುತ್ತಿದ್ದೇನೆಂದರೆ, ಅನುವುಗಾರರು ಎಲ್ಲಾ ಪಂಚಾಯತಿಗಳಲ್ಲಿ ಇದ್ದಾರೆ. ಆದರೆ, ಇವರು ಕೆಲಸ ಮಾಡುತ್ತಿದ್ದಾರೆಯೇ? ಎನ್ನುವುದು ಒಳ್ಳೆಯ ಪ್ರಶ್ನೆ. ನಾನು ಏತಕ್ಕಾಗಿ ಈ ಮಾಹಿತಿಯನ್ನು ಕೊಡುತ್ತಿದ್ದೇನೆಂದರೆ ನಾಳೆ ದಿವಸ ಸಿಬ್ಬಂದಿ ಕೊರತೆ ಎಂದು ಅವರು ಹೇಳಿದಾಗ ನಿಜ ಏನು ಎನ್ನುವುದು ತಮಗೆ ಗೊತ್ತಿರಲಿ ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. ಹಾಗಾಗಿ, ಕೆಲಸ ಮಾಡುವುದಕ್ಕೆ ಸಿಬ್ಬಂದಿ ಕೊರತೆ ಕಾರಣ ಅಲ್ಲ ಎನ್ನುವುದನ್ನು ತಮ್ಮೆಲ್ಲರ ಗಮನಕ್ಕೆ ತೆಗೆದುಕೊಂಡು ಬರುವುದಕ್ಕೆ ನಾನು ಇಚ್ಛೆಪಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಬಸವರಾಜ ಬೊಮ್ಮಾಯಿಯವರೆ, ನೀವು ಆಮೇಲೆ ಪ್ರಶ್ನೆ ಕೇಳಿ, ಈಗಾಗಲೇ 2 ಗಂಟೆ ಆಗುತ್ತಾ ಬಂದಿದೆ. ಈಗ ನಿಮಗೆ ಅವಕಾಶ ಕೊಟ್ಟರೆ, ಅವರು ಆಗಲೇ ನನಗೆ ಅವಕಾಶ ಕೊಡಲಿಲ್ಲ, ನಿಮಗೆ ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ. ದಯವಿಟ್ಟು, ಕುಳಿತುಕೊಳ್ಳಿ.

ಶ್ರೀ ಕೃಷ್ಣ ಭೈರೇಗೌಡ:– ನಿಮ್ಮ ಸಹಕಾರವಿದ್ದರೆ ಅದನ್ನೂ ಮಾಡೋಣ.

ಶ್ರೀ ಬಿ.ಆರ್. ಯಾವಗಲ್:– ನಿನ್ನೆ ನಾನು ಒಂದು ದಿವಸ ತಯಾರು ಮಾಡಿಕೊಂಡು ಕೃಷಿ ಇಲಾಖೆ ಬೇಡಿಕೆಗಳ ಬಗ್ಗೆ ಮಾತನಾಡಬೇಕೆಂದು ಕಾಯುತ್ತಿದ್ದೆನು. ನೀವು ಅವಕಾಶವನ್ನೇ ನೀಡಲಿಲ್ಲ.

ಶ್ರೀ ಕೃಷ್ಣ ಭೈರೇಗೌಡ:– ನಿಮ್ಮ ಸಹಕಾರವಿದ್ದರೆ ಮುಂದೆ ಅದನ್ನೂ ಮಾಡೋಣ. ಆರಂಭ ಮಾಡಿದ್ದೇವೆ, ಎಲ್ಲದಕ್ಕೂ ಕಾಲ ಬರುತ್ತದೆ.

ಅಧ್ಯಕ್ಷರು:– ಈಗಾಗಲೇ ತಡವಾಗಿದೆ, ಆಯಿತು ಯಾವಗಲ್‌ರವರೆ ನೀವು ಕುಳಿತುಕೊಳ್ಳಿ.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಅಧ್ಯಕ್ಷರೆ, ಜೊತೆಗೆ ನಾನು ಮುಖ್ಯಮಂತ್ರಿಗಳಿಗೆ ಬಹಳ ಒತ್ತಾಯಪೂರ್ವಕವಾಗಿ ಮನವಿಯನ್ನು ಮಾಡಿದ್ದೇನೆ. ಅವರು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸುಮಾರು 1,000 ನೇಮಕಾತಿಗಳನ್ನು. . . ನಾನು ಎಲ್ಲಾ ಖಾಲಿ ಹುದ್ದೆಗಳನ್ನು ನೇಮಕಾತಿ ಮಾಡುತ್ತೇನೆಂದು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅಷ್ಟು ಅವಶ್ಯಕತೆಯಿಲ್ಲ. ನಾವು ಬೇರೆ ಸಂಪನ್ಮೂಲಗಳಿಂದ ಸಿಬ್ಬಂದಿಯನ್ನು ತೆಗೆದುಕೊಂಡಿರುವುದರಿಂದ ನಮಗೆ ಅಷ್ಟೊಂದು ಅವಶ್ಯಕತೆ ಬರುವುದಿಲ್ಲ. ನಮಗೆ ಸುಮಾರು 1,000 ಸಿಬ್ಬಂದಿ ಬೇಕಾಗುತ್ತದೆ, ಅದಕ್ಕೆ ತಾವು ಅವಕಾಶ ಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಈಗಾಗಲೇ ಮಾತನಾಡಿಕೊಂಡಿದ್ದೇವೆ. ಅವರು ಸಹ ಆಯಿತು, ಇದನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ. ಎನ್ನುವ ಮಾತನ್ನು ಹೇಳಿದ್ದಾರೆ.

ಜೊತೆಗೆ, ಸಿಬ್ಬಂದಿ ಕೊರತೆಯನ್ನು ನೀಗಿಸುವುದಕ್ಕೆ ಮತ್ತೊಂದು ಕ್ರಮ ನಾವು ಮಾಡಿರುವುದೆಂದರೆ, ಕೃಷಿ ಚಟುವಟಿಕೆ ನಡೆಯುವಂಥದ್ದು ಮುಂಗಾರಿನ ಈ ಸಂದರ್ಭದಲ್ಲಿ, ವರ್ಷದ 6 ತಿಂಗಳು. ಜಲಾನಯನ ಇಲಾಖೆ ಕಾಮಗಾರಿ ಹೆಚ್ಚಾಗಿ ನಡೆಯುವುದು ಕೃಷಿ ಚಟುವಟಿಕೆಗೆ ಮೊದಲು ಇರುವಂಥ 6 ತಿಂಗಳ ಅವಧಿಯಲ್ಲಿ. 6 ತಿಂಗಳು ಇವರು ಇಲ್ಲಿ ಕೆಲಸ ಮಾಡುತ್ತಾರೆ, ಇನ್ನು 6 ತಿಂಗಳು ಅವರು ಇಲ್ಲಿ ಕೆಲಸ ಮಾಡುತ್ತಾರೆ, ಇನ್ನು 6 ತಿಂಗಳು ಅಷ್ಟೊಂದು ಹೆಚ್ಚಿಗೆ ಕೆಲಸವಿರುವುದಿಲ್ಲವೆನ್ನುವುದನ್ನು ಮನಗಂಡು ಈ ಹಿಂದಿನ ಸರ್ಕಾರವೇ ಈ ಎರಡೂ ಇಲಾಖೆಗಳನ್ನು ವಿಲೀನ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿತ್ತು. ಅದನ್ನು ನಾವು ಈಗ implement ಮಾಡುತ್ತಿದ್ದೇವೆ. ಎರಡೂ–ಮೂರು ವರ್ಷದ ಹಿಂದೆಯೇ ತೀರ್ಮಾನವಾಗಿದ್ದರೂ ಸಹ implementation ಆಗಿರಲಿಲ್ಲ. ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಈ ವರ್ಗಾವರ್ಗಿ ಅವಧಿ ಬಂತು ಎಂದು ಹೇಳಿದರೆ ಯಾವ್ಯಾವ ಅಧಿಕಾರಿಗಳಿಗೆ political access ಇದೆ, ಅವರೆಲ್ಲರೂ

ಸಹ ಏನಾದರೂ ಮಾಡಿ ಜಲಾನಯನ ಇಲಾಖೆಗೆ ಹೋಗಬೇಕೆನ್ನುವುದೇ ಒಂದು ದೊಡ್ಡ ಕಸರತ್ತಾಗಿತ್ತು. ಇದನ್ನು ಇತ್ಯರ್ಥ ಪಡಿಸುವುದು ನಮಗೂ ಒಂದು ದೊಡ್ಡ ತಲೆನೋವಾಗಿತ್ತು. ಹಾಗಾಗಿ, ಈ ಸಿಬ್ಬಂದಿ ಹೆಚ್ಚು ಸದುಪಯೋಗವಾಗಬೇಕೆನ್ನುವ ಉದ್ದೇಶದಿಂದ ನಾವು ಜಲಾನಯನ ಇಲಾಖೆಯನ್ನು ಸಹ ವಿಲೀನ ಮಾಡುವುದರಿಂದ, ಕೃಷಿ ಇಲಾಖೆಗೂ ಸಹ ಹೆಚ್ಚಿನ ಸಿಬ್ಬಂದಿ ಸಿಗುತ್ತಾರೆ ಎನ್ನುವುದನ್ನು ತಾವೆಲ್ಲರೂ ಗಮನಿಸಿಕೊಳ್ಳಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡುವುದಕ್ಕೆ ಬಯಸುತ್ತೇನೆ.

ಬಹಳ ಚರ್ಚೆಯಾದಂಥ ಮತ್ತೊಂದು ವಿಚಾರವೆಂದರೆ, ರೈತ ಸಂಪರ್ಕ ಕೇಂದ್ರಕ್ಕೆ ರೈತ ಹೋದರೆ, ಅದು ನಮಗೆ ಬರುವುದಿಲ್ಲ, ತೋಟಗಾರಿಕೆ ಇಲಾಖೆಗೆ ಬರುತ್ತದೆ, ಅಲ್ಲಿಗೆ ಹೋಗಿ ಎಂದು ಅಥವಾ ಇದು ನಮಗೆ ಬರುವುದಿಲ್ಲ, ರೇಷ್ಮೆ ಇಲಾಖೆಗೆ ಬರುತ್ತದೆ ಅಲ್ಲಿ ಹೋಗಿ ಎಂದು ಹೇಳಿ ರೈತರನ್ನು ಕಛೇರಿಯಿಂದ ಕಛೇರಿಗೆ ಸುತ್ತಿಸುವಂಥದ್ದು, ಇದನ್ನು ಬಹಳ ಅನೇಕ ಸದಸ್ಯರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಸಹ ಇದಕ್ಕೆ ಸೂಚನೆಯನ್ನು ಕೊಟ್ಟಿದ್ದರು. ನಾವು, ತೋಟಗಾರಿಕಾ ಸಚಿವರು ಮತ್ತು ರೇಷ್ಮೆ ಇಲಾಖೆಯವರು ಸಭೆಯನ್ನು ಮಾಡಿ ಮುಂಬರುವ ದಿನಗಳಲ್ಲಿ ಮೂರೂ ಇಲಾಖೆಗಳವರು ರೈತ ಸಂಪರ್ಕ ಕೇಂದ್ರದಲ್ಲೇ ಕುಳಿತು ಕಾರ್ಯನಿರ್ವಹಿಸಬೇಕು ಎನ್ನುವಂಥ ಆದೇಶವನ್ನು ಇನ್ನು ಕೆಲವೇ ದಿನಗಳಲ್ಲಿ ಹೊರಡಿಸುತ್ತಿದ್ದೇವೆ. ಆ ರೀತಿಯಾದಾಗ RSKನಲ್ಲಿಯೇ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯವರು ಮೂರು ಇಲಾಖೆಯವರು ಸಹ ಒಂದೇ ಕಡೆ ಸಿಗುವಂಥ ಕೆಲಸವನ್ನು ಮಾಡುತ್ತಿದ್ದೇವೆ.

ಕೆಲವು ಸದಸ್ಯರು ಮಾತನಾಡುತ್ತಾ, ಕೃಷಿ ಇಲಾಖೆಯಲ್ಲಿ ಬಹಳಷ್ಟು heads of account ಇವೆ ಎಂದು ಹೇಳಿದರು. ರಾಜ್ಯ ಸರ್ಕಾರದ ಯೋಜನೆಗಳೇನಿವೆ, ಇದಕ್ಕಾಗಿ 22 heads of account ಇತ್ತು. ಅವುಗಳೆಲ್ಲವನ್ನೂ ವಿಲೀನ ಮಾಡಿ ಕೇವಲ 7 heads of accountಗೆ ನಾವು ಇಳಿಸಿದ್ದೇವೆ. ಆಡಳಿತ ಸರಳೀಕರಣ ಮಾಡಬೇಕೆನ್ನುವ ಉದ್ದೇಶದಿಂದ ನಾವು

7 ಸಂಖ್ಯೆಗೆ ಇಳಿಸಿದ್ದೇವೆ. ಆದರೆ, ಕೇಂದ್ರ ಸರ್ಕಾರ ಆ heads of account ಅನ್ನು maintain ಮಾಡಿರುತ್ತದೆ. ಹಾಗಾಗಿ, ನಮ್ಮ ಹಂತದಲ್ಲಿ ಸರಳೀಕರಣವನ್ನು ನಾವು ಮಾಡಿದ್ದೇವೆ. ಅದೇ ರೀತಿ ಮುಂದೆ ಕೇಂದ್ರ ಸರ್ಕಾರವು ಸಹ ಮಾಡಿದರೆ ಇನ್ನೂ ಹೆಚ್ಚಿನ ಪ್ರಯೋಜನವಾಗುತ್ತದೆ.

ಆಡಳಿತ ಸುಧಾರಣೆ ಮಾಡಬೇಕೆಂದು ಕೆ–ಕಿಸಾನ್ ಯೋಜನೆಯನ್ನು ತಂದಿದ್ದೇವೆ. ಹಿಂದಿನ ಸರ್ಕಾರ ಈ ಯೋಜನೆಯನ್ನು ರೂಪಿಸಿದ್ದರು, ಅವರ ಕಾಲದಲ್ಲಿ ಇದನ್ನು ಅಳವಡಿಸುವುದಕ್ಕೆ ಆಗಿರಲಿಲ್ಲ, ಎಲ್ಲಾ ರೈತ ಸಂಪರ್ಕ ಕೇಂದ್ರಗಳನ್ನು ಒಂದು ಜಾಲ ಎಂದರೆ computer network ಮುಖಾಂತರ ಒಂದು ಜಾಲದಲ್ಲಿ ತೆಗೆದುಕೊಂಡು ಬಂದು ಏನು ಅನಾವಶ್ಯಕವಾಗಿ ಪತ್ರ ಬರೆಯುವುದು, ಲೆಕ್ಕ maintain ಮಾಡುವುದು, records ಬರೆಯುವುದು, ಬುಕ್ ಬರೆಯುವುದು, ರಸೀದಿ ಬರೆಯುವುದು, ಇದೆಲ್ಲಾ ಏನು ಕೆಲಸಗಳಿತ್ತು, ಇವುಗಳನ್ನೆಲ್ಲಾ computerize ಮಾಡುವುದರಿಂದ ಎಷ್ಟೋ ಅವರ ಕೆಲಸದ ಭಾರ ಕಡಿಮೆಯಾಗುತ್ತದೆ ಮತ್ತು ಅವರನ್ನು ನೇರವಾಗಿ head officeಗೆ ಲಿಂಕ್ ಮಾಡುವುದರಿಂದ ಯಾವ ರೈತ ಸಂಪರ್ಕ ಕೇಂದ್ರದಲ್ಲಿ ಯಾವ ದಾಸ್ತಾನಿದೆ, ಯಾವ ಬೀಜ ಇದೆ, ಯಾವ ಗೊಬ್ಬರ ಇದೆ, ದಿನಕ್ಕೆ ಎಷ್ಟು ಸೇಲ್ಸ್ ಆಗಿದೆ, ದಿನಾ ಸಂಜೆಯಾಗುವಷ್ಟರ ಹೊತ್ತಿಗೆ ನಮಗೆ ರಿಪೋರ್ಟ್ ಬಂದು ಬಿಡುತ್ತದೆ. ನಾವು ರೈತರಿಗೆ ಬೇಕಾದಂಥ ಸಾಮಗ್ರಿಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಮತ್ತು ಆಡಳಿತದ ಭಾರ ಸಹ ಕಡಿಮೆಯಾಗಿ ಅಧಿಕಾರಿಗಳು ಇನ್ನಷ್ಟು ಹೆಚ್ಚಿಗೆ ಫೀಲ್ಡ್‌ಗೆ ಹೋಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಆಡಳಿತ ಸುಧಾರಣೆಯನ್ನು ಸಹ ನಾವು ಮಾಡುತ್ತಿದ್ದೇವೆಂದು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ರಮೇಶ್ ಕುಮಾರ್ ರವರು ಮಾತನಾಡುತ್ತಾ ಹೇಳಿದರು. ಇವರೆಲ್ಲ, ಇಷ್ಟು ಸಿಬ್ಬಂದಿ ಏತಕ್ಕೆ ಬೇಕು? ಏತಕ್ಕಾಗಿ ಇವರನ್ನು ಇಟ್ಟುಕೊಂಡಿದ್ದೀರಿ, ಕಾಲ ಬದಲಾವಣೆಯಾಗಿದೆ. ಕಾಲಕ್ಕೆ ತಕ್ಕಂತೆ ನೀವು ಬದಲಾವಣೆಯಾಗಿದ್ದೀರಾ ಎಂಬ ಪ್ರಶ್ನೆಯನ್ನು ಅವರು ಕೇಳಿದರು. ಮಾನ್ಯ ಶಿವಲಿಂಗೇಗೌಡರು ಮಾತನಾಡುತ್ತಾ ಏಕೆ ಹುದ್ದೆಗಳನ್ನು abolish ಮಾಡುತ್ತಿದ್ದೀರಿ, abolition

ಮಾಡಬೇಡಿ ಎಂಬ ವಾದ ಮಾಡಿದರು. ಕಾಲ ಬದಲಾವಣೆಯಾಗಿದೆ. ಬ್ಯಾಂಕ್‌ಗಳಲ್ಲಿ ಹಿಂದೆ 20 ಜನರು ಮಾಡುತ್ತಿದ್ದ ಕೆಲಸವನ್ನು ಇಂದು 5 ಜನರೇ ಮಾಡುತ್ತಿದ್ದಾರೆ. ಅದೇ ರೀತಿ ನೀವು ಯಾವುದೇ ವಲಯವನ್ನು ತೆಗೆದುಕೊಂಡರೂ ಸಹ ಮಾನವನ ಉತ್ಪಾದಕತೆ ಸುಧಾರಣೆಯಾಗಿದೆ. ತಂತ್ರಜ್ಞಾನ ಬೆಳೆದಿದೆ, ಹಿಂದೆ ಒಂದು ಫೋನ್‌ನಲ್ಲಿ ಯಾರಿಗಾದರೂ ಮಾತನಾಡಬೇಕಾದರೆ ಒಂದು ಟ್ರಂಕಾಲ್ ಹಾಕಿ ಅವರು ನಮಗೆ ಯಾವಾಗ connect ಮಾಡುತ್ತಾರೆಂದು ಒಂದು–ಎರಡು ಗಂಟೆ ಆ ಫೋನ್ ಪಕ್ಕ ಕಾಯ್ದುಕೊಳ್ಳಬೇಕಿತ್ತು. ಆದರೆ ಇಂದು ಕೇವಲ 5 ಸೆಕೆಂಡಿನಲ್ಲಿ ನಾವು ಯಾರಿಗಾದರೂ ಮಾತನಾಡಬಹುದು. ಹಿಂದೆ ಒಂದು ಕಾಲದಲ್ಲಿ ಒಂದು ಊರಿನಲ್ಲಿ ಒಂದು ಟೆಲಿವಿಷನ್ ಇದ್ದರೆ ಹೆಚ್ಚು. ಇಂದು ಒಂದು ಮನೆಯಲ್ಲಿ ಎರಡು ಮೂರು ಟೆಲಿವಿಷನ್‌ಗಳಿರುತ್ತವೆ. ಹಿಂದೆ ಒಂದು ಹಳ್ಳಿಯಲ್ಲಿ ಒಂದು ಸೈಕಲ್ ಬಂದರೆ ದೊಡ್ಡ ಸಂಗತಿಯಾಗಿರುತ್ತಿತ್ತು. ಇಂದು ಹಳ್ಳಿ–ಹಳ್ಳಿಯಲ್ಲಿ ಕಾರುಗಳಿವೆ, ಟ್ರಾಕ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ತಕ್ಕಂತೆ ಕಾಲವೂ ಬದಲಾವಣೆಯಾಗಿದೆ. ಕಾಲ ಬದಲಾವಣೆಯಾದಂತೆ ಆಡಳಿತದಲ್ಲಿಯೂ ಸಹ ಬದಲಾವಣೆ ತರುವ ಅವಶ್ಯಕತೆ ಇರುತ್ತದೆ. ಮಾನವನ ಉತ್ಪಾದಕತೆಯೂ ಸಹ ಅಷ್ಟೇ ಹೆಚ್ಚಾಗುತ್ತಾ ಇದೆ. ಮಾನ್ ರಮೇಶ್ ಕುಮಾರ್ ರವರು ಏನು ಹೇಳಿದರು, ಅದನ್ನು ನಾವು ಒಪ್ಪಿ ಸ್ವೀಕಾರ ಮಾಡಿದ್ದೇವೆ. ಅದರ ಹಿನ್ನೆಲೆಯಲ್ಲಿ ನಮ್ಮ ಆಡಳಿತ ವ್ಯವಸ್ಥೆಯನ್ನು ಸ್ವಲ್ಪ restructure ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಎಲ್ಲಿ ಸಿಬ್ಬಂದಿ ಅವಶ್ಯಕತೆ ಇದೆ, ಅಲ್ಲಿ ಸಿಬ್ಬಂದಿಗಳನ್ನು ಕೊಟ್ಟು, ಎಲ್ಲಿ ಅವಶ್ಯಕತೆ ಇಲ್ಲ, ಅಲ್ಲಿ ಸಿಬ್ಬಂದಿಗಳನ್ನು ತೆಗೆಯುವ ಕೆಲಸವನ್ನು ಮಾಡುತ್ತಿದ್ದೇವೆ. ಸುಮಾರು outsource basis ನಲ್ಲಿ ಅನೇಕ ಸಿಬ್ಬಂದಿಗಳನ್ನು ನಾವು ತೆಗೆದುಕೊಂಡಿದ್ದೇವೆ. ಅವರೆಲ್ಲರೂ ಕೆಲಸ ಮಾಡುತ್ತಿದ್ದಾರೆ. ನಾನು ತಾಲ್ಲೂಕುಗಳಿಗೆ ಭೇಟಿ ನೀಡಿದಾಗ outsource ನಲ್ಲಿ ತೆಗೆದುಕೊಂಡಿರುವವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಯೆ ಎಂದು ಕೇಳಿದಾಗ ಸಮಾಧಾನಕರವಾಗಿದೆ, ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. Regular ಗಿಂತ ಇವರೇ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂಬ ವಿಚಾರವನ್ನು ತಾಲ್ಲೂಕು ಮಟ್ಟದಲ್ಲಿ ಹೇಳಿದ್ದಾರೆ. ಏನು

ಬದಲಾವಣೆ ಎಂದು ತಾವು ಕೇಳಬಹುದು. ಮಾನ್ಯ ವಿಶ್ವನಾಥ್ ರವರು ಈಗ ಹೇಳುತ್ತಿದ್ದರು. ನಮ್ಮ ಮನೆ ಹೆಬ್ಬಾಳ ಹೋಬಳಿಯಲ್ಲಿದೆ. ಹೆಬ್ಬಾಳ ಎಲ್ಲಿದೆ, ಅದರ ಕಾರ್ಯವ್ಯಾಪ್ತಿ ಏನು ಎನ್ನುವುದು ತಮಗೆ ಗೊತ್ತಿದೆ ಅಧ್ಯಕ್ಷರೆ. ಹೆಬ್ಬಾಳದಲ್ಲಿ ಒಂದು ರೈತ ಸಂಪರ್ಕ ಕೇಂದ್ರ ಎಂದು ಇದೆ ನಿಮಗೆ ಗೊತ್ತಿದೆಯೆ ಶಿವಲಿಂಗೇಗೌಡರೆ? ಹೆಬ್ಬಾಳದಲ್ಲಿ ನೀವು ಯಾವ ರೈತರನ್ನು ಸಂಪರ್ಕ ಮಾಡುತ್ತೀರಿ? ಯಾವ ರೈತರಿಗೆ ಸಂಪರ್ಕ ಮಾಡುವುದು? ಆ ಹೆಬ್ಬಾಳ ವ್ಯಾಪ್ತಿಯಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಬೆಳೆ ವಿಸ್ತೀರ್ಣ ಎಷ್ಟೆಂದು ನಿಮಗೆ ಗೊತ್ತಾ? ಒಂದು ಸೊನ್ನೆ, ಎರಡು ಸೊನ್ನೆ, ಸೊನ್ನೆ, ಸೊನ್ನೆ. ಅಲ್ಲಿ ಇಬ್ಬರು ಅಧಿಕಾರಿಗಳು ಕುಳಿತುಕೊಂಡಿದ್ದಾರೆ. ಇದು ನಮಗೆ ಬೇಕಾ?

ಒಬ್ಬ ಮಾನ್ಯ ಸದಸ್ಯರು:– ತೆಗೆದುಬಿಡಿ.

ಶ್ರೀ ಕೃಷ್ಣ ಭೈರೇಗೌಡ:– ಅದನ್ನೆ ಮಾಡುತ್ತಿರುವುದು. ಅದನ್ನೆ ಅವರಿಗೆ ನಾನು ಮನವರಿಕೆ ಮಾಡಿಕೊಡುತ್ತಿದ್ದೇನೆ. ನನ್ನ ಬಳಿ list ಇದೆ. ಸುಮಾರು 6–7 ಕಡೆ ಈ ರೀತಿ ಇದೆ. ಕೇವಲ 200, 250 ಹೆಕ್ಟೇರ್ ಇದೆ, ಅಂತಹ ಕಡೆಯೆಲ್ಲಾ ಒಂದೊಂದು ರೈತ ಸಂಪರ್ಕ ಕೇಂದ್ರವನ್ನು ತೆರೆದು ನಾವು ಅಲ್ಲಿ ಕುಳಿತುಕೊಂಡು ಯಾವ ರೈತ ಸಂಪರ್ಕ ಮಾಡುತ್ತಿದ್ದಾರೆ ಎಂಬುದು ನಿಮಗೂ ಗೊತ್ತಿಲ್ಲ, ನಮಗೂ ಗೊತ್ತಿಲ್ಲ. ಅಂತಹವುಗಳನ್ನು ನಾವು ಬದಲಾವಣೆ ಮಾಡಬೇಕಾಗುತ್ತದೆ. ಅದನ್ನು ನಾವು ಮಾಡುತ್ತಿದ್ದೇವೆಂಬುದನ್ನು ನಾನು ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ಇಲ್ಲಿ ಇಲ್ಲ. ಇತ್ತೀಚೆಗೆ ಅವರು ರೇಷ್ಮೆ ಬಗ್ಗೆ ಮಾತನಾಡಿದರು. ರೇಷ್ಮೆ ಇಲಾಖೆ ಬಗ್ಗೆ ನಾನು ಮಾತನಾಡುವುದಿಲ್ಲ. ಇಲಾಖೆಯ ಸಿಬ್ಬಂದಿ ಬಗ್ಗೆ ನಾನು ಮಾತನಾಡುತ್ತೇನೆ. ಏಕೆಂದರೆ, 280 ಸಿಬ್ಬಂದಿಗಳನ್ನು ನಾನು ತೆಗೆದುಕೊಂಡಿದ್ದೇನೆ. ಉದಾಹರಣೆಗೆ, ಯಾವ ರೀತಿ ನಾವು ಅಧಿಕಾರಿಗಳಿಗೆ ಪೂರಕವಾಗಿ ಕೆಲಸ ಮಾಡುತ್ತೇವೆ ಎನ್ನುವುದಕ್ಕೆ ನಿಮಗೆ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ ದಾಖಲೆಯ ಪ್ರಕಾರ ಬಾಗಲಕೋಟೆ ಜಿಲ್ಲೆಯಲ್ಲಿ ರೇಷ್ಮೆ ಇರುವುದು 344 ಹೆಕ್ಟೇರ್. ಆದರೆ ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಸಂಖ್ಯೆ 65. ಎಷ್ಟು ಹೆಕ್ಟೇರಿಗೆ? 344 ಹೆಕ್ಟೇರಿಗೆ 65 ಜನ ಸಿಬ್ಬಂದಿ ಇದ್ದಾರೆ.

ಬೆಂಗಳೂರು ನಗರದಲ್ಲಿ 2,457 ಹೆಕ್ಟೇರಿಗೆ 991 ಸಿಬ್ಬಂದಿ ಇದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ 329 ಹೆಕ್ಟೇರ್ ರೇಷ್ಮೆ ಪ್ರದೇಶ ಇದ್ದರೆ 120 ಸಿಬ್ಬಂದಿಗಳಿದ್ದಾರೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಸರಾಸರಿ ನೋಡಿದರೆ ಒಂದು ಜಿಲ್ಲೆಯಲ್ಲಿ ಎರಡು ಹೆಕ್ಟೇರಿಗೆ ಒಬ್ಬರು, ಒಂದು ಜಿಲ್ಲೆಯಲ್ಲಿ 4 ಹೆಕ್ಟೇರಿಗೆ ಒಬ್ಬರು, ಇನ್ನೊಂದು ಜಿಲ್ಲೆಯಲ್ಲಿ 120 ಹೆಕ್ಟೇರಿಗೆ ಒಬ್ಬರು. ಇನ್ನೊಂದು ಜಿಲ್ಲೆಯಲ್ಲಿ 29 ಹೆಕ್ಟೇರಿಗೆ ಒಬ್ಬರು. ಈ ರೀತಿ ಸಿಬ್ಬಂದಿ ಇದ್ದಾರೆ. ನಿಜವಾಗಿ ಎಲ್ಲಿ ರೇಷ್ಮೆ ಬೆಳೆಯುತ್ತಾರೆ, ಅಲ್ಲಿ ಸಿಬ್ಬಂದಿ ಇಲ್ಲ. ರೇಷ್ಮೆ ಪ್ರದೇಶಗಳಲ್ಲಿ ಇಷ್ಟೊಂದು ಸಿಬ್ಬಂದಿಗಳಿಲ್ಲ. ಎಲ್ಲಿ ರೇಷ್ಮೆ ಇಲ್ಲ, ಅಲ್ಲಿ ಈ ಸಿಬ್ಬಂದಿಗಳು ಕುಳಿತಿದ್ದಾರೆ. ಎರಡು ಹೆಕ್ಟೇರಿಗೆ, ಮೂರು ಹೆಕ್ಟೇರಿಗೆ . . . .

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಏನು ಮಾಡುತ್ತಿದ್ದಾರೆ?

ಶ್ರೀ ಕೃಷ್ಣ ಭೈರೇಗೌಡ:– ಹೇಳುತ್ತೇನೆ. ಅವರು ಏನು ಮಾಡುತ್ತಿದ್ದಾರೆಂದು ಹೇಳುತ್ತೇನೆ. ಅದರಲ್ಲಿ ನಿಮ್ಮ ಪಾತ್ರ ಏನು ಎಂಬುದನ್ನು ಹೇಳುತ್ತೇನೆ. ಅದಕ್ಕಾಗಿಯೇ ಇದನ್ನು ನಾನು special ಆಗಿ mention ಮಾಡುತ್ತಿದ್ದೇನೆ. Special mention ಮಾಡುತ್ತಿರುವುದು ಏಕೆ ಎಂದು ಸಹ ಹೇಳುತ್ತೇನೆ. 6–7 ಜಿಲ್ಲೆಯನ್ನು ಬಿಟ್ಟರೆ ಬೇರೆ ಪ್ರದೇಶಗಳಲ್ಲಿ ಎಲ್ಲಾ 200–300 ಹೆಕ್ಟೇರ್‌ಗಳು ಮಾತ್ರ ಇವೆ. ಅಂತಹ ಕಡೆ 50, 60, 70, 100 ಜನ ಸಿಬ್ಬಂದಿಗಳು ಕುಳಿತಿದ್ದಾರೆ. ಬಹಳ ಸ್ವಾರಸ್ಯಕರವಾಗಿದೆ. ಸುಮಾರು ಜಿಲ್ಲೆಗಳ ಅಂಕಿ ಸಂಖ್ಯೆಗಳು ನನ್ನ ಬಳಿ ಇದೆ. ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಾರಾಂಶ ಹೇಳುತ್ತೇನೆ. ಯಾವ ರೀತಿ ಇವರು ಹೆಕ್ಟೇರನ್ನು report ಮಾಡಿದ್ದಾರೆಂದರೆ ಮೂರು ವರ್ಷದ ಅಂಕಿ ಸಂಖ್ಯೆ ನನ್ನ ಬಳಿ ಇದೆ. ಪ್ರತಿ ವರ್ಷ ಹೆಕ್ಟೇರ್ ಪ್ರಮಾಣ ಹೆಚ್ಚಾಗಿದೆ. ಅದನ್ನು ಯಾರು ಜಾಸ್ತಿ ಮಾಡುತ್ತಾರೆಂದರೆ, report ಹಾಕುವಾಗ ಇವರು ಈ ಹೋಬಳಿಯಲ್ಲಿ ಇಷ್ಟಿದೆ, ಈ ತಾಲ್ಲೂಕಿನಲ್ಲಿ ಇಷ್ಟಿದೆ ಎಂದು report ಹಾಕಿದ್ದಾರೆ. ಅಲ್ಲಿ ನಿಜವಾಗಿಯೂ ಎಷ್ಟು ಹೆಕ್ಟೇರ್ ಪ್ರದೇಶವಿದೆ ಎಂಬುದು ಗೊತ್ತಿಲ್ಲ. ವರ್ಷ–ವರ್ಷ 7%, 8% ಹೆಕ್ಟೇರ್ ವೃದ್ಧಿಯಾಗಿದೆ. ನಾನು ವೃಥಾ ಏನನ್ನು ಹೇಳಲು ಹೋಗುವುದಿಲ್ಲ.

ಆಯಿತಪ್ಪ, ಹಾಗಾದರೆ ಅಲ್ಲಿ ಗೂಡು ಎಷ್ಟು ಉತ್ಪಾದನೆಯಾಗಿದೆ, ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ನಮಗೆ ಆಯುಕ್ತರು ಅಲ್ಲಿಯ ಗೂಡು ಉತ್ಪಾದನೆಯ ಅಂಕಿ ಸಂಖ್ಯೆಯನ್ನು ಕೊಟ್ಟರು. ಮೂರು ವರ್ಷದಿಂದ ಎಲ್ಲೆಲ್ಲಿ ಹೆಕ್ಟೇರ್ ಜಾಸ್ತಿಯಾಗಿದೆ, ಎಂದಿದ್ದಾರೆ, ಅಲ್ಲಿ ಗೂಡು ಪ್ರಮಾಣ ಕಡಿಮೆ ಇದೆ. ಇದು ಹೇಗೆ? ರೇಷ್ಮೆ ಹೆಕ್ಟೇರ್ ಜಾಸ್ತಿಯಾಗುತ್ತಿದೆ ಎಂದರೆ ಉತ್ಪಾದಕತೆ ಜಾಸ್ತಿ ಆಗುವಂತಹದು. ವಿಸ್ತೀರ್ಣ ಜಾಸ್ತಿಯಾದಂತೆ ಗೂಡು ಪ್ರಮಾಣವನ್ನು ನಾವು ಕರಾರುವಾಕ್ಕಾಗಿ ಹೇಳಬಹುದು. ಏಕೆಂದರೆ auction market ಗೆ ಬರುತ್ತದೆ. ಅಲ್ಲಿ ಎಷ್ಟು ತೂಲ ಬಂದಿದೆ ಎಂಬ ಬಗ್ಗೆ ಕರಾರುವಾಕ್ಕಾಗಿ ಲೆಕ್ಕವಿರುತ್ತದೆ. ಅದನ್ನು ನಾವು fudge ಮಾಡುವುದಕ್ಕೆ ಸಾಧ್ಯವಿಲ್ಲ. ಗೂಡು ಪ್ರಮಾಣ ಕಡಿಮೆಯಾಗುತ್ತಿದೆ, ಹೆಕ್ಟೇರ್ ಮಾತ್ರ ಜಾಸ್ತಿಯಾಗುತ್ತಿದೆ, ಇದು ಹೇಗೆ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಇದನ್ನೇನು ನಾವು ಮಾಡಿದೆವೆಂದರೆ, ಸಾಲದ್ದಕ್ಕೆ ಇಲ್ಲಿ ಕೆಲವು ಆದೇಶಗಳಿವೆ. ನಾವು ಅದರ ಅಂಕಿ ಸಂಖ್ಯೆ ಓದಲು ಹೋಗುವುದಿಲ್ಲ. ಈಗಲೇ ಸಮಯ ಬಹಳ ಹೆಚ್ಚಾಗಿರುವುದರಿಂದ ಎಲ್ಲರೂ ಆತುರದಲ್ಲಿದ್ದಾರೆ, ನಾನು ಆತುರದಲ್ಲಿದ್ದೇನೆ. 466 ರೇಷ್ಮೆ ಸಿಬ್ಬಂದಿ, ಅವರೆಲ್ಲರೂ ಸಹ ರೇಷ್ಮೆ ಪ್ರದರ್ಶಕರಾಗಿದ್ದವರು ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಆದರೆ ಆ ಇಲಾಖೆಯಲ್ಲಿ ಪ್ರಮೋಷನ್ ಕೊಡುವುದಕ್ಕೆ ಅವಕಾಶವಿಲ್ಲ. ಮೇಲೆ ಎಲ್ಲಾ ಹುದ್ದೆಗಳು ಭರ್ತಿಯಾಗಿವೆ, ಪ್ರಮೋಷನ್ ಕೊಟ್ಟಿದ್ದಾರೆ. ಏನೆಂದು ಪ್ರಮೋಷನ್ ಕೊಟ್ಟಿದ್ದಾರೆಂದರೆ ಇಲ್ಲಿ ಓದಿ ಹೇಳುತ್ತೇನೆ. ಅದರ ಸಾರಾಂಶ ಹೇಳುತ್ತೇನೆ. ನಾವೆಲ್ಲರೂ ಸಹ ಸ್ವ-ಇಚ್ಛೆಯಿಂದ ಕೃಷಿ ಇಲಾಖೆಗೆ ಹೋಗುತ್ತೇವೆ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೋಗುತ್ತೇವೆ. ಅಲ್ಲಿಗೆ ನಿಯೋಜನೆ ಮೇಲೆ ಹೋಗಿ ಕೆಲಸ ಮಾಡುತ್ತೇವೆ. ನಮಗೆ ಪ್ರಮೋಷನ್ ಕೊಡಿ ಎಂದು ಬರೆದು ಕೊಟ್ಟು 466 ಜನರು ಪ್ರಮೋಷನ್ ತೆಗೆದುಕೊಂಡಿದ್ದಾರೆ. ರೇಷ್ಮೆ ಕೃಷಿಯನ್ನು ಉದ್ಧಾರ ಮಾಡುವುದಕ್ಕೆ ಅಲ್ಲ, ನನಗೆ ಪ್ರಮೋಷನ್ ಬೇಕು. ನಿಮ್ಮಲ್ಲಿ ಪ್ರಮೋಷನ್‌ಗೆ ಅವಕಾಶವಿಲ್ಲ, ಬೇರೆ ಇಲಾಖೆಗೆ ಹೋಗಿ ಕೆಲಸ ಮಾಡುತ್ತೇನೆ ಎಂದು 2010-11 ರಲ್ಲಿ ಪ್ರಮೋಷನ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಸುಮಾರು

150 ಜನರು ನಿಯೋಜನೆ ಮೇಲೆ ಹೊರಗಡೆ ಹೋಗಿದ್ದಾರೆ. ಎಲ್ಲಿಗೆ ಹೋಗಿದ್ದಾರೆಂದು ಗೊತ್ತಿದೆಯೆ? ಮಾನ್ಯ ಪುಟ್ಟಣ್ಣಯ್ಯ ನವರು, ಶಿವಲಿಂಗೇಗೌಡರು ಇಬ್ಬರೂ ಕೇಳಿಸಿಕೊಳ್ಳಬೇಕು. Karnataka Liquor Corporation, Beverages Corporation ಏನೋ ಇದೆಯಲ್ಲ, ಅಲ್ಲಿಗೆ ಹೋಗಿದ್ದಾರೆ. ಯಾರ್‍ಯಾರು ಎಂದು ಹೆಸರೂ ಇದೆ. ಬೇಕಾದರೆ ಓದಿ ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಅವರನ್ನು ಅಲ್ಲಿಗೆ ಹಾಕಬೇಕೆಂದು ಯಾರು ಶಿಫಾರಸ್ಸು ಮಾಡಿದರೆನ್ನುವುದನ್ನು ಹೇಳಿ.

ಶ್ರೀ ಕೃಷ್ಣ ಭೈರೇಗೌಡ:- ನಾನು ಅದೇ ಪಾಯಿಂಟ್‌ಗೆ ಬರುತ್ತಿದ್ದೇನೆ. ಈಗ ಸಮಸ್ಯೆಗೆ ಬರುತ್ತೇನೆ, ಇದು ದೊಡ್ಡ ಸಮಸ್ಯೆಯಲ್ಲ, ಇದನ್ನು ಸರಿಪಡಿಸುವುದು 5 ನಿಮಿಷದ ಕೆಲಸ, ನಿಜವಾದ ಏನು ಸಮಸ್ಯೆ ಎನ್ನುವ ಅಂಶಕ್ಕೆ ಬರುತ್ತೇನೆ. Urban Development Department ಗೆ ಹೋಗಿದ್ದಾರೆ, ರೇಷ್ಮೆ ಕೃಷಿ ಇಲಾಖೆಯನ್ನು ಬಿಟ್ಟು Urban Development Department ಗೆ deputation ನಲ್ಲಿ ಹೋಗಿದ್ದಾರೆ. Sub Registrar office ಗಳಲ್ಲಿ ಕೆಲಸ ಮಾಡುತ್ತಿದಾರೆ, ಅವಶ್ಯಕತೆಗಿಂತ 10% ಹೆಚ್ಚುವರಿ ಸಿಬ್ಬಂದಿ head office ನಲ್ಲಿ ಕುಳಿತುಕೊಂಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಬಿಡಿಎ, ಬಿಬಿಎಂಪಿಗೆ ಹೋಗಿಲ್ಲವೇ?

ಶ್ರೀ ಕೃಷ್ಣ ಭೈರೇಗೌಡ:- ಸರ್, ಎಲ್ಲದಕ್ಕೂ ಹೋಗಿದ್ದಾರೆ, Executive officer ಆಗಿದ್ದಾರೆ, Municipal Officer ಆಗಿದ್ದಾರೆ. ನಾನು ರಾಜಕೀಯ ಬಿಟ್ಟು ಮಾತನಾಡುತ್ತಿದ್ದೇನೆ.

ಶ್ರೀ ಜಿ.ಟಿ. ದೇವೇಗೌಡ:- ರಾಜಕೀಯ ಮಾತನಾಡುತ್ತಿಲ್ಲ, ನೀವು ಬಂದು ವರ್ಷವಾಗಿದೆ, ಕತೆ ಹೇಳುತ್ತೀರಲ್ಲಾ, ಮಾಡಬೇಡಿ ಎಂದು ನಿಮಗೆ ಅಡ್ಡ ಯಾರು ಬಂದಿದ್ದಾರೆ, ಇಷ್ಟು ಅಧಿಕಾರಿಗಳನ್ನು ನೀವು ಒಂದು ವರ್ಷದಿಂದ ಬಿಟ್ಟಿದ್ದೀರಲ್ಲಾ?

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):– ಅದಕ್ಕೆ ಏನು ಮಾಡಬೇಕೆಂದು ಈಗ ಮಾಡುತ್ತಿದ್ದೇವೆ, ಮೊದಲು ನೀವು ಕೇಳಿಸಿಕೊಳ್ಳಿ.

ಶ್ರೀ ಕೃಷ್ಣ ಭೈರೇಗೌಡ:– ಇದರಲ್ಲಿ ಏನು ಸುಮಾರು 500 ಜನ ಬಡ್ತಿ ತೆಗೆದುಕೊಂಡಿದ್ದರು, ಅದರಲ್ಲಿ ಇನ್ನು 330 ಸಿಬ್ಬಂದಿ promotion ತೆಗೆದುಕೊಂಡು 3 ವರ್ಷವಾಗಿದ್ದರೂ ಎಲ್ಲೂ ಹೋಗದೆ ಅಲ್ಲೇ ಇದ್ದರು. 330 ಜನ promotion ತೆಗೆದುಕೊಂಡು ಎಲ್ಲೂ ಹೋಗದೇ ಹಾಗೆ ಇದ್ದರು, ನಾನು ನೋಡಿ, ನಾನು ತಕ್ಷಣ ಮುಖ್ಯಮಂತ್ರಿಗಳಿಗೆ, ನೋಡಿ ಸರ್, ಹೀಗೆ 330 ಜನರಿದ್ದಾರೆ ಬೇರೆ ಇಲಾಖೆಗಳಿಗೆ ಹೋಗುತ್ತೇವೆಂದು ಬರೆದುಕೊಟ್ಟು promotion ತೆಗೆದುಕೊಂಡಿದ್ದಾರೆ, ಅವರು ಎಲ್ಲಿಗೂ ಹೋಗಿಲ್ಲ, ದಯವಿಟ್ಟು ಇವರನ್ನು ನಮ್ಮ ಇಲಾಖೆಗೆ ಕೊಡಬೇಕೆಂದು ಮನವಿ ಮಾಡಿಕೊಂಡಾಗ, ಮುಖ್ಯಮಂತ್ರಿಗಳು ಒಂದೇ ಸಾರಿ, ಅವರನ್ನು ಅಲ್ಲಿಗೆ ಮೊದಲು ಕೊಡಿ ಎಂದು ಹೇಳಿದರು. 330 ಜನರು ಹೋಗಬೇಕೆಂದು ಕಾರ್ಯದರ್ಶಿಗಳು ಆದೇಶ ಮಾಡಿದರೆ, ಇವರದು strike ಏನು? promotion ತೆಗೆದುಕೊಂಡಿದ್ದಾರೆ, ಬೇರೆ ಇಲಾಖೆಗೆ ಹೋಗುತ್ತೇವೆಂದು ಹೇಳಿದ್ದಾರೆ, Excise Department, Urban Development Department ಗೆ ಹೋಗಿದ್ದಾರೆ, ಯಾವುದ್ಯಾವುದಕ್ಕೋ ಹೋಗಿದ್ದಾರೆ, ಆದರೆ ಕೃಷಿ ಇಲಾಖೆಗೆ ಬರುವುದಕ್ಕೆ ತಯಾರಿಲ್ಲ. ಅವರನ್ನು ತೆಗೆದುಕೊಳ್ಳಬೇಡಿ ಎಂದು ಸುಮಾರು ಜನರ ಶಿಫಾರಸ್ಸು. ಏನು ಮಾಡುವುದು? ಇದು ಸರ್, problem. ತೆಗೆದುಕೊಳ್ಳಬೇಡಿ ಎಂದು ನಾನಾ ಕಡೆಯಿಂದ ಒತ್ತಡ.

ಶ್ರೀ ಲಕ್ಷ್ಮಣ ಸಿದ್ದುಸವದಿ:– ಮಾನ್ಯ ಅಧ್ಯಕ್ಷರೆ, ಇವರ ತಂದೆಯವರು ಹಿಂದೆ ಕೃಷಿ ಮಂತ್ರಿಗಳಾಗಿದ್ದರು, ಆ ಒಬ್ಬ ಗ್ರಾಮ ಸೇವಕನನ್ನು ಬೆಳಗಾಂನಿಂದ ಚಿಕ್ಕಮಗಳೂರು ಜಿಲ್ಲೆಗೆ ವರ್ಗಾವಣೆ ಮಾಡಿದರು. ಆ ವರ್ಗಾವಣೆಯಾದ ಸಂದರ್ಭದಲ್ಲಿ ಶಾಸಕರು ಗ್ರಾಮ ಸೇವಕರನ್ನು ಕರೆದುಕೊಂಡು ಇವರ ತಂದೆಯವರ ಕಛೇರಿಗೆ ಬಂದರು. ಕಛೇರಿಗೆ ಬಂದು, ಏನ್ ಸರ್, ಈ ಗ್ರಾಮ ಸೇವಕ ನಮಗೆ ಬಹಳ ಆತ್ಮೀಯ, ಇಡೀ ಚುನಾವಣೆಯನ್ನು ಅವನೇ

ಮಾಡುವವನು, ಅವನನ್ನು ತೆಗೆದು ಈ ಕಡೆ ಚಿಕ್ಕಮಗಳೂರಿಗೆ ಹಾಕಿದ್ದೀರಲ್ಲಾ, ದಯಮಾಡಿ ಒಂದು ಸಹಾಯ ಮಾಡಬೇಕಲ್ಲ ಎಂದರು. ಭೈರೇಗೌಡರು ಒಂದು ಮಾತನ್ನು ಹೇಳಿದರು, ನೀವು ಈಗ ಹೋಗಿ ಆಮೇಲೆ ಅವನಿಗೆ ಆರ್ಡರ್ ಕೊಟ್ಟು ಕಳುಹಿಸುತ್ತೇನೆ ಎಂದರು. ಪಾಪಾ! ಶಾಸಕರು, ಭೈರೇಗೌಡರು ನನ್ನ ಪರವಾಗಿ ಕೆಲಸ ಮಾಡುತ್ತಾರೆಂದು ತಿಳಿದುಕೊಂಡರು. ಆವಾಗ ಸಾಯಂಕಾಲದೊಳಗೆ ಕಾರ್ಯದರ್ಶಿಯವರನ್ನು ಕರೆಯಿಸಿಕೊಂಡು ಅವನಿಗೆ suspension order ಕೊಟ್ಟು ಕಳುಹಿಸಿಬಿಟ್ಟರು. ಮರುದಿವಸ ಆ ಶಾಸಕರು ಬಂದು, ಏನು ಕಳುಹಿಸಿಬಿಟ್ಟರು. ಮರುದಿವಸ ಆ ಶಾಸಕರು ಬಂದು, ಏನು ಭೈರೇಗೌಡರೆ ನನ್ನ ಮರ್ಯಾದೆಯನ್ನೆಲ್ಲಾ ಹರಾಜು ಹಾಕಿದಿರಲ್ಲಾ, ಅವನನ್ನು ನಿಮ್ಮ ಕಛೇರಿಗೆ ಕರೆದುಕೊಂಡು ಬಂದು ಪುನಃ ಅವನಿಗೆ ವರ್ಗಾವಣೆ ಮಾಡಿಕೊಡಿ ಎಂದರೆ, ಅವನಿಗೆ suspension order ಕೊಟ್ಟಿದ್ದೀರಲ್ಲಾ ಎಂದು ಕೇಳಿದರು. ನೀವೇ ಹೇಳಿದ್ದು, ನನ್ನ ಚುನಾವಣೆ ಮಾಡತಕ್ಕಂಥ ಜವಾಬ್ದಾರಿ ಇರತಕ್ಕಂಥವನು, ಅಂಥವನನ್ನು ವರ್ಗಾವಣೆ ಮಾಡಿದ್ದೀರಲ್ಲಾ ಎಂದು ಹೇಳಿದಿರಿ, ಅದಕ್ಕೆ ಅವನನ್ನು suspend ಮಾಡಿ, ಮುಂದಿನ ಚುನಾವಣೆಯಲ್ಲಿ ನಿಮಗೆ ಸಹಾಯವಾಗಲೆಂದು ಮುಂದೆ ಅವನನ್ನು suspension ಮಾಡಿ dismiss ಮಾಡುತ್ತೇನೆ, ಅವನನ್ನು ಕರೆದುಕೊಂಡು ಹೋಗಿ ಎಂದು ಹೇಳಿದರು. ಅಂಥವರ ಪುತ್ರರಾಗಿ ತಾವು ಒಂದು ವರ್ಷದವರೆಗೆ ಅವರ ಒತ್ತಡ ಬರುತ್ತದೆ, ಇವರ ಒತ್ತಡ ಬರುತ್ತದೆಂದು ಹೇಳುತ್ತಿದ್ದೀರಿ, ಒತ್ತಡಗಳು ರಾಜಕಾರಣದಲ್ಲಿ ಇರುವುದೇ, ಕಿತ್ತು ಹಾಕಿ ನಿಮ್ಮ ಇಲಾಖೆಗೆ ತೆಗೆದುಕೊಳ್ಳಿ ಸರ್.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ನಿಮಗೆ ಕೆಪಾಸಿಟಿ ಇದೆ, ನೀವು ಯುವಕರಿದ್ದೀರಿ, ಕೆಲಸ ಮಾಡುತ್ತೀರೆಂದು ಕೇಳಿದ್ದೇವೆ, ಈಗ ನೀವು ಈ ರೀತಿ ಹೇಳುವುದನ್ನು ನೋಡಿ ಬಿಟ್ಟರೆ, ನಿಜವಾಗಿಯೂ ಬೇಜಾರಾಗುತ್ತದೆ, ಅಲ್ಲಿ ಹೋಗಿದ್ದಾರೆ ಇಲ್ಲಿ ಹೋಗಿದ್ದಾರೆಂದು ಹೇಳುವುದನ್ನು ನೋಡಿದರೆ, ನಿಮ್ಮ ಅಸಹಾಯಕತೆಯನ್ನು ತೋರಿಸಿದಂತಾಗುತ್ತದೆ, ನನ್ನ ಇಲಾಖೆಗೆ ಬರಬೇಕೆಂದು ಮುಖ್ಯಮಂತ್ರಿಗಳಿಗೆ bold ಆಗಿ ಹೇಳಿ, ನೀವು ಕೆಲಸ

ಮಾಡಬೇಕೆಂದು ಹೇಳಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಸರಿ ಇಲ್ಲದ್ದನ್ನು ಸರಿ ಮಾಡಬೇಕು, ಅದನ್ನು ಬಿಟ್ಟು ನೀವು ಅಸಹಾಯಕರಾಗಿ ನಾನು ಏನು ಮಾಡುವುದಕ್ಕಾಗುತ್ತಿಲ್ಲ, ಬೇರೆ ಇಲಾಖೆಗೆ ಹೋಗಿದ್ದಾರೆ ಎಂದು ಒಂದು ವರ್ಷವಾದರೂ ಈ ರೀತಿ ಅಸಹಾಯಕತೆಯನ್ನು ತೋರಿಸಿದರೆ ನೀವು ಇದನ್ನು ಒಪ್ಪುವುದಿಲ್ಲ....[ಗೊಂದಲ]

ಶ್ರೀ ಕೃಷ್ಣ ಭೈರೇಗೌಡ:- ಸರ್: ಯಾರ ಅಸಹಾಯಕತೆ, ನಾನು ಹೇಳುವುದನ್ನು ಪೂರ್ತಿ ಕೇಳಿಸಿಕೊಳ್ಳಿ, ನಾನು ರಾಜಕೀಯೇತರವಾಗಿ ಈ ಸದನದಲ್ಲಿ ನಾವೆಲ್ಲರೂ ಕೂಡಿ ಏನು ಮಾಡಬಹುದು ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಇವರಿಗೆ undue promotion ಕೊಟ್ಟಿದ್ದು ನಿಮ್ಮ ಸರ್ಕಾರವೆಂದು ನಾನು ಎಲ್ಲಾದರೂ ಹೇಳಿದ್ದೇನೆಯೇ? ನಾನು ರಾಜಕೀಯ ಬಿಟ್ಟು ಸುಧಾರಣೆ ಕಡೆಗೆ ಮಾತನಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:- ಹಿಂದಿನ ಸರ್ಕಾರ ಯಾರದ್ದಾದರೂ ಇರಲಿ ಅದನ್ನು ನೀವು ಸರಿ ಮಾಡಿ, ನಿಮಗೆ ಮತ್ತು ಮುಖ್ಯಮಂತ್ರಿಗಳಿಗೆ power ಇದೆ, ಅದನ್ನು ಸರಿ ಮಾಡಿ.

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಪೂರ್ತಿ ಮಾತು ಕೇಳಿಸಿಕೊಳ್ಳುವ ತಾಳ್ಮೆ ಇಲ್ಲವೆಂದರೆ ಏನು ಮಾಡುವುದು. ಹೀಗೆಲ್ಲಾ ಆಗಿದೆ ಎಂದು ನಾವು ಯುವಕರಾದವರು ತಾಳ್ಮೆಯಿಂದ ಹೇಳುತ್ತಿದ್ದೇವೆ, ಹಿರಿಯರಾದವರಿಗೇ ಕೇಳುವ ತಾಳ್ಮೆ ಇಲ್ಲವೆಂದರೆ ಹೇಗೆ? ಈಗ ನಾನು ರಾಜಕೀಯವನ್ನು ಬೆರೆಸುವುದಕ್ಕೆ ಹೋಗದೆ ರಾಜಕೀಯ ಬಿಟ್ಟು ಮಾತನಾಡುತ್ತಿದ್ದೇನೆ, ಇನ್ನೊಬ್ಬರ ಕಡೆಗೆ ಬೆರಳು ತೋರಿಸುವುದನ್ನು ನನ್ನ ಉದ್ದೇಶವಲ್ಲ, ಸುಧಾರಣೆ ಮಾಡುಬೇಕೆನ್ನುವುದನ್ನು ನನ್ನ ಉದ್ದೇಶವಾಗಿದೆ. ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಎಷ್ಟೇ ಶಾಸಕರು, ಸಂಸದರು ಯಾರೇ ಫೋನ್ ಮಾಡಿದರೂ, ಅವರು ಬಂದು ಎಷ್ಟೇ ಧರಣಿ ಮಾಡಿದರೂ, ಎಷ್ಟೇ ಘೇರಾವ್ ಹಾಕಿದರೂ 280 ಜನರನ್ನು ನಮ್ಮ ಇಲಾಖೆಗೆ ನಿಯೋಜನೆ

ಮೇರೆಗೆ ತೆಗೆದುಕೊಂಡಿದ್ದೇನೆ ಎನ್ನುವುದನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ, ನಾವು ಬಿಟ್ಟಿಲ್ಲ.

ಶ್ರೀ ಜಿ.ಟಿ. ದೇವೇಗೌಡ:– 280 ಅಲ್ಲ 10000 ಜನರಿರಲಿ ನಿಮ್ಮ ಕೃಷಿ ಇಲಾಖೆಗೆ ನೌಕರರನ್ನು ಪೂರ್ಣವಾಗಿ merge ಮಾಡಿದರೆ ಮುಗಿದೆ ಹೋಯಿತು.

ಶ್ರೀ ಕೃಷ್ಣ ಭೈರೇಗೌಡ:– ಇದೆಲ್ಲಾ ಅಧಿಕಾರಿಗಳ ಅನುಕೂಲಕ್ಕೆ ತಕ್ಕ ಹಾಗೆ ಅನೇಕ ತೀರ್ಮಾನಗಳನ್ನು ನಾವೂ ಮಾಡುತ್ತೇವೆ, ಇಲ್ಲವೆಂದಲ್ಲ, ನಾವು ನೂರಕ್ಕೆ ನೂರು ಪರಮ ಸತ್ಯವೆಂದು ಹೇಳುವುದಿಲ್ಲ, ಆ ಪರಿಸ್ಥಿತಿಗಳಲ್ಲಿ ಮಾಡುತ್ತೇವೆ. ಆದರೆ ನಿಮ್ಮೆಲ್ಲರ ಸಹಕಾರವಿದ್ದರೆ ಖಂಡಿತಾ ಸುಧಾರಣೆ ಮಾಡಬಹುದು, ಮಾಡಿದ್ದೇವೆನ್ನುವುದನ್ನು ಹೇಳುತ್ತೇನೆ. ಮೊನ್ನೆಯೂ ಸಹ ಪತ್ರಿಕೆಯಲ್ಲಿ ಒಂದು ವಿಷಯ, post ಗಳ abolition ನಮ್ಮ department ನಲ್ಲಿ ಮಾಡುತ್ತಿದ್ದೇವೆ, restructure ಮಾಡುತ್ತಿದ್ದೇವೆ ಎಂದು ಬಂದಿರುವುದನ್ನು ತಾವು ಸಹ ನೋಡಿರಬಹುದು. ಇಲ್ಲಿ ಮಾನ್ಯ ಸದಸ್ಯರಾದ ಕಾಗೇರಿ, ಬೊಮ್ಮಾಯಿ ಅವರು ಹೇಳಿದರು, ನಿಮ್ಮ ನಿಜವಾದ core activities ಏನೆಂಬುದನ್ನು ಗುರುತಿಸಿ, ಎಲ್ಲಿ ಬೇರೆಯವರು ಆ ಸೇವೆಗಳನ್ನು ಒದಗಿಸಬಹುದು, ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿದರು. ಆ ದಿಕ್ಕಿನಲ್ಲೂ ನಾವು ಪ್ರಯತ್ನ ಮಾಡುತ್ತಿದ್ದೇವೆ. ಯಾವ non-essential services ಒಂದು ಕಾಲದಲ್ಲಿ soil health ಅನ್ನು ಸರ್ಕಾರ ಬಿಟ್ಟರೆ ಬೇರೆ ಯಾರು ಮಾಡುವ ಸಾಮರ್ಥ್ಯವಿರಲಿಲ್ಲ, ಅವತ್ತು ಸರ್ಕಾರವೇ ಮಾಡಬೇಕಾಗಿತ್ತು, ತಾವು ಹೇಳಿದಿರಿ, ಇವತ್ತು ಆ ಸಾಮರ್ಥ್ಯ ಬೇರೆಯವರ ಹತ್ತಿರವಿದೆ, ಅಂಥ ಸಂದರ್ಭದಲ್ಲಿ ಸರ್ಕಾರದ ದೊಡ್ಡ ಅಧಿಕಾರಿಗಳು ಕುಳಿತುಕೊಂಡು ಮಾಡಬೇಕಾಗಿಲ್ಲ, Agriculture Graduates ಬೇಕಾದಷ್ಟು ಜನ ಇದ್ದಾರೆ, ಖರ್ಚನ್ನು ನಾವೇ ಭರಿಸುತ್ತೇವೆ, ಅವರಿಗೆ ಕೊಟ್ಟರೆ ಇದನ್ನು ನಿರ್ವಹಣೆ ಮಾಡುವಂಥ ಸಾಮರ್ಥ್ಯ ಅವರಿಗೆ ಇವತ್ತು ಇದೆ. ಅವರ ಸಲಹೆಯನ್ನು ನಾವು ಒಪ್ಪಿಕೊಂಡಿದ್ದೇವೆ, ಅದನ್ನು ಮುಂದಿನ ದಿವಸಗಳಲ್ಲಿ ಅಳವಡಿಸಿಕೊಳ್ಳುತ್ತೇವೆ. ಯಾವುದು non-essential, non-technology jobs

ಯಾವುದಿದೆ, ಅಂಥವನ್ನು ಗುರುತಿಸಿ ಅದನ್ನು ನಮಗಿಂತ ಚೆನ್ನಾಗಿ ನಿರ್ವಹಣೆ ಮಾಡುವಂಥವರಿಗೆ ಕೊಟ್ಟು ನಮ್ಮ ಸಿಬ್ಬಂದಿಯನ್ನು ಸ್ವಲ್ಪ field ಗೆ ಕಳುಹಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. 5300 ಏನು ಹುದ್ದೆಗಳಿದ್ದಾವೆ, ಅವುಗಳಲ್ಲಿ clerical ಬೇಕಾದಷ್ಟಿವೆ. ಆ ಮಾಹಿತಿ ನನ್ನಲ್ಲಿ ಇದೆ, ಬೇಕಾದರೆ ತಮಗೆ ವೈಯಕ್ತಿವಾಗಿ ಕೊಡುತ್ತೇನೆ. ಆದುದರಿಂದ ನಾವು ಇದನ್ನೆಲ್ಲಾ ವಿಚಾರ ಮಾಡಿ, ಈ ರೀತಿಯಾಗಿ ಅನಾವಶ್ಯಕವಾಗಿ ಸಿಬ್ಬಂದಿಯನ್ನು ಹೊತ್ತುಕೊಂಡು, ರೈತರ ಹೆಸರಿನಲ್ಲಿ ಅವರಿಗೆ ಉದ್ಯೋಗ ಕೊಡುವುದು, ರೈತರಿಗೆ ಎಷ್ಟು ಪ್ರಯೋಜನವಾಗಿದೆ ಎಂದು ಅನೇಕ ಜನ ಇಲ್ಲಿ ಮಾತನಾಡಿದರು, ಆ ಪ್ರಶ್ನೆಗೂ ನಾವು ಉತ್ತರ ಕೊಡಬೇಕು. ಅವರಿಗೆ ಭತ್ಯೆ, ಸಂಬಳಗಳು ಎಲ್ಲಿಂದ ಬರುತ್ತದೆ, ನಾನು ನನ್ನ ಮನೆಯಲ್ಲಿ ಒಂದು ಸೋಪ್ ಖರೀದಿ ಮಾಡಿದರೆ ನಾನು ಎಷ್ಟು ತೆರಿಗೆ ಕಟ್ಟುತ್ತೇನೆ, ನಮ್ಮ ಮನೆಯಲ್ಲಿ ಕೆಲಸ ಮಾಡುವವನೊಬ್ಬ ಇದ್ದಾನೆ, ಅವನು ಸೋಪ್ ಖರೀದಿ ಮಾಡಿದರೆ ಅಷ್ಟೇ ತೆರಿಗೆಯನ್ನು ಕಟ್ಟುತ್ತಾನೆ. ಅವನ ಟ್ಯಾಕ್ಸ್ ತೆಗೆದುಕೊಂಡು ಬಂದು ನಾವು ಅಧಿಕಾರಿಗಳ ಮೇಲೆ ಸುರಿದು ಆಡಳಿತ ದೊಡ್ಡದಾಗಿ ಮಾಡಿಕೊಂಡು ಹೋದರೆ ಸಮಸ್ಯೆಗಳಿಗೆ ಪರಿಹಾರ ಅಲ್ಲ. ಪ್ರಧಾನ ಮಂತ್ರಿಗಳು ಹೇಳಿದ್ದಾರೆ, ಏನೆಂದು ಹೇಳಿದ್ದಾರೆ, "Not big Government, Better Governance" ಎಂದು ಹೇಳಿದ್ದಾರೆ. "Less Government, Better Governance" ಎಂದು ಹೇಳಿದ್ದಾರೆ. ಅವರ ಉದ್ದೇಶ ಏನಿದೆ, ಅದನ್ನು ನಾವೂ ಸಹ ಅಳವಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ರೈತರ ಪರವಾಗಿ ಈ ಸೇವೆ ಬೇಕೆಂದು ತಾವು ಕೇಳಿ. ಸಿಬ್ಬಂದಿಗಳು ಯಾರಿಗೋಸ್ಕರ? ಇವತ್ತು ಇಲ್ಲಿ ಅನೇಕ ಜನ ಮಾತನಾಡಿದರು. ಅವರಿಂದ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಅನುಕೂಲ ಆಗಿದ್ದರೆ ನಾವು ಇನ್ನೂ ಬಹಳ ಮುಂದಕ್ಕೆ ಹೋಗಬೇಕಾಗಿತ್ತು. ಬಹಳ ಪ್ರಗತಿ ಸಾಧಿಸಿರಬೇಕಾಗಿತ್ತು. ನಾವು ರಚನಾತ್ಮಕವಾಗಿ ಯೋಚನೆ ಮಾಡಿದಾಗ ಆಡಳಿತ ಸುಧಾರಣೆ ಮಾಡಬೇಕೆಂದು ಹೇಳಿದಾಗ ಕೆಲವು ಕಠಿಣವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರು strike ಮಾಡುತ್ತಾರೆ, ಹೌದು. ಅವರ

interest ಗೋಸ್ಕರ ಅವರಿಗೆ ಪ್ರಮೋಷನ್ ಬೇಕು, ಮತ್ತೊಂದು ಬೇಕು ಅದಕ್ಕೋಸ್ಕರ ನಾವು ಇಲಾಖೆ ನಡೆಸುವುದಕ್ಕಾಗುತ್ತದೆಯೇ? ಅಲ್ಲಿ B.Sc. Agriculture Graduates strike ಮಾಡುತ್ತಿದ್ದಾರೆ. ಒಂದು ಯೂನಿವರ್ಸಿಟಿಯಲ್ಲಿ ಒಬ್ಬರು B.Sc. Agriculture Graduate ಮಾಡಬೇಕೆಂದರೆ ಸರ್ಕಾರದ ಖರ್ಚು 20 ಲಕ್ಷ ರೂ. ಇಷ್ಟನ್ನು ಖರ್ಚು ಮಾಡಿ ಕೊನೆಗೆ ಆ B.Sc. Graduate ಗೆ ನಾವು ಕೆಲಸವನ್ನೂ ಕೊಡಬೇಕು. ನಾನು ಚಿತ್ರದುರ್ಗದ ಹತ್ತಿರ ಒಂದು ಕಾಲೇಜಿಗೆ ಹೋಗಿದ್ದೆ. ಅದಕ್ಕೆ ಒಬ್ಬ ಶಾಸಕರು witness ಇದ್ದಾರೆ. ಆ class room ನಲ್ಲಿ Agriculture Graduation ಮಾಡುತ್ತಿರುವಂತಹ 80 ವಿದ್ಯಾರ್ಥಿಗಳು ಇದ್ದರು. ನಿಮ್ಮಲ್ಲಿ ಎಷ್ಟು ಜನ ಕೃಷಿ ವಾಪಸ್ ಹೋಗಬೇಕೆಂದು ಇದ್ದೀರಿ? ಎಂದು ನಾನು ಅವರನ್ನು ಕೇಳಿದೆ. 80 ಜನರಲ್ಲಿ ಕೈ ಎತ್ತಿದವರು ಬರೀ ಇಬ್ಬರು, ಅದೂ ಹೆಣ್ಣು ಮಕ್ಕಳು. ಇಬ್ಬರು ಶಾಸಕರು ಇಲ್ಲಿ ವಿಟ್‌ನೆಸ್ ಇದ್ದಾರೆ. ಕೃಷಿ ಬಗ್ಗೆ ಅಷ್ಟು ಅಭಿರುಚಿ ಇಲ್ಲದೆ ಇರುವವರನ್ನು ನಾವು ತೆಗೆದುಕೊಂಡು ಬಂದು ಉದ್ಯೋಗ ಕೊಡಬೇಕೇ? ಉದ್ಯೋಗ ಕೊಡುವುದೇ ಸರ್ಕಾರದ ಕೆಲಸವೋ ಅಥವಾ ರೈತರ ಸೇವೆ ಮಾಡುವುದು ಸರ್ಕಾರದ ಕೆಲಸವೋ? ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ ಅವರು ಏನೇ ಸ್ಟ್ರೈಕ್ ಮಾಡಿದರೂ ಸಹ ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರು ಗೌರವಪೂರ್ವಕವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನೇನು ಹಿಂದಕ್ಕೆ ಹೆಜ್ಜೆ ಇಟ್ಟಿಲ್ಲ. 280 ಜನ ರೇಷ್ಮೆ ಇಲಾಖೆಯ ಸಿಬ್ಬಂದಿಯನ್ನೂ ಸಹ ತೆಗೆದುಕೊಂಡಿದ್ದೇವೆ. ಅನಾವಶ್ಯಕವಾಗಿರತಕ್ಕಂತಹ ಪೋಸ್ಟ್‌ಗಳನ್ನು ಅಬಾಲಿಷ್ ಮಾಡುವ ತೀರ್ಮಾನವನ್ನು ಮಾನ್ಯ ಮುಖ್ಯ ಮಂತ್ರಿಗಳ ಸಹಕಾರದೊಂದಿಗೆ ನಾವು ತೆಗೆದುಕೊಂಡಿದ್ದೇವೆ. ಆಡಳಿತ ಸುಧಾರಣೆ ಆಗಬೇಕು ಎನ್ನುವುದು ನಮ್ಮ ಇಚ್ಛೆ ಎನ್ನುವುದನ್ನು ಸಹ ನಾನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ಮೊನ್ನೆ ಒಂದು ಹೇಳಿಕೆ ಕೊಟ್ಟಿರುವುದನ್ನು ನಾನು ನೋಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ರೇಷ್ಮೆ ಇಲಾಖೆಯಲ್ಲಿ ಎಲ್ಲಿ ಕೆಲಸ ಇಲ್ಲ, ಅಲ್ಲಿ ಸಿಬ್ಬಂದಿ ಜಾಸ್ತಿ ಇದ್ದಾರೆ. ಇದನ್ನು

ಯಾವ ತರಹ ಸದುಪಯೋಗಪಡಿಸಿಕೊಳ್ಳುವುದು ಎಂಬ ಬಗ್ಗೆ ಅಧ್ಯಯನ ಮಾಡುವುದಕ್ಕೆ ಒಂದು ಸಮಿತಿ ಮಾಡಿದರು. ಅದಾದ ಕೂಡಲೇ ಈ ಇಲಾಖೆಯಲ್ಲಿ ಕೆಲಸ ಮಾಡುವವರದೆಲ್ಲಾ ಒಂದು ಆಂದೋಲನ ಪ್ರಾರಂಭವಾಯಿತು. ರೇಷ್ಮೆ ಕೃಷಿಕರನ್ನೆಲ್ಲಾ ಎತ್ತಿ ಕಟ್ಟಿ, ಹೋರಾಟಗಾರರನ್ನೆಲ್ಲಾ ಎತ್ತಿ ಕಟ್ಟಿ ಅವರು ಎಷ್ಟರ ಮಟ್ಟಿಗೆ ಕೆಲಸ ಮಾಡಿದ್ದಾರೆಂದು ನಾನು ಆಗಲೇ ಹೇಳಿದೆ. ಹೆಕ್ಟೇರ್ ಜಾಸ್ತಿಯಾಗಿದೆ, ಗೂಡು ಮಾತ್ರ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹೋಗಿ ಏನೋ ಆ ಇಲಾಖೆಯನ್ನೇನಾದರೂ ಮರು ವಿಂಗಡಣೆ ಮಾಡಿ ಬಿಟ್ಟರೆ ಅವರವರ ಪಟ್ಟಭದ್ರ ಹಿತಾಸಕ್ತಿಗಳಿಗೇನು ತೊಂದರೆಯಾಗುತ್ತದೆ ಎಂದು ಹೇಳಿ, ರೇಷ್ಮೆ ಕೃಷಿಕರಿಗೆ ತೊಂದರೆಯಾಗುತ್ತದೆ ಎನ್ನುವಂತಹ ಬಣ್ಣವನ್ನು ಅದಕ್ಕೆ ಕೊಟ್ಟು ಬಹಳ ಒತ್ತಡಗಳು ಹೋರಾಟಗಳು ಮಾಡುವಂಥದ್ದು ಆಯಿತು. ಅದನ್ನು ಮಾನ್ಯ ಪುಟ್ಟಣ್ಣಯ್ಯನವರು ಮುಚ್ಚುತ್ತಿದ್ದಾರೆಂದು ಹೇಳಿದರು, ಅದು ತಪ್ಪು. ಮುಚ್ಚುವಂತಹ ಪ್ರಸ್ತಾವನೆ ಎಲ್ಲಿಯೂ ಇಲ್ಲ. ಅದನ್ನು ಯಾವ ರೀತಿ ನಾವು ಸುಧಾರಣೆ ಮಾಡಬಹುದು ಎನ್ನುವಂತಹ ಪ್ರಸ್ತಾವನೆ ಇತ್ತು ಅಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ಸದ್ಯಕ್ಕೆ ವಿಲೀನದ ಬಗ್ಗೆ ಚರ್ಚೆ ಬೇಡ ಎನ್ನುವಂಥದ್ದನ್ನು ಹೇಳಿದರು. ಅದಾದ ಮೇಲೆ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು ಆಯುಕ್ತರು ಒಂದು ಆದೇಶವನ್ನು ಹೊರಡಿಸಿದರು. ಏನೆಂದು ಆದೇಶ ಹೊರಡಿಸಿದರೆಂದರೆ, ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಸಿಬ್ಬಂದಿ ಇಲ್ಲ. ನಮ್ಮ ತಾಂತ್ರಿಕ ಸೇವಾ ಕೇಂದ್ರ Technical service centre ಅಲ್ಲಿ ನಿಜವಾದ ಸಿಬ್ಬಂದಿ ಇರಬೇಕೆಂದು ಪ್ರಸ್ತಾವನೆಯನ್ನು ತಯಾರು ಮಾಡಿ ಆ ಸಿಬ್ಬಂದಿಗಳನ್ನು ಮರು ನಿಯೋಜನೆ ಮಾಡಿ ನಿಜವಾಗಿ field ಗೆ ಹೋಗಬೇಕೆಂದು ನಮ್ಮ ರೇಷ್ಮೆ ಆಯುಕ್ತರು ಒಂದು ಆದೇಶವನ್ನು ಹೊರಡಿಸಿದರು. ಕೃಷಿ ಇಲಾಖೆಯಲ್ಲಿ ಅಲ್ಲ, ರೇಷ್ಮೆ ಇಲಾಖೆಯಲ್ಲಿ ಎಲ್ಲಿ ಹೆಕ್ಟೇರ್ ಜಾಸ್ತಿಯಿದೆ, ಎಲ್ಲಿ ಅವರ ಅವಶ್ಯಕತೆ ಇದೆ, ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಆದೇಶವನ್ನು ಹೊರಡಿಸಿದರೆ ಮತ್ತೆ ಅದಕ್ಕೆ ವಿರೋಧ. ಎಲ್ಲರದೂ ವಿರೋಧ ಅದಕ್ಕೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ಕಹಿ ಆದರೂ ತಮ್ಮ ಸಹಕಾರ ಬೇಕು. ನಾವು ಯೋಚನೆ ಮಾಡುವಂತಹ

ಸಂದರ್ಭದಲ್ಲಿ ಯಾರದೋ ಹಿತಾಸಕ್ತಿಗೆ ನಾವು ಮಾಡುತ್ತಿಲ್ಲ ರೈತರಿಗೆ ಅನುಕೂಲವಾಗಬೇಕೆಂದು ಮಾಡುತ್ತಿದ್ದೇವೆ. ರೈತರ ಹೆಸರು ಹೇಳಿಕೊಂಡು ಅಧಿಕಾರಿಗಳ ಅನುಕೂಲ ಅನಾನುಕೂಲ ನಾವು ನೋಡಿಕೊಂಡು ಹೋದರೆ, ರೈತರಿಗೆ ಅನುಕೂಲ ಮಾಡುವುದಕ್ಕಾಗುವುದಿಲ್ಲ. ನಾವು ಕೃಷಿ ಇಲಾಖೆಗೆ ಅವರನ್ನು ತೆಗೆದುಕೊಳ್ಳುವುದು ದೂರದ ಪ್ರಶ್ನೆ, ಅದನ್ನು ಬಿಟ್ಟು ಬಿಡಿ. ರೇಷ್ಮೆ ಇಲಾಖೆಯಲ್ಲಿ ಮರು ನಿಯೋಜನೆ ಮಾಡಿದರೆ ಆ ಆದೇಶಕ್ಕೂ ನಮ್ಮ ಅನೇಕ ಜನಪ್ರತಿನಿಧಿಗಳು ವಿರೋಧ ಮಾಡುತ್ತಾರೆಂದರೆ, ದಯವಿಟ್ಟು ನಾವು ಸಹ ಎಲ್ಲೋ ಒಂದು ಕಡೆ ಇದರ ಬಗ್ಗೆ ವಿಚಾರ ಮಾಡಬೇಕು ಎನ್ನುವಂಥದ್ದು ಇದೆ.

ಶ್ರೀ ಬಿ.ಆರ್. ಪಾಟೀಲ್:- ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ತಾವು ಗಮನ ಹರಿಸಿದ್ದೀರಿ, ಒಳ್ಳೆಯ ಕೆಲಸ ಮಾಡಿದ್ದೀರಿ, ಮಾಡಿ. ನಾವೆಲ್ಲಾ ನಿಮ್ಮ ಜೊತೆಗಿದ್ದೇವೆ. ಆದರೆ ಬಹಳ ಪ್ರಮುಖವಾದ ಕೆಲವು ವಿಷಯಗಳು ಇವೆ ತಾವು ಅದರ ಕಡೆ ಗಮನ ಹರಿಸಿದರೆ ತಮ್ಮ ಸಮಯವೂ ಉಳಿಯುತ್ತದೆ ಮತ್ತು ಅನುಕೂಲವೂ ಆಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಸರ್ಕಾರದ ಮುಂದೆ ಏನಿದೆ, ನಿಮ್ಮ planಗಳು ಏನಿದೆ, ಅದಕ್ಕೆ ನಮ್ಮ ಸಹಕಾರ ಏನು ಬೇಕೆಂದು ದಯವಿಟ್ಟು ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಕೃಷ್ಣಬೈರೇಗೌಡ:- ಇಷ್ಟು ಹೊತ್ತು ತಾವು ಇರಲಿಲ್ಲ. ಆಗ ಎಲ್ಲಾ ಹೇಳಿದೆ.

ಶ್ರೀ ಬಸವರಾಜ ಬೊಮ್ಮಾಯಿ:- ಇಷ್ಟು ಹೊತ್ತು ತಾವು international ನಲ್ಲಿದ್ದಿರಿ ಎಂದು ನಾನು ಕೇಳಿದೆ. International ಗೆ ಹೋಗಿ ಈಗ ಕರ್ನಾಟಕಕ್ಕೆ ಬಂದಿದ್ದೀರಿ ಎಂದು ಗೊತ್ತಾಗಿದೆ.

ಶ್ರೀ ಕೃಷ್ಣ ಬೈರೇಗೌಡ:- International ಇದ್ದಾಗ ಇದ್ದಿರಿ, ಸ್ಥಳೀಯವಾಗಿ ಮಾತನಾಡುವಾಗ ತಾವು ಇರಲಿಲ್ಲ. ಆಗ ನಾನು ನಿಮ್ಮ ಹೆಸರೂ ತೆಗೆದುಕೊಂಡು ಮಾತನಾಡಿದೆ.

ಶ್ರೀ ಬಸವರಾಜ ಬೊಮ್ಮಾಯಿ:- ಇಲಾಖೆ ನೌಕರರ ಬಗ್ಗೆ ಚರ್ಚೆಯಾಗುತ್ತಿದೆ, ರೈತರ ಬಗ್ಗೆ ಚರ್ಚೆಯಾಗುತ್ತಿಲ್ಲ ಎಂಬುದು ಎಲ್ಲರ ಭಾವನೆ.

ಶ್ರೀ ಕೃಷ್ಣ ಬೈರೇಗೌಡ:- ನಾವು ಈ ಆಡಳಿತ ವ್ಯವಸ್ಥೆಯನ್ನು ತೆಗೆದುಕೊಂಡು ಸುಧಾರಣೆ ಕಡೆಗೆ ಹೆಜ್ಜೆ ಇಡಬೇಕಾಗುತ್ತದೆ. ಸಿಬ್ಬಂದಿ ಬಗ್ಗೆ ಏಕೆ ಮಾತನಾಡಿದ್ದು, ಮಾನ್ಯ ಸದಸ್ಯರುಗಳು ತಾವು ತಮ್ಮ ಭಾಷಣದಲ್ಲಿ ಮಾತನಾಡಲಿಲ್ಲ. ಅನೇಕ ಸದಸ್ಯರು ಸಿಬ್ಬಂದಿ ಬಗ್ಗೆ ಇಲ್ಲಿ ಮಾತನಾಡಿದರು. ಇಲಾಖೆ ಮಂತ್ರಿಯಾಗಿ ಸಿಬ್ಬಂದಿಗೆ ಏನು ಕಷ್ಟ ಸುಖ ಇದೆ ಎಂದು ಅದಕ್ಕೆ ಕೊಡಬೇಕು.

ಶ್ರೀ ವೈ.ಎಸ್.ವಿ. ದತ್ತ:- ನಿಮ್ಮ ಆಡಳಿತಾತ್ಮಕ ಸುಧಾರಣೆಗೆ ಖಂಡಿತವಾಗಿ ನಮ್ಮ ಸಂಪೂರ್ಣ ಸಹಕಾರ ಇದೆ. ಯಾವ ಜನಪ್ರತಿನಿಧಿಗಳು ಅಡ್ಡಿಪಡಿಸುವುದಿಲ್ಲ. ಅಕಸ್ಮಾತ್ ಯಾರಾದರೂ ಅಡ್ಡಿಪಡಿಸಿದರೆ ಇಂತಹವರು ಅಡ್ಡಿ ಮಾಡಿದರು ಎಂದು ಹೇಳಿ. ನಿಮಗೆ ಸಂಪೂರ್ಣ ಸಹಕಾರ ಕೊಡುತ್ತೇವೆ. ಆದರೆ ನೀವು ಹೇಳಬೇಕಾಗಿರುವುದು ಹೊಸ ಚಿಂತನೆ, ಹೊಸ ಯೋಜನೆ, ಹೊಸ ಕಾರ್ಯಕ್ರಮ, ಹೊಸ ಕೃಷಿ ನೀತಿ, ರೈತರ ಬಗ್ಗೆ ಏನು ಮಾಡಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನೌಕರಿ ರದ್ದುಪಡಿಸಬಾರದು ಎಂದು ನಾನು ಹೇಳಿದೆ. ಏತಕ್ಕೆ ಹೇಳಿದೆ ಎಂದರೆ, ನೀವು ಹೊರ ಸಂಪನ್ಮೂಲಗಳಿಂದ ಇಲಾಖೆ ಅಧಿಕಾರಿ ನಡೆಸುತ್ತೇವೆಂದರೆ, ಆಡಳಿತಾತ್ಮಕವಾಗಿ ಎಷ್ಟು ಸಾಧನೆ ಆಗಲಿಕ್ಕೆ ಸಾಧ್ಯವಿದೆ? ಅನುವುಗಾರರಿಗೆ 175 ರೂ. ನಂತೆ ಡೈಲಿವೇಜಸ್‌ನಲ್ಲಿ 6000 ಜನರನ್ನು ನೇಮಿಸಿಕೊಂಡಿದ್ದೀರಿ. ಅವರು ಇಲ್ಲಿಂದ ಆ ಕಡೆ ಹೋಗಿ ಅವರ ಊರಿಗೆ ಸಾಯಂಕಾಲ ವಾಪಸ್ ಬರುವುದಕ್ಕೆ ಬಸ್ ಚಾರ್ಜ್‌ಗೆ ದುಡ್ಡು ಸಾಕಾಗುವುದಿಲ್ಲ. 50 ರೂ. 60 ರೂ. bus charge ಇದೆ. 1100 B.Sc. AG Graduates ಅನ್ನು ನೀವು ಹೊರ ಸಂಪನ್ಮೂಲದಲ್ಲಿ ಸೇರಿಸಿಕೊಂಡಿದ್ದೀರಿ. ಇಲ್ಲಿರುವ ನೌಕರಿಯನ್ನು ರದ್ದು ಮಾಡಿ ನೀವು ಹೊರ ಸಂಪನ್ಮೂಲದಲ್ಲಿ

ತೆಗೆದುಕೊಂಡು ಎಷ್ಟರಮಟ್ಟಿಗೆ ಈ ರಾಜ್ಯದಲ್ಲಿ ಆಡಳಿತ ಕೊಡಬಹುದು? ಅದಕ್ಕೋಸ್ಕರ ಆ ಹುದ್ದೆಗಳನ್ನು ರದ್ದು ಮಾಡಬೇಡಿ, ಪುನರ್ ನೇಮಕ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೇವೆ, ನಾವು ಇನ್ಯಾವುದೇ ದೃಷ್ಟಿಯಿಂದ ಹೇಳಲಿಲ್ಲ.

ಶ್ರೀ ಕೃಷ್ಣ ಬೈರೇಗೌಡ:- ನಾನು ಹೇಳುವುದನ್ನು ಪೂರ್ಣವಾಗಿ ಕೇಳಿಸಿಕೊಳ್ಳಿ. ಆತ್ಮ ಯೋಜನೆ ಕೇಂದ್ರ ಸರ್ಕಾರದ ಯೋಜನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಎಲ್ಲಾ ಇಲಾಖೆಗಳಲ್ಲಿ ಹೊರ ಸಂಪನ್ಮೂಲ ಮಾಡಿ ಇಡುತ್ತಿದ್ದೀರಿ. ಹೊರ ಸಂಪನ್ಮೂಲದಲ್ಲಿ ಬರುವವರಿಗೆ ಮೂಗು ದಾರ ಇರುವುದಿಲ್ಲ. ಇವತ್ತು ಇರುತ್ತಾರೆ ನಾಳೆ ಹೊರಟು ಹೋಗುತ್ತಾರೆ.

ಉಪಾಧ್ಯಕ್ಷರು:- ಅವರು ಮುಗಿಸಲಿ.

ಶ್ರೀ ಕೃಷ್ಣ ಬೈರೇಗೌಡ:- ಆತ್ಮ ಯೋಜನೆಯಲ್ಲಿ ಶೇಕಡ 90 ರಷ್ಟು ಅದಕ್ಕೆ ಬೇಕಾದಂತಹ ವೆಚ್ಚ ಕೇಂದ್ರ ಸರ್ಕಾರದಿಂದ ಬರುತ್ತಿದೆ. ನಾವು ಅದನ್ನು ಬೇಡವೆಂದು ಹೆಳುವುದಕ್ಕಾಗುತ್ತಾ?

ಉಪಾಧ್ಯಕ್ಷರು:- ಅವರು ಉತ್ತರ ಪೂರೈಸಲಿ. ಉತ್ತರ ಪೂರೈಸಿದ ಮೇಲೆ clarification ಮಾಡಿಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ:- ಅವರ ಸಹಾಯಕ್ಕೆ ಹೇಳುತ್ತಿದ್ದೇನೆ. ನಿಮಗೆ ಆಡಳಿತ ಸುಧಾರಣೆ ಮಾಡುವುದಕ್ಕೆ ಸಂಪೂರ್ಣ ಸಹಕಾರ ಕೊಡುತ್ತೇವೆ. ನೀವು ಉತ್ತರ ಕೊಟ್ಟಿದ್ದು ನೋಡಿದರೆ, ನಿಮ್ಮ ಮನಸ್ಥಿತಿ ಪ್ರಕಾರ ಒಂದು ವರ್ಷದ ಅವಧಿ ಆ ಅಧಿಕಾರಿ ನೌಕರರನ್ನು ಸರಿಪಡಿಸುವುದರಲ್ಲಿಯೇ ನಿಮ್ಮ ಸಮಯ ಹೋಗಿದೆ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಏನು ಸುಧಾರಣೆ ಮಾಡಿದ್ದೀರಿ ಎಂದು ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ತಾವು ಇಲ್ಲದೆ ಇರುವ ಸಂದರ್ಭದಲ್ಲಿ ಮಾತನಾಡಿದ್ದನ್ನು ಬಿಟ್ಟು ಈಗ ಬಂದು ಈ ರೀತಿ ಮಾತನಾಡುತ್ತಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ಇಂತಹ ಸುಧಾರಣೆ ಮಾಡಿದ್ದೇವೆಂದು ಹೇಳಬೇಕಾಗಿತ್ತು. ಆಗ ನಾವು ಒಪ್ಪಿಕೊಳ್ಳುತ್ತೇವೆ. ನಾನೇನು ಹೇಳುವುದು. .

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಅವರು ನಾನು ಮಾತನಾಡುವ ಸಂದರ್ಭದಲ್ಲಿ ಇರಲಿಲ್ಲ. ಈಗ ಬಂದು ಮತ್ತೆ ರಿಪೀಟ್ ಮಾಡಿ ಎಂದು ಹೇಳಿದರೆ, ಇವರಿಗೋಸ್ಕರ ನಾನು ರಿಪೀಟ್ ಮಾಡುವುದಕ್ಕಾಗುತ್ತಾ ಉಪಾಧ್ಯಕ್ಷರೆ, ವಿಸ್ತರಣಾ ಚಟುವಟಿಕೆಗೆ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಟಿ. ರವಿ:- ಮಾನ್ಯ ಕೃಷ್ಣ ಬೈರೇಗೌಡರಿಗೆ ಒಳ್ಳೆಯ ರಿಪೋರ್ಟ್ ಕಾರ್ಡ್ ಇದೆ

ಉಪಾಧ್ಯಕ್ಷರು:- ಉತ್ತರ ಮುಗಿದ ಮೇಲೆ clarification ಮಾಡಿಕೊಳ್ಳಿ. ಮಾನ್ಯ ರವಿ ಅವರೇ, ಅವರು ಉತ್ತರ ಮುಗಿಸಲಿ. ಕುಳಿತುಕೊಳ್ಳಿ.

ಉಪಾಧ್ಯಕ್ಷರು:- ಕೃಷ್ಣ ಬೈರೇಗೌಡರೆ, ಇನ್ನೂ ಎಷ್ಟು ಹೊತ್ತು ಬೇಕು ನಿಮಗೆ ರಿಪ್ಲೈ ಕೊಡುವುದಕ್ಕೆ?

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇನ್ನು 15 ನಿಮಿಷದಲ್ಲಿ ಮುಗಿಸುತ್ತೇನೆ. ಸ್ವಲ್ಪ ಪ್ರಮುಖವಾದ ವಿಚಾರಗಳಿವೆ. ಅದರ ಬಗ್ಗೆ ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು:- ಆದಷ್ಟು ಬೇಗ ನಿಮ್ಮ ರಿಪ್ಲೈಯನ್ನು ಪೂರ್ಣಗೊಳಿಸಿ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಪ್ರಮುಖವಾಗಿ ನಮ್ಮ ಮುಂದಿನ ಯೋಜನೆಗಳು ಏನು ಎಂಬುದರ ಬಗ್ಗೆ ನಾನು ಮಾತನಾಡುವುದಕ್ಕೆ ಮೊದಲು ತಮ್ಮ ಗಮನಕ್ಕೆ ತರುವುದೇನೆಂದರೆ, ಕೃಷಿ ಬೆಲೆ ಆಯೋಗದ ರಚನೆಯ ಬಗ್ಗೆ ಈಗಾಗಲೇ ನಾವು ಜನವರಿ ತಿಂಗಳಿನಲ್ಲಿಯೇ ಆದೇಶವನ್ನು

ಹೊರಡಿಸಿದೆವು. ಅದಕ್ಕೆ ಸದಸ್ಯರನ್ನು ನೇಮಕ ಮಾಡುವಂಥದ್ದರಲ್ಲಿ, ಮಧ್ಯದಲ್ಲಿ ಚುನಾವಣೆ ಬಂದಿದ್ದರಿಂದ ಸದಸ್ಯರನ್ನು ನೇಮಕ ಮಾಡುವುದು ನಿಧಾನವಾಯಿತು. ಈಗಾಗಲೇ ಮುಖ್ಯಮಂತ್ರಿಗಳು ಅದಕ್ಕೆ ಆದೇಶವನ್ನು ಹೊರಡಿಸಿ ಅದಕ್ಕೆ ಬೇಕಾದಂಥ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ ಎನ್ನುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ ಆಯೋಗ ತಕ್ಷಣವೇ ಕಾರ್ಯ ಚಟುವಟಿಕೆಯನ್ನು ಮಾಡುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ:- ಬೆಲೆ ನಿಗದಿ ಮಾಡತಕ್ಕಂಥದ್ದರ ಬಗ್ಗೆ ವರದಿ ಏನಾಯಿತು ಎಂಬ ಬಗ್ಗೆ ಹೇಳಿ.

ಉಪಾಧ್ಯಕ್ಷರು:- ಅದನ್ನೆ ಈಗ ಹೇಳುತ್ತಿದ್ದಾರೆ.

ಶ್ರೀ ಕೃಷ್ಣಬೈರೇಗೌಡ:- ಕೃಷಿ ಬೆಲೆ ಆಯೋಗದ ಕೆಳಗಡೆ ಆಯಾಯ agro climatic zone ಏನಿದೆ, ಅದರ ಹಂತದಲ್ಲಿ ರೈತರ ಸಲಹಾ ಸಮಿತಿಯನ್ನು ಕೂಡ ಮಾಡಿ ರೈತರ ಜೊತೆಯಲ್ಲಿ ಕುಳಿತುಕೊಂಡು ಬೆಲೆಗಳನ್ನು ನಿಗದಿ ಮಾಡುವಂಥ ದಿಕ್ಕಿನಲ್ಲಿ ರೈತರ ಸಮಿತಿಗಳನ್ನು ಸಹ ಆ agro climatic zone ವಾರು ನಾವು ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನು ವಾಟರ್‌ಶೆಡ್ ಬಗ್ಗೆ ಹಲವಾರು ಸದಸ್ಯರು ಕೇಳಿದರು. ಈ ವಾಟರ್‌ಶೆಡ್ ಬಗ್ಗೆ ಸಾಕಷ್ಟು ಸದಸ್ಯರು ದೂರುಗಳನ್ನು ಹೇಳಿದ್ದಾರೆ. ನಾನು ಸಚಿವನಾದ ಮೇಲೆ ಖುದ್ದಾಗಿ ಸುಮಾರು 25 ಜಿಲ್ಲೆಗಳಿಗೆ ಹೋಗಿ ಅಲ್ಲಿ ಸ್ಥಳಕ್ಕೇ ಭೇಟಿ ನೀಡಿ ವಾಟರ್‌ಶೆಡ್‌ನ್ನು ತೆಗೆದುಕೊಂಡು ಒಂದೊಂದು ವಾಟರ್‌ಶೆಡ್‌ನ್ನು ಆಫೀಸ್‌ನಲ್ಲಿ ಕುಳಿತುಕೊಂಡು ಅಲ್ಲ, ಆ ಸ್ಥಳಕ್ಕೇ ಹೋಗಿ ನಾಲ್ಕೈದು ಗಂಟೆಗಳ ಕಾಲ ಒಂದು ವಾಟರ್‌ಶೆಡ್ ಬಗ್ಗೆ spot ನಲ್ಲಿ Visit ಮಾಡಿ ರಿವ್ಯು ಮಾಡಿದ್ದೇನೆ. ಅಲ್ಲಿ ಗಿಡಗಳನ್ನು ಹಾಕಿದ್ದಾರೋ ಇಲ್ಲವೋ, ಚೆಕ್‌ಡ್ಯಾಂ ಕಟ್ಟಿದ್ದಾರೋ ಇಲ್ಲವೋ, ಗಿಡ ಹಾಕಿರುವುದರಲ್ಲಿ ಎಷ್ಟು ಬದುಕಿದೆ ಮತ್ತು ಎಷ್ಟು ಸತ್ತಿದೆ, ಬದು ಹಾಕಿದ್ದಾರೋ ಇಲ್ಲವೋ, ಇವುಗಳ ಬಗ್ಗೆ ಸ್ಥಳಕ್ಕೇ ಹೋಗಿ ಪರಿಶೀಲನೆ ಮಾಡಿದ್ದೇನೆ.

ಶಿಕಾರಿಪುರದಲ್ಲಿ ಇಬ್ಬರು ಅಧಿಕಾರಿಗಳನ್ನು spot ನಲ್ಲಿಯೇ suspend ಮಾಡಿ ಬಂದಿದ್ದೇನೆ. ಯಾರು ಸಾವಿರಾರು ಗಿಡಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದರೋ ಅವರನ್ನು ರೈತರ ಮುಂದೆಯೇ ನಿಲ್ಲಿಸಿ ಗಿಡಗಳನ್ನು ಕೊಟ್ಟಿಲ್ಲವೆಂದು ಸಾಬೀತಾದ ಮೇಲೆ ಸ್ಪಾಟ್‌ನಲ್ಲಿಯೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಬಂದಿದ್ದೇನೆ. ಅದೇ ರೀತಿ ಮೊನ್ನೆ ಚಾಮರಾಜನಗರ ಜಿಲ್ಲೆಗೆ ಹೋದಾಗ ನನಗೆ ಕರೆದುಕೊಂಡು ಹೋದಂಥ ಅಧಿಕಾರಿಗಳಿಗೆ ಎಲ್ಲಿ ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ಅವರಿಗೇ ತೋರಿಸುವುದಕ್ಕೂ ಕೂಡ ಅಷ್ಟು ಜ್ಞಾನ ಇರಲಿಲ್ಲ. ಆದುದರಿಂದ ನಾನೇನು ಸುಮ್ಮನೆ ಕುಳಿತುಕೊಂಡಿಲ್ಲ. ನಾನು ಬೈರೇಗೌಡ ಆಗಿಲ್ಲದೇ ಇರಬಹುದು, ಆದರೆ ಖಂಡಿತ ಬೈರೇಗೌಡರ ಮಗ, ಅವರ ಮಗನಾಗಿ ನಾನು ಏನು ಮಾಡುವುದಕ್ಕೆ ಸಾಧ್ಯವೋ ಅದನ್ನಂತೂ ಮಾಡಿಯೇ ತೀರುತ್ತೇನೆ, ಅದರಲ್ಲಿ ಯಾರೂ ಅನುಮಾನ ಇಟ್ಟುಕೊಳ್ಳುವುದು ಬೇಕಾಗಿಲ್ಲ. ಚಾಮರಾಜನಗರದಲ್ಲಿಯೂ ಕೂಡ ಒಬ್ಬರ ಮೇಲೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಹೇಳಿದ್ದೇನೆ, ಇಬ್ಬರನ್ನು ಸಸ್ಪೆಂಡ್ ಸಹ ಮಾಡಿದ್ದೇನೆ. ಈ ರೀತಿಯಾಗಿ ಇದರಲ್ಲಿ ಸುಧಾರಣೆ ತರಬೇಕೆನ್ನುವ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಅದರಲ್ಲಿ ಹಿಂದೆ ಸರಿಯುವ ಮಾತೇ ಇಲ್ಲ. ಯಾವುದೇ ಕಾರಣಕ್ಕೆ ಸುಧಾರಣೆಯಾಗಬೇಕೆಂದರೆ ವಿಲೀನವಾದರೆ ಎಲ್ಲಾ ಸಮಸ್ಯೆಗಳ ಪರಿಹಾರ ವಾಗದಿದ್ದರೂ ಸ್ವಲ್ಪವಾದರೂ ಪರಿಹಾರವಾಗುತ್ತದೆ. ಏಕೆಂದರೆ ವಾಟರ್‌ಶೆಡ್‌ಗೆ ಹೋಗುವುದೇ ಒಂದು ಉದ್ಯೋಗವಾಗಿಬಿಟ್ಟಿತ್ತು. ಅದನ್ನು ವಿಲೀನ ಮಾಡಿ ಸ್ವಲ್ಪ ದುರುಪಯೋಗ ಆಗುತ್ತಿದ್ದದ್ದನ್ನು ಕಡಿವಾಣ ಹಾಕುವಂಥ ಕೆಲಸವನ್ನು ಕೂಡ ಮಾಡುತ್ತಿದ್ದೇವೆ. ವಾಟರ್‌ಶೆಡ್ ಪ್ರೋಗ್ರಾಂ ಒಳ್ಳೆಯ ಪ್ರೋಗ್ರಾಂ ಆಗಿದೆ. ಅದು ಸರಿಯಾಗಿ ಆಗಬೇಕು. ಸರಿಯಾಗಿ ಆಗುತ್ತಿಲ್ಲ. ಇದನ್ನು ಸರಿಯಾಗಿ ಮಾಡುವ ದಿಕ್ಕಿನಲ್ಲಿ, ನಾನು ಸಚಿವನಾದಾಗ ಒಂದು ವರ್ಷದಲ್ಲಿ ಏನು ಮಾಡಿದಿರಿ ಎಂದು ಮಾನ್ಯ ಅಧ್ಯಕ್ಷರು ಕೇಳಿದರು. ಕೇಳಬೇಕಾಗುತ್ತದೆ, ತಾವು ನನಗೆ ದಯವಿಟ್ಟು ಅವಕಾಶ ಕೊಡಬೇಕು. ನಾನು ಸಚಿವನಾಗಿ field inspection ಮಾಡುವುದಕ್ಕೆ ಹೋದರೆ ವಾಟರ್‌ಶೆಡ್‌ನಲ್ಲಿ ಏನು ಕೆಲಸವನ್ನು ಮಾಡಿದ್ದಾರೆ ಎಂಬ ಬಗ್ಗೆ, ಏನು ಮಾಡಲಾಗಿದೆ ಎಂಬ

ಒಂದು ರಿಪೋರ್ಟ್ ಕೂಡ ಒಬ್ಬ ಅಧಿಕಾರಿಯ ಹತ್ತಿರ ಇರುತ್ತಿರಲಿಲ್ಲ. ಒಂದು ಮ್ಯಾಪ್ ಹಾಕಿ ಆ ಮ್ಯಾಪ್‌ನಲ್ಲಿ ರೂಲ್ಸ್‌ನಲ್ಲಿ ಎಲ್ಲವೂ ಇದೆ. ಮ್ಯಾಪ್‌ನಲ್ಲಿ ಪ್ಲಾಟಿಂಗ್ ಮಾಡಿರಬೇಕು, ಎಲ್ಲಿ ಚೆಕ್‌ಡ್ಯಾಂ, ಎಲ್ಲಿ ಎಷ್ಟು ಗಿಡಗಳಿವೆ, ಎಲ್ಲಿ ಎಷ್ಟು ಬದುಗಳನ್ನು ಮಾಡಲಾಗಿದೆ ಎಂಬ ಬಗ್ಗೆ ಇರಬೇಕು. ಆದರೆ ಒಂದು ಮ್ಯಾಪ್ ಕೂಡ ಇರುತ್ತಿರಲಿಲ್ಲ. ಅವರನ್ನು ಕರೆದುಕೊಂಡು ಅಲ್ಲಿ ನೋಡೋಣವೆಂದರೆ ಏನನ್ನು ನೋಡುವುದು, ದಾಖಲೆಯೇ ಸರಿಯಿಲ್ಲವೆಂದರೆ ಫೀಲ್ಡ್‌ನಲ್ಲಿ ಏನು ನೋಡುತ್ತೀರಿ? ಇವತ್ತು ಒಂದು ವರ್ಷದ ಅವಧಿಯಲ್ಲಿ ಎಲ್ಲಾ ವಾಟರ್‌ಶೆಡ್‌ನಲ್ಲಿಯೂ ಕನಿಷ್ಠ ದಾಖಲೆಯಿದೆ, ಅಲ್ಲಿ ನೆಲಮಟ್ಟದಲ್ಲಿ ಕೆಲಸವಾಗಿಯೋ ಅಥವಾ ಇಲ್ಲವೋ ಎಂಬುದು ಎರಡನೆಯದು, ಆದರೆ ಏನು ಕೆಲಸವನ್ನು ಮಾಡಲಾಗಿದೆ ಎಂಬ ಬಗ್ಗೆ ದಾಖಲೆಯನ್ನು ನಾವು ತಯಾರು ಮಾಡಿದ್ದೇವೆ.

ಶ್ರೀ ಜಿ.ಟಿ. ದೇವೇಗೌಡ:- ಒಂದು ವರ್ಷದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಯೋಜನೆಯ ಕೆಲಸವನ್ನು ಚೆನ್ನಾಗಿ ಎಲ್ಲಿ ಮಾಡಿದ್ದಾರೆ ಎಂಬ ಬಗ್ಗೆ ಕೂಡ ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಕೆಲವು ಕಡೆಗಳಲ್ಲಿ ಕೆಲಸವನ್ನು ಚೆನ್ನಾಗಿ ಮಾಡಿದ್ದಾರೆ. ಬೆಳಗಾವಿಯಲ್ಲಿ ನಾನು ಹೋಗಿ ನೋಡಿದ್ದೇನೆ. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಕೆಲವರು ತಪ್ಪು ಮಾಡಿದ್ದರಿಂದ ಎಲ್ಲರಿಗೂ ಸಹ ಕೆಟ್ಟ ಹೆಸರು ಬಂದಿದೆ. ಒಳ್ಳೆಯ ಕೆಲಸಗಳನ್ನು ಮಾಡಿರುವುದನ್ನು ಕೂಡ ನಾನು ಕಣ್ಣಾರೆ ಕಂಡಿದ್ದೇನೆ. ಅದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ತಪ್ಪು ಮಾಡಿರುವ ಹೆಚ್ಚಿನ ನಿದರ್ಶನಗಳು ಕೂಡ ಇದೆ. ಬಳ್ಳಾರಿಗೆ ಹೋಗಿ ಕೂಡ್ಲಗಿ ತಾಲ್ಲೂಕಿನ ರಿಮೋಟ್ ಹಳ್ಳಿಗೆ ಹೋಗಿ ನಾನು ಒಂದು ಕಡೆ ನೋಡಿದೆ, ಅಲ್ಲಿ 400 ಗಿಡಗಳನ್ನು ನೆಟ್ಟಿದ್ದೇವೆಂದು ಹೇಳುತ್ತಾರೆ, ಅಲ್ಲಿ ನೋಡಿದರೆ ಕೇವಲ 60 ಗುಣಿಗಳಿವೆ. ಶಿಕಾರಿಪುರದಲ್ಲಿ ಒಂದು ಗುಣಿ ತೋಡುವುದಕ್ಕೆ 50 ರೂ.ಗಳ ಬಿಲ್ ಮಾಡಿದ್ದಾರೆ. ಗುಣಿ ತೋಡುವುದಕ್ಕೆ ಒಬ್ಬ ರೈತನಿಗೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಇವರೂ ಕೂಡ ತೋಡಿಲ್ಲ. ಈ ರೀತಿಯ ಅನೇಕ ನ್ಯೂನತೆಗಳಿವೆ. ಬೆಳಗಾವಿಗೆ

ಹೋದಾಗ ಅಲ್ಲಿ ಹೇಗೆ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು ಕೂಡ ನಾನು ಹೋಗಿ ನೋಡಿದ್ದೇನೆ. ಹೀಗಾಗಿ ಎರಡೂ ತರಹ ಇದೆ. ಇದನ್ನು ಸುಧಾರಣೆ ಮಾಡುವುದಕ್ಕೆ ಒಂದು ವರ್ಷದ ಅವಧಿಯಲ್ಲಿ GPS ಇಟ್ಟುಕೊಂಡು ಎಲ್ಲಿ ಏನು ಮಾಡಿದ್ದಾರೆ ಎಂಬ ಬಗ್ಗೆ GPS record ಮಾಡಬೇಕು ಎಂಬುದನ್ನು enforce ಮಾಡಿದ್ದೇವೆ. ಏಕೆಂದರೆ ನಾಳೆ ದಿನ inspection ಗೆ ಹೋದರೆ ಅಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಚೆಕ್ ಮಾಡಬಹುದು. ರೆಕಾರ್ಡ್ ಎನ್ನುವುದೇ ಇಲ್ಲವೆಂದರೆ ಏನು ಚೆಕ್ ಮಾಡಬಹುದು ಹೇಳಿ. ಹೀಗಾಗಿ ಇದರಲ್ಲಿ ಸುಧಾರಣೆ ತರತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದನ್ನು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ಇನ್ನು drip irrigation ಬಗ್ಗೆ ಕೆಲವರು ಮಾತನಾಡಿದ್ದಾರೆ. ನಮ್ಮ ಇಲಾಖೆಯಲ್ಲಿಯೂ ಇದನ್ನು ಮಾಡುತ್ತಿದ್ದೇವೆ ಮತ್ತು ಇದಕ್ಕಾಗಿ 100 ಕೋಟಿ ರೂ.ಗಳ ಅನುದಾನವನ್ನು ಇಟ್ಟಿದ್ದೇವೆ. ಇದರ ಜೊತೆಗೆ ನೀರಾವರಿ ಇಲಾಖೆಯವರ ಜೊತೆ ಸೇರಿ ಅದನ್ನು ಇನ್ನೂ ವ್ಯಾಪಕವಾಗಿ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇನ್ನು ಸಾವಯುವ ಕೃಷಿ ಬಗ್ಗೆ ಕೂಡ ಅನೇಕ ಸದಸ್ಯರು ಮಾತನಾಡಿದರು. ಕಳೆದ ವರ್ಷ ಇದಕ್ಕೆ 36 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಈ ವರ್ಷ ಆ ಚಟುವಟಿಕೆಗಳನ್ನು ಮುಂದುವರೆಸುವುದಕ್ಕೆ 9 ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ ಮತ್ತು RKVY ನಲ್ಲಿಯೂ ಸಹ ಅದಕ್ಕೆ ಬೇಕಾದಷ್ಟು ಹಣ ನಮಗೆ ಬರುತ್ತಿದೆ. ಸಾವಯವ ಕೃಷಿಯನ್ನು ಪ್ರತಿ ಹೋಬಳಿಗೆ ಒಂದು ಮಾದರಿ ಸಾವಯವ ಕ್ಷೇತ್ರವನ್ನು ಮಾಡಬೇಕು ಎನ್ನುವ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಅಲ್ಲಿ ವಿಶ್ವವಿದ್ಯಾಲಯ, ವಿಜ್ಞಾನಿಗಳೆಲ್ಲರನ್ನೂ ಸೇರಿಸಿ ಮಾದರಿಯಾಗಿ 100 ಹೆಕ್ಟೇರ್ ಪ್ರದೇಶದಲ್ಲಿ ಮಾದರಿ ಒಂದು ಸಾವಯುವ ಕ್ಷೇತ್ರವನ್ನು ಮಾಡಿ ಅಲ್ಲಿಗೆ ಬೇರೆ ರೈತರುಗಳನ್ನು ಕೂಡ ಕರೆದುಕೊಂಡು ಬಂದು ಅದನ್ನು ನೋಡುವಂಥ ರೀತಿಯಲ್ಲಿ ಮಾಡುತ್ತಿದ್ದೇವೆ. ಅದಕ್ಕೆ ಬೇಕಾದಂಥ ಸಿದ್ಧತೆಗಳಲ್ಲಿ ಕಳೆದ ವರ್ಷವೇ ಅದಕ್ಕೆ NGO ಗಳನ್ನು ನೇಮಕ ಮಾಡುವುದು, ಹೀಗೆ ಎಲ್ಲಾ ಸಿದ್ಧತೆಗಳು ಆಗಿದೆ. ಈ ವರ್ಷ ಫೀಲ್ಡ್‌ನಲ್ಲಿ ಕೆಲಸವಾಗುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸಚಿವರೆ, ನೀವು ನೈಸರ್ಗಿಕ ಕೃಷಿಯನ್ನೂ ಕೂಡ ಜೊತೆಯಲ್ಲಿಯೇ ತೆಗೆದುಕೊಂಡು ಹೋಗಬೇಕು. ಸಾವಯುವ ಕೃಷಿ ಸರಿಯೋ ಅಥವಾ ನೈಸರ್ಗಿಕ ಕೃಷಿ ಸರಿಯೋ ಎಂಬ ಬಗ್ಗೆ clarification ಕೊಡಬೇಕು. ಇವೆರಡರಲ್ಲಿ ಯಾವುದು best ಎಂಬ ಬಗ್ಗೆ ಕೂಡ ಹೇಳಬೇಕು.

ಶ್ರೀ ಕೃಷ್ಣ ಬೈರೇಗೌಡ:- ಅದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಧಾರವಾಡ ವಿಶ್ವವಿದ್ಯಾಲಯದವರಿಗೆ ಹೇಳಿದ್ದೇನೆ. ಧಾರವಾಡ ವಿಶ್ವವಿದ್ಯಾಲಯದಲ್ಲಿಯೇ ಮಾನ್ಯ ಡಿ.ಆರ್. ಪಾಟೀಲ್‌ರವರು ಮತ್ತು ನಾವೆಲ್ಲರೂ ಕುಳಿತುಕೊಂಡು ರೈತರಾದ ನೈಸರ್ಗಿಕ ಕೃಷಿ ತಜ್ಞರನ್ನು ಕೂಡ ಕರೆದುಕೊಂಡು ಬಂದು ಇದರ ಬಗ್ಗೆ ಅಧ್ಯಯನವನ್ನು ಮಾಡಬೇಕೆಂದು ಹೇಳಿದ್ದೇನೆ. ಬಹುಶಃ ಈ ಅಧ್ಯಯನ ಈ ವರ್ಷ ಆರಂಭವಾಗುತ್ತದೆ. ಸುಮಾರು 50 ರಿಂದ 55 ಕೋಟಿ ರೂ.ಗಳಷ್ಟು ಹಣವನ್ನು ನಾವು ಸಾವಯುವ ಕೃಷಿಗೆ ಕೊಡಲು ನಮ್ಮ ಹತ್ತಿರವಿದೆ ಎನ್ನುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈಗ ನಾವು ಸೋಲಾರ್‌ಗೆ ಹೆಚ್ಚಿನ ಉತ್ತೇಜನವನ್ನು ಕೊಡುತ್ತಿದ್ದೇವೆ. ಮೊನ್ನೆ ಮಾನ್ಯ ಇಂಧನ ಸಚಿವರು ಹೇಳಿದರು. ನಮ್ಮಲ್ಲಿ ಒಂದೊಂದೇ ಇಲಾಖೆಯಲ್ಲಿ ಮಾಡುವುದಕ್ಕೆ ಹೋದರೆ, ನಮ್ಮ ಹತ್ತಿರ ಹೇಳಬೇಕೆಂದರೆ technical expertise ಹಾಗೂ ತಾಂತ್ರಿಕ ಮಾಹಿತಿಗಳು ನಮ್ಮ ಹತ್ತಿರವಿಲ್ಲ. Horticulture, Agriculture and Minor irrigation ಇಲಾಖೆಯವರೆಲ್ಲರೂ ಸೇರಿ ನಾವು ಕ್ರೆಡೆಲ್‌ನವರ ಜೊತೆ ಸೇರಿಕೊಂಡು ಅವರ ಮುಖಾಂತರವಾಗಿ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಿತಕ್ಕಂಥದ್ದಕ್ಕೆ ನಮ್ಮ ಆದ್ಯತಾ ಕ್ಷೇತ್ರಗಳನ್ನಾಗಿ ತೆಗೆದುಕೊಂಡಿದ್ದೇವೆ. ಇನ್ನು ನನಗೆ ಬಹಳ ಪ್ರಮುಖವಾಗಿ ಮತ್ತು ಬಹಳ ಹತ್ತಿರವಾಗಿ ಇರುವಂಥ ವಿಚಾರವೆಂದರೆ, ರಾಗಿ ಮತ್ತು ಜೋಳ, ಇವೆರಡೂ ನಮ್ಮ ರಾಜ್ಯದ ಪ್ರಮುಖವಾದಂಥ ಬೆಳೆಗಳು. ಇವುಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕು ಎನ್ನತಕ್ಕಂಥದ್ದು ನಮ್ಮ ಸರ್ಕಾರದ ಸಂಕಲ್ಪ. ಅದೇ ಕಾರಣದಿಂದಲೇ ಕರ್ನಾಟಕದ ಇತಿಹಾಸದಲ್ಲಿ ಬಹುಶಃ ನನಗೆ ಅನುಭವ ಕಡಿಮೆ, ತಪ್ಪು

ಹೇಳಿದರೆ ಕ್ಷಮಿಸಬೇಕು, ಕರ್ನಾಟಕದ ಇತಿಹಾಸದಲ್ಲಿ ಮೊದಲನೇ ಬಾರಿಗೆ ರಾಗಿ, ಬಿಳಿ ಜೋಳವನ್ನು ರೈತರಿಂದ ಖರೀದಿ ಮಾಡತಕ್ಕಂತ ಕಾರ್ಯಕ್ರಮವನ್ನು ಈ ವರ್ಷ ನಾವು ಮಾಡಿದ್ದೇವೆ. ಏಕೆಂದರೆ ರಾಗಿ, ಬಿಳಿ ಜೋಳವನ್ನು ಬೆಳೆಯಲು ರೈತರಿಗೆ ಉತ್ತೇಜನ ಸಿಗಲಿ ಮತ್ತು ಇವುಗಳನ್ನು ಹೆಚ್ಚಾಗಿ ಬೆಳೆಯಲಿ ಮತ್ತು ಅವುಗಳ ನಮ್ಮ ಆಹಾರ ಧಾನ್ಯಗಳಾಗಬೇಕೆಂದು ಹೇಳಿ ಇದರ ಖರೀದಿಯನ್ನು ಈ ವರ್ಷ ಮಾಡುತ್ತಿದ್ದೇವೆ. ಏಕೆಂದರೆ ಈ ವರ್ಷ ಮೆಕ್ಕೆಜೋಳ ಹಾಗೂ ಇನ್ನಿತರ ಒಳ್ಳೊಳ್ಳೆಯ ಸೀಡ್‌ಗಳು ಬಂದು ರೈತರು ಆ ಕಡೆಗೆ ಆಕರ್ಷಣೆಯಾಗುತ್ತಿರುವುದರಿಂದ ಈ ವರ್ಷ ರಾಗಿ, ಬಿಳಿ ಜೋಳವನ್ನು ಬೆಳೆಯುವುದಕ್ಕಾಗಿಯೇ ಉತ್ತೇಜನ ನೀಡಲು ಪ್ರತ್ಯೇಕವಾದ ಕಾರ್ಯಕ್ರಮವನ್ನು ಮಾಡಿದ್ದೇವೆ. ಅದೇನೆಂದರೆ, 3 ಸಾವಿರ ರೂ.ಗಳ ಕಿಟ್ ಒಂದನ್ನು ಮಾಡಿ ಅದರಲ್ಲಿ ಬಿತ್ತನೆ ಬೀಜ ಮತ್ತು ಅದಕ್ಕೆ ಬೇಕಾದಂಥ ಎಲ್ಲಾ ಪೋಷಕಾಂಶಗಳ ಎಲ್ಲ ಸಾಮಗ್ರಿಗಳನ್ನು ರಾಗಿ ಮತ್ತು ಬಿಳಿ ಜೋಳ ಬೆಳೆಯಲು ಉಚಿತವಾಗಿ ರೈತರಿಗೆ ಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿದ್ದೇವೆ. ಇದಕ್ಕೆ 5 ಕೋಟಿ ರೂ.ಗಳನ್ನು ಇಟ್ಟು ಆರಂಭಿಕವಾಗಿ ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ. ಇದು success ಆದರೆ ಇದಕ್ಕೆ ಇನ್ನೂ ಹೆಚ್ಚಿನ ಉತ್ತೇಜನವನ್ನು ಕೊಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್:- ಇದಕ್ಕೆ ಬೆಲೆಯನ್ನು ಕೂಡ ಮೊದಲೇ fix ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ:- ನಾನು ಆಗಲೇ ಹೇಳಿದ ಸಾರ್, ಇನ್ನೊಂದು ಬಾರಿ ತಮ್ಮ ಸಮಾಧಾನಕ್ಕೆ ಹೇಳುತ್ತಿದ್ದೇನೆ. ಇದರ ಬಗ್ಗೆ next cabinet meeting ನಲ್ಲಿ ತೀರ್ಮಾನವಾಗುತ್ತದೆ. ಈ ವರ್ಷ ಬಿತ್ತನೆ ಅವಧಿಯಲ್ಲಿಯೇ ರಾಗಿ ಮತ್ತು ಜೋಳಕ್ಕೆ ನಮ್ಮ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತೇವೆ. ಕಳೆದ ವರ್ಷ ಎಷ್ಟು ನಿಗದಿಯನ್ನು ಮಾಡಲಾಗಿತ್ತೋ ಅದಕ್ಕಿಂತಲೂ ಸಾಕಷ್ಟು ಸುಧಾರಿತವಾಗಿ ಹೆಚ್ಚು ಬೆಲೆ ಮಾಡಿ ಘೋಷಣೆ ಮಾಡುತ್ತೇವೆ ಎನ್ನುವುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರಿಂದ ರೈತರು ಇನ್ನೂ ಹೆಚ್ಚು ಉತ್ತೇಜಿತರಾಗಿ ರಾಗಿ, ಜೋಳವನ್ನು ಬೆಳೆಯಲಿ ಎಂಬುದು ನಮ್ಮ

ಉದ್ದೇಶವಾಗಿದೆ. ಇದು ಮಧ್ಯಮಾವಧಿ ಯೋಜನೆ, ದೂರದೃಷ್ಟಿಯದ್ದೂ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ರಾಗಿ ಮತ್ತು ಜೋಳದಲ್ಲಿ ತಳಿ ಅಭಿವೃದ್ಧಿಯನ್ನು ಮಾಡಬೇಕೆಂದು ಹೇಳಿ non transgenic breeding ಮಾಡಬೇಕೆಂದು ಹೇಳಿ ರಾಗಿ, ಜೋಳ, ಇವೆರಡಕ್ಕೂ DNA sequencing ಮಾಡಿಸಬೇಕು. ಅದು Non GM. Bio technology ಮುಖಾಂತರವಾಗಿ ಅದನ್ನು breeding ಮಾಡುವುದಕ್ಕೆ DNA sequencing ಮಾಡಬೇಕು. ಒಂದು ಪದಾರ್ಥಕ್ಕೆ DNA sequencing ಮಾಡುವುದಕ್ಕೆ ಮೂರು ವರ್ಷ ಬೇಕಾಗುತ್ತದೆ. ಆದರೆ ಇವತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ತಂತ್ರಜ್ಞಾನ ಇದೆ. 3 ರಿಂದ 6 ತಿಂಗಳೊಳಗೆ DNA sequencing ಮಾಡಬಹುದು ಎಂದು ಹೇಳಿದ್ದಾರೆ. ಅವರ ಜೊತೆಯಲ್ಲಿ ಸಂಪರ್ಕದಲ್ಲಿದ್ದೇವೆ. DNA sequencing ಆದರೆ ನಮ್ಮ scientist ಅದನ್ನು breeding ಮಾಡಿ ಇನ್ನು ಒಳ್ಳೆಯ ತಳಿಗಳನ್ನು ತರುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು revolving fund ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಹೇಳಿದರು. Revolving fund ಇರಲಿ ಬಿಡಲಿ, ನಾವು ಈಗಾಗಲೇ ಕಳೆದ ವರ್ಷ revolving fundಗಿಂತ ದುಪ್ಪಟ್ಟು ಖರೀದಿ ಮಾಡಿದ್ದೇವೆ. Central Food Corporation of Indiaದವರು ನಮಗೆ 300–400 ಕೋಟಿ ರೂಪಾಯಿ ಸಾಲ ಕೊಡಬೇಕು. ಅಲ್ಲಿ ಕಡಿಮೆಯಿದ್ದರೂ ಸಹ ಯಾವುದೇ ಸಂದರ್ಭದಲ್ಲಿ ನೇರವಾಗಿ ರೈತರಿಂದ ಖರೀದಿ ಮಾಡುವುದನ್ನು ನಾವು ನಿಲ್ಲಿಸಿಲ್ಲ. ಈ ವರ್ಷ ಅವಶ್ಯಕತೆ ಬಂದಾಗ revolving fund ಎಷ್ಟೇ ಇದ್ದರೂ ಸಹ ಅದಕ್ಕೂ ಮೀರಿ ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎನ್ನುವುದನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು small, medium and large farmers ಎಂದು classification ಮಾಡುವುದು ಸರಿಯಲ್ಲವೆಂದು ಒಂದಿಬ್ಬರು ಸದಸ್ಯರು ಹೇಳಿದ್ದಾರೆ. ರೈತನಿಗೆ ನೀನು ಸಣ್ಣ, ಅತೀ ಸಣ್ಣ, ನೀನು ದೊಡ್ಡ ರೈತ ಎಂದು classification ಮಾಡುವುದು ಸಮಂಜಸವಲ್ಲವೆಂದು ಅಭಿಪ್ರಾಯ ಬಂದಿರುವುದರಿಂದ ಖಂಡಿತವಾಗಿ ಮುಂದೆ ಅದು ಪಾಲಿಸಿಯಾಗುವಂತಹ ಸಂದರ್ಭದಲ್ಲಿ ಅದರ

ಬಗ್ಗೆ ಸಂಪುಟದಲ್ಲಿ ಚರ್ಚೆ ಮಾಡಿ, ಎಲ್ಲೆಲ್ಲಿ ಸಡಿಲ ಕೊಡುವುದಕ್ಕಾಗುತ್ತದೆ ಎಂದು ನೋಡಿ ಮುಂದಿನ ದಿನಗಳಲ್ಲಿ ಕಾರ್ಯಕ್ರಮ ರೂಪಿಸುವಾಗ ಬದಲಾವಣೆ ತರುತ್ತೇವೆನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ನಿಮ್ಮಲ್ಲಿ 8–9 Boards and corporations ಏಕೆ ಇವೆಯೆಂದು ಹೇಳಿದರು. ಅವುಗಳನ್ನು ಸಹ ನಾವು ಸರಳೀಕರಣ ಮಾಡಿ ಮರ್ಜ್ ಮಾಡುವಂತಹ ಪ್ರಯತ್ನ ಮಾಡುತ್ತಿದ್ದೇವೆ.

ಸವಳು, ಸವಳು ಮಣ್ಣಿನ ಬಗ್ಗೆ ಸಹ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾವು ಮತ್ತು ಕಾಡಾ ನೀರಾವರಿ ಇಲಾಖೆಯವರು ಸೇರಿ ಅದಕ್ಕೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವಂತಹ ಪ್ರಯತ್ನ ಮಾಡುತ್ತೇವೆ. ಸವಳು ಎಂದರೆ ಕ್ಯಾನ್ಸರ್ ಕಾಯಿಲೆ ಇದ್ದಹಾಗೆ tobacco ತಿಂದರೆ ಹೇಗೆ ಕ್ಯಾನ್ಸರ್ ಬರುತ್ತದೆ ಎಂದು ಪ್ರಚಾರ ಆಂದೋಲನ ಮಾಡಿದ್ದಾರೆ, ಅದೇ ರೀತಿಯಾಗಿ ನಮ್ಮ ಇಲಾಖೆಯಿಂದ ಕೆಲವು private agency ಅನ್ನು hire ಮಾಡಿ ಸವಳು ತಡೆಗಟ್ಟವುದಕ್ಕೆ ಪ್ರಚಾರ ಆಂದೋಲನವನ್ನು ಕೈಗೆತ್ತಿಕೊಳ್ಳುತ್ತೇವೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮಲ್ಲಿರುವಂತಹ insurance ಯೋಜನೆಗಳು ಸರಿಯಿಲ್ಲವೆಂದು ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾವು ವರ್ಷಾವರ್ಷ ಸುಧಾರಣೆ ಮಾಡುತ್ತಿದ್ದೇವೆ. ಅದು ಸರಿಯಿಲ್ಲವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. Perfect ಆಗಿರುವುದನ್ನು design ಮಾಡುವುದು ಕೂಡ practically ಕಷ್ಟ ಇದೆ. ನಮ್ಮಲ್ಲಿ ಜುಲೈ 15ರೊಳಗೆ ಎಲ್ಲರೂ sowing ಮಾಡಿದರೆ ಅದಕ್ಕೆ ತಕ್ಕ ಹಾಗೆ ನಾವು perfect ಆಗಿ insurance policy design ಮಾಡಬಹುದು. ಆದರೆ ನಮ್ಮಲ್ಲಿ ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಬಿತ್ತನೆ ಮಾಡುತ್ತಾರೆ. ಮಳೆ ಯಾವಾಗ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ವರ್ಷದಿಂದ ವರ್ಷಕ್ಕೆ ನಾವು ಇದನ್ನು ಸುಧಾರಣೆ ಮಾಡುತ್ತಿದ್ದೇವೆ. ಆದರೂ ಸಹ ರೈತರಿಗೆ ಇದರಲ್ಲಿ ಮೋಸವಾಗುತ್ತಿದೆ ಎನ್ನುವ ವಿಚಾರವನ್ನು ಹೇಳಿದರು. ನಾನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುವ ಸಂಗತಿ ಏನೆಂದರೆ

ರಾಷ್ಟ್ರೀಯ ಕೃಷಿ ವಿಮಾ ಯೋಜನೆ 2011–12ನೇ ಸಾಲಿನಿಂದ 2013–14ನೇ ಸಾಲಿನ ಅಂತ್ಯದವರೆಗೆ ಮಾಹಿತಿಯನ್ನು ನಾನು ಕೊಡುವುದಾದರೆ, 2010–11ರಲ್ಲಿ ರೈತರು ತಮ್ಮ share amount 3,512 ಲಕ್ಷ ರೂಪಾಯಿಯನ್ನು ಕಟ್ಟಿದ್ದರು. ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ 64 ಲಕ್ಷ ರೂಪಾಯಿ ಕಟ್ಟಿದ್ದವು. ಆ ವರ್ಷ ಒಟ್ಟು 3,600 ಲಕ್ಷ ರೂಪಾಯಿ premium pay ಆಗಿದ್ದು. ಆದರೆ ರೈತರಿಗೆ 4,600 ಲಕ್ಷ ರೂಪಾಯಿ ಮರುಪಾವತಿ ಆಗಿರುವುದು. ಹಾಗಾಗಿ ರೈತರಿಗೆ net loss ಆಗಿಲ್ಲ. ಆದರೆ ನಾನು ಸಮರ್ಪಕವಾಗಿದೆ ಎಂದು ಹೇಳುತ್ತಿಲ್ಲ. ಆದರೂ ಸುಧಾರಣೆಯಾಗಬೇಕೆನ್ನುವುದನ್ನು ನಾನು ಖಂಡಿತ ಒಪ್ಪುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಉಪಾಧ್ಯಕ್ಷರೆ, ರೈತರಿಗೆ ಸ್ವಲ್ಪಮಟ್ಟಿಗೆ ಪರಿಹಾರವನ್ನು ಕೊಡುವಂಥಾದ್ದು ಒಂದು ಉದ್ದೇಶ. ನಾವು 3 ಸಾವಿರ ಲಕ್ಷ ರೂಪಾಯಿ ಇನ್ಸೂರೆನ್ಸ್ ಕಟ್ಟಿ, 4 ಸಾವಿರ ಲಕ್ಷ ರೂಪಾಯಿ ತೆಗೆದುಕೊಂಡಿದ್ದೇವೆಂದರೆ, insurance conceptಗೆ ತದ್ವಿರುದ್ಧವಾಗಿದೆ. Insurance companyಗೆ ಬಹಳ ದೊಡ್ಡ ಪ್ರಮಾಣದ ಲಾಭವನ್ನು ಮಾಡಿಕೊಟ್ಟಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ:– ಇದು ಸರಿಯಿಲ್ಲವೆಂದು ನಾನು ಒಪ್ಪಿಕೊಂಡಿದ್ದೇನೆ.

Sri K.R. Ramesh Kumar:- The concept of insurance is to ensure. That is the very basic thing.

Sri Basavaraj Bommai:- They have ensured about their profits.

Sri K.R. Ramesh Kumar:- Why do you try to insure ಎಂದರೆ to ensure. If insurance is not subsequently followed the concept of insurance becomes void, absolutely useless.

Sri Basavaraj Bommai:- That is what I am saying Sri.

ಶ್ರೀ ಕೃಷ್ಣ ಭೈರೇಗೌಡ:- ದಯವಿಟ್ಟು ತಾವು ಕೇಳಿಸಿಕೊಳ್ಳಲಿಲ್ಲ. ಅದು ಸರಿಯಿಲ್ಲವೆಂದು ಮೊದಲಿಗೆ ಹೇಳಿ ವರ್ಷದಿಂದ ವರ್ಷಕ್ಕೆ ಸುಧಾರಣೆ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ, ನಾವು ಕೇಳಿಸಿಕೊಳ್ಳಲಿಲ್ಲವೆಂದು ಹೇಳುತ್ತಿದ್ದೀರಿ, ನೀವು ಹೇಳಿದ್ದನ್ನು ಕೇಳಿಸಿಕೊಂಡೇ ಮಾತನಾಡುತ್ತಿದ್ದೇವೆ. ರಾಜ್ಯ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕು. ನಾವು ಇಲ್ಲಿ ಮಾತನಾಡಿದ್ದಕ್ಕೆ ನಿಮಗೆ ಅಧಿಕಾರಿಗಳು ಏನು ಉತ್ತರ ಕೊಟ್ಟರು? ಎಷ್ಟು ಬರಬೇಕು ಬಂದಿಲ್ಲ ನಿಜ, ಆದರೆ ನೆಟ್ ಲಾಸ್ ಆಗಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. Loss ಮತ್ತು profit ಪ್ರಶ್ನೆ ಇಲ್ಲಿ ಅಲ್ಲ. ನೀವು ಬೇಲೆ ವಿಮೆ ಜೊತೆಗೆ ಕೃಷಿ ವಿಮೆ ಮಾಡಿದರೆ ಯಾವುದೇ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಕಟ್ಟುವಂತಹ anomalies ಏನಿದೆ, ಅದರ ಜೊತೆಗೆ ಈ concept ಏನಿದೆ.... ಒಂದು ಲೆವೆಲ್‌ಗೆ ಹೋದಮೇಲೆ ನಮ್ಮ ವಿಮಾ ಕಂಪನಿಯವರು premium ಎಷ್ಟಿದೆ, ಅಷ್ಟಕ್ಕೇ match ಮಾಡುತ್ತಿರುತ್ತಾರೆ. ಅದು ತಪ್ಪಿದೆ, ಅದರ ಬಗ್ಗೆ ತಾವು ಚಿಂತನೆಯನ್ನು ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಈ ವಿಮೆ ಯೋಜನೆ ಬಗ್ಗೆ ನಮಗೆ ಸಮಾಧಾನವಿಲ್ಲ. ಹಾಗಾಗಿ ಅದನ್ನು ಸುಧಾರಣೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಸಹ ಒಂದು ಸೂಚನೆ ಕೊಟ್ಟಿದ್ದಾರೆ. ಚುನಾವಣೆ ಆದತಕ್ಷಣ ಸಭೆ ಮಾಡಿ ......

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಉಪಾಧ್ಯಕ್ಷರೆ, ಸಣ್ಣ ರೈತರು ಅತೀ ಸಣ್ಣ ರೈತರು ಹಾಗೂ ಎಸ್‌ಸಿ/ಎಸ್‌ಟಿ ವರ್ಗದವರಿಗೆ ಸರ್ಕಾರವೇ ಪ್ರೀಮಿಯಂ ತುಂಬಿ, ಅದು ಎಷ್ಟಾಗುತ್ತದೆ? ಊಟ ಮಾಡುವವರಿಗೆ ಅಕ್ಕಿಯನ್ನು ಒಂದು ರೂಪಾಯಿ ಕೆಜಿಯಂತೆ ಕೊಡುತ್ತೀರಿ. ಬೆಳೆ ಬೆಳೆಯುವಂತಹ ರೈತರಿಗೆ ಸರ್ಕಾರವೇ ಒಂದು ವಿಮೆ ಕಟ್ಟಿ.

ಶ್ರೀ ಕೃಷ್ಣ ಭೈರೇಗೌಡ:– ರೈತರು ಕಟ್ಟತಕ್ಕಂಥ ಪ್ರಮಾಣ ಬಹಳ ಕಡಿಮೆ. ನಾವು ಸಂಪೂರ್ಣವಾಗಿ ಫ್ರೀ ಮಾಡಿದರೆ ಅದಕ್ಕೆ ಉತ್ತರಾದಾಯಿತ್ವ, accountability and responsibility ಇರುವುದಿಲ್ಲ. ರೈತರ share amount ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯ ಅಷ್ಟು ಕಡಿಮೆ ಮಾಡುತ್ತೇವೆ.

ಉಪಾಧ್ಯಕ್ಷರು:– ಈಗ ತಾವು conclude ಮಾಡಿ.

ಶ್ರೀ ಕೃಷ್ಣ ಭೈರೇಗೌಡ:– ಇನ್ನು ಹತ್ತು ನಿಮಿಷ ಸಮಯದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು:– ಮೊದಲು ಮಾನ್ಯ ಸಚಿವರು ಉತ್ತರ ಕೊಡುವುದನ್ನು ಮುಗಿಸಲಿ, ನಂತರ clarification ಕೇಳಿ.

ಶ್ರೀ ಬಿ.ಆರ್. ಯಾವಗಲ್:– ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಎಷ್ಟು ಪ್ರೀಮಿಯಂ ತುಂಬಿದರೂ ಅಷ್ಟು ಲುಕ್ಸಾನು ಇಲ್ಲವೆಂದಲ್ಲ. ಅದು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ಇದರ ಉದ್ದೇಶವಲ್ಲ. ಆದರೂ ಇವತ್ತು ದೊಡ್ಡ ಮೋಸ ಅದರಲ್ಲಿ ಇರುತ್ತದೆ. ಬೆಳೆ ಕೂಡ ಬೆಳೆಯುತ್ತಾರೆ, ಇನ್ನೊಂದು ಕಡೆ ಇನ್ಸೂರೆನ್ಸ್ ಕೂಡ ತೆಗೆದುಕೊಳ್ಳುತ್ತಾರೆ. ಇದು ನಿರಂತರವಾಗಿ ನಡೆದಿದೆ. ಎಲ್ಲರೂ ಪಾಪ ಆಸೆಪಟ್ಟು ಕಟ್ಟುತ್ತಾರೆ. ನೀವೆಲ್ಲ ಕಟ್ಟಿ ಎಂದು ನಾವು propagate ಮಾಡುತ್ತೇವೆ. ಕಟ್ಟಿದಾಗ ನಿಜವಾಗಿ ಅಲ್ಲಿ ಬೆಳೆ ಬರದಿದ್ದರೆ ಬರಗಾಲ ಬಂದರೆ ಬರುವುದಿಲ್ಲ. ಅದನ್ನು ಎಷ್ಟು ಬೇಗ systematize ಮಾಡುತ್ತಾರೆ, ಸರ್ಕಾರದಿಂದ ಕಟ್ಟುವ ದುಡ್ಡು ಉಳಿಯುತ್ತದೆ, ರೈತರಿಗೆ ಅನುಕೂಲವಾಗುತ್ತದೆ. ಅದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಕೃಷ್ಣ ಭೈರೇಗೌಡ:– ಪ್ರಮುಖವಾಗಿ ನಮ್ಮ ಸರ್ಕಾರ ಮತ್ತು ನಮ್ಮ ಇಲಾಖೆಯ ಗುರಿ ಏನು ಎಂದು ತಾವು ಕೇಳಬಹುದು. ನಮ್ಮ ಗುರಿ ರೈತರ ಕಲ್ಯಾಣ. ಅವರ ಕಲ್ಯಾಣ ಯಾವ ರೀತಿ ಮಾಡಬೇಕು? ರೈತರು ವಿಮುಖರಾಗುತ್ತಿರುವುದು, ಈ ಸಮಸ್ಯೆಗಳಿಗೆ ಪರಿಹಾರ ಏನು? ರೈತರಿಗೆ ಕನಿಷ್ಠ ಆದಾಯ ಹೆಚ್ಚಿಗೆ ಬರಬೇಕು. ಅವರ ಜೀವನ ಗುಣಮಟ್ಟ ಸುಧಾರಣೆಯಾಗಬೇಕು. ಅದರ ಜೊತೆಗೆ ಪ್ರಮುಖವಾಗಿ ಆದಾಯ

ಬರುವಂಥಾದ್ದು ಹೆಚ್ಚಾಗಬೇಕು. ಒಂದು ಕಡೆ ಕೃಷಿ ಬೆಲೆ ಆಯೋಗದ ಮೂಲಕ ಆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಆದಾಯ ಹೆಚ್ಚಾಗಬೇಕೆಂದರೆ ಉತ್ಪಾದಕತೆ ಹೆಚ್ಚಾಗಬೇಕು. ರೈತರು ಒಂದು ಹೆಕ್ಟೇರ್‌ಗೆ ಬೆಳೆಯುವಂತಹ ಉತ್ಪಾದಕತೆ ಹೆಚ್ಚಾದರೆ ತಾನೇ ತಾನಾಗಿ ರೈತನಿಗೆ ಬರುವಂತಹ ಆದಾಯ ಹೆಚ್ಚಾಗುತ್ತದೆ. ಸರಳವಾಗಿ ಉದಾಹರಣೆ ಕೊಡುವುದಾದರೆ ನಮ್ಮ ಮಂಡ್ಯ, ಚಾಮರಾಜನಗರ ಹಾಗೂ ಮೈಸೂರಿನಲ್ಲಿ ಕಬ್ಬು ಬೆಳೆಯುತ್ತಾರೆ. ಅಲ್ಲಿ ಸರಾಸರಿ ಉತ್ಪಾದಕತೆ 40 ರಿಂದ 45 ಟನ್ ಇದೆ. ಆದರೆ ನಾವು ಬಾಗಲಕೋಟೆ, ಬೆಳಗಾಂ ಭಾಗಕ್ಕೆ ಹೋದರೆ ಅಲ್ಲಿ ಉತ್ಪಾದಕತೆ 80 ಟನ್‌ಗಿಂತಲೂ ಜಾಸ್ತಿ ಇದೆ. ಏಕೆ ಎಂದು ಕೇಳಿದರೆ ನಮ್ಮ ವಿಜ್ಞಾನಿಗಳ ಹತ್ತಿರ ಸರಿಯಾದ ಉತ್ತರ ಇಲ್ಲ. ಇವತ್ತು 40–45 ಟನ್ ಬೆಳೆಯುವ ಕಡೆ 80 ಟನ್ ಬೆಳೆಯುವುದು ಬೇಡ, 60 ಟನ್ ಉತ್ಪಾದಕತೆಗೆ ತೆಗೆದುಕೊಂಡು ಹೋದರೂ 15 ಟನ್ ಸುಧಾರಣೆಯಾದರೆ, ಒಂದು ಟನ್‌ಗೆ ಎರಡು ಸಾವಿರ ರೂಪಾಯಿ ಬೆಲೆ ಎಂದರೂ ರೈತನ ಕೈಗೆ ಒಂದು ಹೆಕ್ಟೇರ್‌ಗೆ 30 ಸಾವಿರ ರೂಪಾಯಿ ಆದಾಯ ಬರುವಂತಹ ವಿಚಾರ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಇದು ತಳಿ ವ್ಯತ್ಯಾಸ ಇರುತ್ತದೆ.

ಶ್ರೀ ಕೃಷ್ಣ ಭೈರೇಗೌಡ:– ಹೌದು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಉದಾಹರಣೆಗೆ ಮಂಡ್ಯದಲ್ಲಿ 62, 175 ಬಿಟ್ಟರೆ, ಚಾಮರಾಜನಗರ ಅಥವಾ ಮಂಡ್ಯ ಆಗಬಹುದು, ತಳಿ ಮೇಲೆ ಜಾಸ್ತಿಯಾಗುತ್ತದೆ. ತಾವೇ ವಿಸಿ ಫಾರಂ ಬೆಳಗಾಂನಲ್ಲಿ ಮಾಡಿದ್ದಿರಿ. ಯಾವ್ಯಾವ ತಳಿ ಸಂಶೋಧನೆ ಮಾಡಿಕೊಟ್ಟಿದ್ದೀರಿ? ತಳಿ ಸಂಶೋಧನೆ ಮಾಡಿಕೊಟ್ಟರೆ ನಾವು ಮಾಡಬಹುದು.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಉಪಾಧ್ಯಕ್ಷರೆ, ಒಟ್ಟಾರೆ ಉತ್ಪಾದನೆ, ಯೀಲ್ಡ್, ಇಳುವರಿ, ಜಾಸ್ತಿ ಮಾಡುವುದಕ್ಕೆ ಅವಕಾಶವಿದೆಯೆನ್ನುವುದಕ್ಕೆ ನಮ್ಮ ರಾಜ್ಯದ ಎರಡು ವಲಯಗಳನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ. ಅದಕ್ಕೆ ಕಾರಣ ಏನೇ ಇರಬಹುದು, ಆದರೆ ಸುಧಾರಣೆ ಮಾಡುವುದಕ್ಕಂತೂ

ಅವಕಾಶ ಇದೆಯಲ್ಲಾ? ಅಲ್ಲಿ 80 ಟನ್ ತೆಗೆಯಬಹುದೆಂದರೆ, ನಾವು 80 ಟನ್ ಇಲ್ಲದಿದ್ದರೂ 60 ಟನ್ ಏಕೆ ತೆಗೆಯುವುದಕ್ಕೆ ಆಗುವುದಿಲ್ಲ? 60 ಟನ್ ತೆಗೆದರೆ ನಮಗೆ ಒಂದು ಎಕರೆಗೆ 30 ಸಾವಿರ ರೂ.ಗಳು extra ನಮ್ಮ ಕೈಗೆ ಬಂದರೆ ಬೇಡ ಎನ್ನುವುದಕ್ಕೆ ಆಗುತ್ತದಾ? ನಾವು ಅದಕ್ಕಿಂತ ರೈತರಿಗೆ ಇನ್ನು ಏನು ಮಾಡುವುದಕ್ಕೆ ಸಾಧ್ಯ? ಹಾಗೆ ನಮ್ಮ ಗುರಿ ಏನೆಂದರೆ, ಉತ್ಪಾದಕತೆಯನ್ನು ವೃದ್ಧಿ ಮಾಡುವುದರ ಮುಖಾಂತರವಾಗಿ ರೈತರ ಕೈಗೆ ಹೆಚ್ಚಿಗೆ ಆದಾಯ ಬರುವಂತೆ ನೋಡಿಕೊಳ್ಳುವುದು ನಮ್ಮ ಗುರಿಯಾಗಿದೆ. ಇದು ಬರೀ ಕಬ್ಬು ಬೆಳೆಗೆ ಮಾತ್ರ ಅಲ್ಲಿ, ಯಾವುದೇ ಬೆಳೆಯನ್ನು ತೆಗೆದುಕೊಳ್ಳಿ, ಭತ್ತವನ್ನು ತೆಗೆದುಕೊಂಡರೆ ನಮ್ಮಲ್ಲಿ ಒಂದು ಹೆಕ್ಟೇರ್‌ಗೆ 3 ಟನ್ ಉತ್ಪಾದಕತೆ ಇದ್ದರೆ, ಚೈನಾ ದೇಶದಲ್ಲಿ ಆರೂವರೆ ಟನ್ ಉತ್ಪಾದಕತೆ ಇದೆ. ನಮಗಿಂತ ಎರಡು ಪಟ್ಟು ಹೆಚ್ಚಿಗೆ ಉತ್ಪಾದನೆಯಾಗುತ್ತಿದೆ, ನಾವು ಎರಡು ಪಟ್ಟು ಬೇಡ, 50% cover ಆದರೆ ರೈತರಿಗೆ ತಾನೇ ತಾನಾಗಿ ಆದಾಯ ವೃದ್ಧಿಯಾಗುತ್ತದೆ. ಅದೇ ರೀತಿಯಾಗಿ ಗೋಧಿಯಲ್ಲೂ ನಮ್ಮಲ್ಲಿ 3 ಟನ್ ಉತ್ಪಾದಕತೆ ಇದ್ದರೆ, ಬೇರೆ ದೇಶಗಳಲ್ಲಿ 5 ಟನ್, 7 ಟನ್ ಉತ್ಪಾದಕತೆ ಇದೆ. ಕಬ್ಬು ಬೆಳೆಯಲ್ಲೂ ಅಷ್ಟೆ....

ಉಪಾಧ್ಯಕ್ಷರು:- ಈಗ 2 ಗಂಟೆಗೆ ಊಟಕ್ಕೆ ಹೋಗಬೇಕು, ತಾವು conclude ಮಾಡಿ ಬಿಡಿ.

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಎಲ್ಲರೂ ಸಹಕಾರ ಕೊಟ್ಟರೆ ಅಷ್ಟರಲ್ಲಿ ಮುಗಿಸುತ್ತೇನೆ. ನಾನು conclusion stageನಲ್ಲಿದ್ದೇನೆ.

ಉಪಾಧ್ಯಕ್ಷರು:- ಆಮೇಲೆ ಬೇಕಾದರೆ clarification ಕೇಳಿ, ಮೊದಲು ಅವರು ಮಾತನಾಡಿ ಮುಗಿಸಲಿ, let him conclude.

ಶ್ರೀ ವೈ.ಎಸ್.ವಿ. ದತ್ತ:- ಮಾನ್ಯ ಉಪಾಧ್ಯಕ್ಷರೆ, ನಮಗೆ ಸಮಾಧಾನ ಆಗಿದೆಯೋ, ಇಲ್ಲವೋ ಎನ್ನುವುದಾದರೂ ಹೇಳಬೇಕಲ್ಲಾ. .

ಉಪಾಧ್ಯಕ್ಷರು:- ಆಮೇಲೆ clarification ಕೇಳಿ.

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ದೇಶದಲ್ಲಿ ಕಬ್ಬು ಉತ್ಪಾದಕತೆ ಸರಾಸರಿ 30 ಟನ್ ಇದ್ದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ 120 ಟನ್ ಇದೆ. ನಮ್ಮಲ್ಲಿ ಮೆಕ್ಕೆ ಜೋಳ 2 ಟನ್ ಉತ್ಪಾದಕತೆ ಇದ್ದರೆ 5–8 ಟನ್ ಮೆಕ್ಕೆಜೋಳವನ್ನು ಉತ್ಪಾದನೆ ಮಾಡುವಂತಹ ದೇಶಗಳು ಇವೆ. ಅದೇ ರೀತಿಯಾಗಿ ನಾವು ಹತ್ತಿಯನ್ನು 540 ಕೆ.ಜಿ. ತೆಗೆದರೆ 2,000 ಕೆ.ಜಿ. ಉತ್ಪಾದನೆ ಮಾಡುವಂಥ ದೇಶಗಳು ಸಹ ಇವೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವು productivityಯನ್ನು ಹೆಚ್ಚಿಗೆ ಮಾಡಬೇಕಾಗಿದೆ. ಅದು ನಮ್ಮ ಇಲಾಖೆಯ ಮುಖ್ಯ ಗುರಿಯಾಗಿದೆ, ಮುಂದಿನ 4 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಕನಿಷ್ಠ 20% productivity ಜಾಸ್ತಿ ಮಾಡಿ, ಅದರಿಂದ ರೈತರಿಗೆ ಹೆಚ್ಚು ಅದಾಯ ಬರುವಂತೆ ನಾವು ನೋಡಿಕೊಳ್ಳಬೇಕೆಂಬ ಗುರಿಯನ್ನು ಹೊಂದಿದ್ದೇವೆ. ಅದಕ್ಕೆ ಪೂರಕವಾಗಿ ನಾವು seedsಗೆ, technology ಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೇವೆ. ಭೂ ಚೇತನ ಕಾರ್ಯಕ್ರಮ ಆರಂಭವಾಗಿತ್ತು, ಭೂಚೇತನ ಪ್ಲಸ್ ಎಂಬ ಕಾರ್ಯಕ್ರಮವನ್ನು ತೆಗೆದುಕೊಂಡು ಎಲ್ಲಾ technologyಗಳನ್ನು bundle ಮಾಡಿ, ರೈತರಿಗೆ comprehensive ಆಗಿ technology transfer ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದರ ಉದ್ದೇಶವೇನೆಂದರೆ 20% ಇಳುವರಿ ಸುಧಾರಣೆಯಾಗಬೇಕೆನ್ನುವಂಥದ್ದು. ಹಾಗಾಗಿ ಭೂ ಚೇತನ ಪ್ಲಸ್ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತೆ ಇದು ಏನಾಗಿದೆಯೆಂದರೆ, ಸರ್ಕಾರದ ಕೃಷಿ ಇಲಾಖೆಯನ್ನೇ ರೈತರು ನಂಬಿಕೊಂಡಿದ್ದರೆ, ಬಹುಶಃ ಒಮ್ಮೊಮ್ಮೆ ಅವರಿಗೆ ತಂತ್ರಜ್ಞಾನ ಸಿಗದೇ ಹೋಗಬಹುದು. ಖಾಸಗಿ ವಲಯದಲ್ಲಿ ಏನಾದರೂ ಒಳ್ಳೆಯ ತಂತ್ರಜ್ಞಾನವಿದ್ದರೆ ಅವರೂ ಸಹ ವಿಸ್ತರಣಾ ಚಟುವಟಿಕೆಯಲ್ಲಿ ಪ್ರಾಯೋಗಿಕವಾಗಿ ಅದು ಚೆನ್ನಾಗಿ ಇರುತ್ತದಾ, ನಮ್ಮದು ಚೆನ್ನಾಗಿ ಇರುತ್ತದಾ, ಎಂದು ಪ್ರಾಯೋಗಿಕವಾಗಿ ವಿಸ್ತರಣಾ ಚಟುವಟಿಕೆಯಲ್ಲಿ ಇತರರನ್ನು ಸಹ ತೊಡಗಿಸಿಕೊಂಡು ಅದರಿಂದ ರೈತರಿಗೆ ಅನುಕೂಲ ಆಗುವ ಕಾರ್ಯಕ್ರಮವನ್ನು ಸಹ ನಾವು ಹಮ್ಮಿಕೊಂಡಿದ್ದೇವೆ. ಅದೇ ರೀತಿಯಲ್ಲಿ technologyಗೆ ನಮ್ಮದು open mind ಇರಬೇಕಾಗುತ್ತದೆ. ನಾನು ಈ

ವಿಷಯವನ್ನು ಹಿಂದೆಯೂ ಸಹ ಹೇಳಿದ್ದೇನೆ. ನಾವು ತಂತ್ರಜ್ಞಾನ ತರುವಂಥ ಸಂದರ್ಭದಲ್ಲಿ ಅದರ ಬಗ್ಗೆ ಆನೇಕ ರೀತಿ ಉಲ್ಲೇಖನಗಳು ಆಗುತ್ತವೆ. ಮಾನ್ಯ ಜವಹರಲಾಲ್ ನೆಹರೂರವರು "Everything can wait, but not agriculture" ಎಂದು ಹೇಳಿದ್ದರು. ಕೃಷಿ ಬಂದಾಗ ಮುಂದೆ ಏನಾಗುತ್ತದೆ, ನಂತರ ಏನಾಗುತ್ತದೆ, ಈಗ ನಾವು ಇಲ್ಲಿ pollutionನಲ್ಲಿ ಎ.ಸಿ ಕಾರುಗಳಲ್ಲಿ ಓಡಾಡುತ್ತೇವೆ. ಅದೆಲ್ಲಾ environment pollution ಆಗುತ್ತಿದೆ. ಅದರಿಂದ ನಮಗೆ ಕ್ಯಾನ್ಸರ್ ಆಗುತ್ತಿದೆ, ನಾವು ಅದೆಲ್ಲವನ್ನು ಏಕೆ ತತ್‌ಕ್ಷಣ ನಿಲ್ಲಿಸುವುದಿಲ್ಲ? ಹೀಗಾಗಿ ಕೃಷಿ ವಿಚಾರ ಬಂದಾಗ ನಾವು ಸ್ವಲ್ಪ ಮುಕ್ತ ಮನಸ್ಸನ್ನು ಹೊಂದಿರಬೇಕಾಗಿರುತ್ತದೆ. ನಾವು ರೈತರಿಗೆ ತಂತ್ರಜ್ಞಾನವನ್ನು ತಲುಪಿಸಿದರೆ productivity ಯನ್ನು ಏನು ಹೆಚ್ಚು ಮಾಡಬೇಕೆಂದು ಇದ್ದೇವೆ, ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ನಮಗೆ productivity enhancement ನಮ್ಮ ಸರ್ಕಾರದ ಮುಖ್ಯ ಗುರಿ ಎಂದು ಹೇಳಬಯಸುತ್ತೇನೆ. ಅದಕ್ಕೆ ಬೇಕಾದ ಹಾಗೆ ಭೂ ಚೇತನ ಪ್ಲಸ್, ಪಿಪಿಪಿ ಮಾಡೆಲ್ extension ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಎರಡನೇ ವಿಚಾರ ಏನೆಂದರೆ, ನಮಗೆ ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಯವರು ಸೂಚನೆ ಕೊಟ್ಟಿರುವಂಥದ್ದು ಏನೆಂದರೆ, ಕೃಷಿ ಒಂದು ಕಷ್ಟದ ಪರಿಸ್ಥಿತಿಯಲ್ಲಿದ್ದರೆ ಅದರಲ್ಲೂ ಒಣ ಬೇಸಾಯ ತೀರಾ ಕಷ್ಟದ ಪರಿಸ್ಥಿತಿಯಲ್ಲಿರುವಂಥದ್ದು. ಒಣ ಬೇಸಾಯ ಮಳೆ ಆಧಾರಿತವಾದಂಥ ಒಣ ಬೇಸಾಯವಾಗಿದ್ದು, ಅದಕ್ಕೆ ಈ ವರ್ಷದ ಆಯವ್ಯಯದಲ್ಲಿ 500 ಕೋಟಿ ರೂ.ಗಳನ್ನು ಇಟ್ಟು, ಪ್ರತಿ ಹನಿ ನೀರನ್ನು ಹೇಗೆ ಸಂರಕ್ಷಣೆ ಮಾಡಿ, ಅವನಿಗೆ ಎರಡು ಎಕರೆ ಜಾಗವಿದ್ದರೆ, ಅದರಲ್ಲಿ ಎರಡು ಲಕ್ಷ ಲೀಟರ್ ನೀರನ್ನು store ಮಾಡಿ, ಒಂದು ಸಣ್ಣ poly house ಮಾಡಿ, ಅದರೊಳಗೆ ತರಕಾರಿಯೋ, ಏನಾದರೂ ಬೆಳೆ ಬೆಳೆದರೆ ಅವನು open fieldನಲ್ಲಿ ಬೆಳೆಯುವುದಕ್ಕಿಂತ ಮೂರು ಪಟ್ಟು, ನಾಲ್ಕು ಪಟ್ಟು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಕಾಲು ಎಕರೆ ಜಾಗದಲ್ಲಿ 2 ಲಕ್ಷ ನೀರನ್ನು ಸಂಗ್ರಹ ಮಾಡಿ poly house ಮಾಡಿ, ಯಾವ ರೀತಿಯಲ್ಲಿ ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕೆ ಆಗುತ್ತದೆನ್ನುವ ಬಗ್ಗೆ ಕೃಷಿ

ಭಾಗ್ಯ ಯೋಜನೆಯನ್ನು ತೆಗೆದುಕೊಂಡು ಬಂದಿರುವುದು. ನಾವು ಪ್ರತ್ಯೇಕವಾಗಿ ಯಾವ ರೈತರು ಒಣ ಬೇಸಾಯವನ್ನು ನಂಬಿಕೊಂಡು ಇವತ್ತು ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರ ನೆರವಿಗೋಸ್ಕರ ಈ ವರ್ಷ ಕೃಷಿ ಭಾಗ್ಯ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಈ ಬೇಡಿಕೆಯಲ್ಲಿ 500 ಕೋಟಿ ರೂ.ಗಳನ್ನು ಅದಕ್ಕೆ ಕಾದಿರಿಸಿರುವುದು. ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾವು ಎಲ್ಲರೂ ಸಹ ಒಣ ಬೇಸಾಯದ ಕಡೆಗೆ ಹೆಚ್ಚು ಗಮನ ಕೊಡಬೇಕು. ನಾವು ಅದರಲ್ಲಿ ಸುಸ್ಥಿರತೆಯನ್ನು ತರಬೇಕೆಂಬ ಗುರಿಯನ್ನು ಹೊಂದಿದ್ದೇವೆ. ಇನ್ನೊಂದು ವಿಷಯವಾಗಿ ನಾನು ಆಗಲೇ ಹೇಳಿದ ಹಾಗೆ ಪ್ರತಿಯೊಬ್ಬ ರೈತರಿಗೂ ಮಣ್ಣು ಪರೀಕ್ಷೆ ಮಾಡಿಸಬೇಕು, ಮುಂದಿನ 3 ವರ್ಷಗಳೊಳಗೆ ಮಣ್ಣು ಪರೀಕ್ಷೆಯನ್ನು ಮಾಡಿ, ಆ ಕಾರ್ಡ್ ಅನ್ನು ಅವರ ಕೈಗೆ ತಲುಪಿಸಬೇಕೆನ್ನುವಂಥದ್ದು, ಅದಕ್ಕೂ ಸಹ ಈ ಆಯವ್ಯಯದಲ್ಲಿ ನಾವು ಹಣವನ್ನು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದಲೂ ಸಹ 15 ಕೋಟಿ ರೂ.ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ನಾವು ಆದಷ್ಟು ಬೇರೆ ಬೇರೆ ಇಲಾಖೆಗಳೊಂದಿಗೆ ಸಮನ್ವಯತೆಯಿಂದ ಜೊತೆಗೂಡಿ ಏಕೆ ಕೆಲಸ ಮಾಡಬಾರದೆಂಬ ಮಾತನ್ನು ಹೇಳಿದ್ದಾರೆ. ಮುಂದಿನ ದಿವಸಗಳಲ್ಲಿ ಆದಷ್ಟು ಬೇರೆ ಇಲಾಖೆಗಳ ಜೊತೆಗೆ ಸೇರಿ ಕೆಲಸ ಮಾಡುತ್ತೇವೆ. ಇನ್ನು ಬಿತ್ತನೆ ಬೀಜಗಳ ಬಗ್ಗೆ ದೂರುಗಳು ಬಂದಾಗ Central Seed Act ಇದೆ, ಆದರೆ ಅದು ಸಮರ್ಪಕವಾಗಿಲ್ಲ. ಅದನ್ನು ಇಟ್ಟುಕೊಂಡು enforce ಮಾಡುವುದಕ್ಕೆ ಹೋದರೆ, ಅದರಲ್ಲಿ ಏನೂ ಸಿಗುತ್ತಿಲ್ಲ. ಅದಕ್ಕಾಗಿ ಈಗಾಗಲೇ ಕರಡು ತಯಾರು ಮಾಡಿದ್ದೇವೆ. ಅದನ್ನು ಸಾಧ್ಯವಾದರೆ ಈ ಸದನದಲ್ಲಿ, ಇಲ್ಲವೆಂದರೆ ಮುಂದಿನ ಅಧಿವೇಶನದಲ್ಲಿ Karnataka Seed Act ಅನ್ನು ತರುತ್ತಿದ್ದೇವೆ. ಅದನ್ನು ಆರಂಭಿಕವಾಗಿ cottonಗೆ ಪ್ರಯೋಗ ಮಾಡುತ್ತಿದ್ದೇವೆ. ನಮ್ಮದೇ ಆದಂಥ seed Act ಅನ್ನು ಇಟ್ಟುಕೊಂಡು ಯಾವುದಾದರೂ seed companyಗಳು ತಪ್ಪು ಮಾಡಿದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾನೂನನ್ನು ರಚನೆ ಮಾಡುತ್ತಿದ್ದೇವೆ. ಇಲ್ಲಿಯವರೆಗೂ ನಾವು Central Seed Act ಪ್ರಕಾರ ಮಾಡುವುದಕ್ಕೆ ಹೋದರೆ ನಮಗೆ it is not

enough ನಮಗೆ ಕೈಕಟ್ಟಿ ಹಾಕಿದ ಹಾಗೆ ಆಗುತ್ತದೆ. ಅದಕ್ಕೋಸ್ಕರ ನಮ್ಮದೇ ಆದಂಥ ಬೀಜ ಕಾಯಿದೆಯನ್ನು ನಾವು ತರುತ್ತಿದ್ದೇವೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇ ರೀತಿಯಲ್ಲಿ ಕಳಪೆ ಬೀಜ, ಗೊಬ್ಬರ ಬಗ್ಗೆಯೂ ಆನೇಕ ದೂರುಗಳಿವೆ. ಅದಕ್ಕೋಸ್ಕರ ಜಿಲ್ಲಾ ಮಟ್ಟದಲ್ಲಿ ಒಬ್ಬ ಕೃಷಿ ಸಹಾಯಕ ನಿರ್ದೇಶಕನ ನೇತೃತ್ವದಲ್ಲಿ ಪ್ರತಿ ಜಿಲ್ಲೆಯಲ್ಲೂ ಒಂದು vigilance cell ಅನ್ನೆ open ಮಾಡುತ್ತಿದ್ದೇವೆ. ಅವರ ಕೆಲಸ sample ತೆಗೆದುಕೊಂಡು test ಮಾಡುವುದು. ಇಷ್ಟು ದಿವಸ ಏನಾಗುತ್ತಿತ್ತು ಎಂದರೆ, ಬೇರೆ ಅಧಿಕಾರಿಗಳಿಗೆ ನೀವು ಇಷ್ಟು percentage sample ತೆಗೆದುಕೊಂಡು ಬೇರೆ ಕೆಲಸದ ಜೊತೆಗೆ ಇದನ್ನು ಮಾಡಬೇಕೆಂದು ಇತ್ತು. ಈಗ ಏನು ಮಾಡುತ್ತಿದ್ದೇವೆಂದರೆ ADA ಅನ್ನು ನೇಮಕ ಮಾಡಿ, ಆತನ ಜೊತೆಗೆ ಇಬ್ಬರು AOಗಳನ್ನು ಕೊಟ್ಟು, ಅವರಿಗೆ ಬೇರೆ ಕೆಲಸಗಳಿಲ್ಲ, ಅವರದು vigilance, monitoring, enforcement ಇದೇ ಕೆಲಸವಾಗಿದೆ. ಪ್ರತಿ ಜಿಲ್ಲೆಯಲ್ಲೂ ಸಹ ನಾವು vigilance cell ಅನ್ನು open ಮಾಡುತ್ತಿದ್ದೇವೆ. ಇದರಿಂದ ಕನಿಷ್ಠ ಕಳಪೆ ಮಾಡುವಂಥವರಿಗೆ ಎಚ್ಚರಿಕೆ ಕೊಟ್ಟ ಹಾಗೆ ಆಗುತ್ತದೆ, ಅವರು ತಪ್ಪು ಮಾಡಿದಾಗ, ಅವರನ್ನು ಶಿಕ್ಷೆಗೆ ಗುರಿ ಮಾಡುವುದಕ್ಕೆ vigilance cell ಇದ್ದರೆ ಅನುಕೂಲವಾಗುತ್ತದೆ. ಅದಕ್ಕಾಗಿ ನಾವು vigilance cell ಅನ್ನು ಮಾಡುತ್ತಿದ್ದೇವೆ. ಹಾಗೂ research and developmentಗೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವುದು ನಮ್ಮ ಗುರಿಯಾಗಿದೆ. ಇದೆಲ್ಲವನ್ನೂ ಮಾಡಿ, ಇದರ ಜೊತೆಗೆ post harvest, marketing ಕಡೆಗೆ ನಾವು ಗಮನ ಕೊಡಬೇಕೆಂದು ಈಗಾಗಲೇ ಕೃಷಿ ಮಾರುಕಟ್ಟೆ ಇಲಾಖೆಯವರು ಮಾರುಕಟ್ಟೆ ವ್ಯವಸ್ಥೆಯಲ್ಲಿ ಆನೇಕ ಬದಲಾವಣೆಗಳನ್ನು ತಂದಿದ್ದಾರೆ. ಪ್ರಾಯೋಗಿಕವಾಗಿ ಇದನ್ನು COPRA ಗೆ ಪ್ರಯೋಗ ಮಾಡಿದಾಗ, ತಮಗೆ ಗೊತ್ತಿದೆ. 2,000, 3,000 ರೂ.ಗಳ ಬೆಲೆ ಇರುತ್ತಿದ್ದ ಬೆಲೆ ಇವತ್ತು 11,000, 12,000 ರೂ.ಗಳಿಗೆ ತಲುಪಿದೆ. ಎಲ್ಲದರಲ್ಲೂ ಹಾಗೆ ಆಗುತ್ತದೆಂದು ಹೇಳುವುದಕ್ಕೆ ಅಗುವುದಿಲ್ಲ. ಆದರೆ ಪ್ರಯೋಗ ಯಶಸ್ವಿಯಾಗಿದೆ. ಹಾಗಾಗಿ APMCಗಳಿಗೆ ಅದನ್ನು ಇನ್ನಷ್ಟು ವಿಸ್ತರಿಸಿ ಹೆಚ್ಚಿಗೆ ರೈತರು ಬೆಳೆಯುವಂಥ ಪದಾರ್ಥಗಳಿಗೆ

ಮಾರುಕಟ್ಟೆಯನ್ನು ಸೃಷ್ಟಿ ಮಾಡುವಂಥ ಪ್ರಯತ್ನವನ್ನು ಸಹ ನಮ್ಮ ಸರ್ಕಾರ ಮಾಡುತ್ತಿದೆ ಎನ್ನುವಂಥ ವಿಚಾರವನ್ನು ಹೇಳುತ್ತೇನೆ. ಈ ವಿಷಯವಾಗಿ ಹಿರಿಯ ಸದಸ್ಯರು ಯುವಕ ಸದಸ್ಯರು ಆನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವೊಂದು ವಿಚಾರಗಳಿಗೆ ನನ್ನ ಹತ್ತಿರ ಮಾಹಿತಿ ಇದ್ದರೂ ಇಲ್ಲಿ specific ಆಗಿ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ, ಮಧ್ಯದಲ್ಲಿ ಸದಸ್ಯರು ಪ್ರವೇಶ ಮಾಡಿದ ಕಾರಣ ಸಮಯ ಜಾಸ್ತಿಯಾಗಿದ್ದರಿಂದ ಕೆಲವೊಂದು ಅಂಶಗಳು ಬಿಟ್ಟು ಹೋಗಿವೆ. ನಾವೆಲ್ಲರೂ ನಿರಂತರ ಸಂಪರ್ಕದಲ್ಲಿರುವುದರಿಂದ ಅವರೆಲ್ಲರ ಸಲಹೆಗಳನ್ನು ಇವತ್ತು ಅಷ್ಟೇ ಅಲ್ಲ, ಮುಂದೆಯೂ ಸಹ ಅವರ ಸಲಹೆಗಳನ್ನು ತೆಗೆದುಕೊಂಡು ಆ ಭಾವನೆ ಏನು ಇದೆ,

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಈಗ .. ..

ಶ್ರೀ ಕೃಷ್ಣ ಭೈರೇಗೌಡ:- ಒಂದೇ ನಿಮಿಷ, conclude ಮಾಡುತ್ತೇನೆ.

ಉಪಾಧ್ಯಕ್ಷರು:- Conclusion ಮಾಡಿ ಬಿಡಲಿ, ಆಮೇಲೆ clarification ಕೇಳಿ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ತೊಗರಿ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಅದಕ್ಕೆ ಉತ್ತರ ಸಿಕ್ಕಿಲ್ಲ.

ಶ್ರೀ ಕೃಷ್ಣ ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಏನಿದೆ, ಕೃಷಿಯಲ್ಲಿ ಸುಧಾರಣೆಯಾಗಬೇಕೆನ್ನುವಂಥದ್ದು, ಆಗುತ್ತಿರುವಂಥದ್ದು ಸಾಲದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನಗೆ ಅದರಲ್ಲಿ ಏನೂ ಮುಜುಗರವಿಲ್ಲ. ಕೃಷಿ ವಿಚಾರ, ರೈತರ ವಿಚಾರ ಬಂದಾಗ ಪಕ್ಷವೂ ಬೇಕಾಗಿಲ್ಲ, ವೈಯಕ್ತಿಕ ಒಣ ಪ್ರತಿಷ್ಠೆಯೂ ಬೇಕಾಗಿಲ್ಲ. ಸುಧಾರಣೆ ತರಬೇಕಾಗಿದೆ. ನಿಮ್ಮೆಲ್ಲರ ಸಹಕಾರ, ಸಲಹೆಗಳನ್ನು ತೆಗೆದುಕೊಂಡು ಸುಧಾರಣೆ ತರುವಂಥ ಪ್ರಾಮಾಣಿಕ ಪ್ರಯತ್ನವನ್ನಂತೂ ನಾವು ಖಂಡಿತವಾಗಿ ಮಾಡುತ್ತೇವೆ ಎಂದು ಹೇಳುತ್ತೇನೆ. ಆದರೆ ಯಾವುದೋ ಕಾರಣಕ್ಕೆ, ಕೃಷಿ ಭವಿಷ್ಯ ಏನು ಎಂದು ಹೇಳಿ ಹೇಳಿ, ಎಲ್ಲೋ ಒಂದು ಕಡೆ ಭವಿಷ್ಯದ ಬಗ್ಗೆ ನಾವು ರೈತರಲ್ಲಿ ಆತ್ಮಸ್ಥೈರ್ಯವನ್ನು ಕುಂದಿಸುವಂಥ ಕೆಲಸ ನಮ್ಮಿಂದ

ಆಗಬಾರದು. ರೈತರಿಗೆ ನಾವು ಆತ್ಮಸ್ಥೈರ್ಯವನ್ನು ತುಬುವಂಥ ಕೆಲಸವನ್ನು ಈ ಸದನ ಮಾಡಬೇಕು ಎಂದು ನಾನು ತಮ್ಮೆಲ್ಲರಲ್ಲೂ ಮನವಿ ಮಾಡುತ್ತೇನೆ. ನಿಮ್ಮ ನಿರಂತರ ಮಾರ್ಗದರ್ಶನವಿದ್ದರೆ ಇನ್ನಷ್ಟು ಸಕ್ರಿಯವಾಗಿ ಕೆಲಸ ಮಾಡುವಂಥ ಪ್ರಯತ್ನವನ್ನು ಮಾಡುತ್ತೇವೆ. ನಮಗೆ ಬೇಕಾದಂಥ ಎಲ್ಲಾ ಸಹಕಾರವನ್ನು ಸ್ವಾತಂತ್ರ್ಯವನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಕೃಷಿ ಅವರ ಆದ್ಯತಾ ವಲಯವಾಗಿದೆ. Result oriented ಆಗುವಂಥ ಏನೇ ಕಾರ್ಯಕ್ರಮವಿದ್ದರೂ ಅದಕ್ಕೆ ನಾನು ಸಹಕಾರ ಕೊಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಹಾಗಾಗಿ, ಅವರ ಮಾರ್ಗದರ್ಶನದಲ್ಲಿ, ನಿಮ್ಮ ಸಲಹೆಗಳನ್ನು ಪಡೆದುಕೊಂಡು ನಾವು ಇನ್ನಷ್ಟು ಸಕ್ರಿಯವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿ ಈ ಬೇಡಿಕೆಗಳಿಗೆ ತಾವು ಒಪ್ಪಿಗೆಯನ್ನು ಕೊಡಬೇಕು ಎಂದು ನಾನು ತಮ್ಮೆಲ್ಲರಲ್ಲೂ ಮನವಿ ಮಾಡಿ, ನನ್ನ ಉತ್ತರಕ್ಕೆ ವಿರಾಮ ಕೊಡುತ್ತೇನೆ, ಧನ್ಯವಾದಗಳು.

ಉಪಾಧ್ಯಕ್ಷರು:- ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಶಿವರಾಜ್ ಎಸ್. ತಂಗಡಗಿಯವರು ಈ ದಿನ ಮಧ್ಯಾಹ್ನ ಎರಡು ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಭೋಜನ ವಿರಾಮಕ್ಕಾಗಿ ಸದನವು ಮಧ್ಯಾಹ್ನ 2.02 ಗಂಟೆಗೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

ಸದನವು ಪುನಃ ಮಧ್ಯಾಹ್ನ 3 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.
ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು

ಅಧ್ಯಕ್ಷರು:– ಈಗ ತೋಟಗಾರಿಕೆ ಸಚಿವರಿಂದ ಉತ್ತರ.

ಶ್ರೀ ಬಿ.ಆರ್. ಪಾಟೀಲ್:– ಊಟವಾದ ಮೇಲೆ clarification ಕೇಳಿ ಎಂದು ಹೇಳಿದ್ದಿರಿ.

ಅಧ್ಯಕ್ಷರು:– ಆಮೇಲೆ ಒಟ್ಟಿಗೆ ತೆಗೆದುಕೊಳ್ಳೋಣ. ಏಕೆಂದರೆ, demand ಅನ್ನು ಒಟ್ಟಿಗೇ move ಮಾಡಿರುವುದರಿಂದ ಒಟ್ಟಿಗೆ reply ಕೊಟ್ಟು ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು:– ಹಾಗಲ್ಲ. ಎರಡೂ ಬೇಡಿಕೆಗಳನ್ನು ಒಟ್ಟಿಗೇ ಚರ್ಚೆಗೆ ತೆಗೆದುಕೊಂಡಿದ್ದೇವೆ. ಎರಡಕ್ಕೂ ಉತ್ತರ ತೆಗೆದುಕೊಂಡು ಕೇಳೋಣ. ಕೃಷಿ ಸಚಿವರು ಉತ್ತರ ಹೇಗಿತ್ತು?

ವಿತ್ತೀಯ ಕಾರ್ಯಕಲಾಪ

2014–15ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅನುದಾನ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು(ಮುಂದುವರಿದುದು)

ಶ್ರೀ ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳಲ್ಲಿ ನಮ್ಮ ತೋಟಗಾರಿಕಾ ಇಲಾಖೆಯ ಬೇಡಿಕೆಗಳ ಮೇಲೆ ಮಾನ್ಯ ಶಾಸಕ ಮಿತ್ರರು ತುಂಬಾ ಉತ್ತಮವಾದ ಚರ್ಚೆಗಳನ್ನು ಮಾಡಿ, ಅನೇಕ ಸಮಹೆಗಳನ್ನು ಕೊಟ್ಟಿರುತ್ತಾರೆ. ಚರ್ಚೆಯಲ್ಲಿ ಭಾಗವಹಿಸಿದ ಮಿತ್ರರಾದ ಬಸವರಾಜ ಬೊಮ್ಮಾಯಿ, ರಮೇಶ್‌ಕುಮಾರ್, ಪುಟ್ಟಣ್ಣಯ್ಯ, ಬಿ.ಆರ್. ಪಾಟೀಲ್. ಗೋವಿಂದ ಕಾರಜೋಳ, ಜಿ.ಟಿ. ದೇವೇಗೌಡ, ಕೃಷ್ಣಪ್ಪ, ಶಿವಲಿಂಗೇಗೌಡ, ಜೆ.ಟಿ. ಪಾಟೀಲ್, ಪ್ರಸನ್ನಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಟಿ. ರವಿ ಮತ್ತು ಇತರರು ಕೂಡ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇವರೆಲ್ಲರಿಗೂ ಕೂಡ ನಾನು ಮೊಟ್ಟಮೊದಲನೆಯದಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. 2014–15ನೇ